ಕನ್ನಡ ಚಲನಚಿತ್ರ-75-ಅಮೃತಮಹೋತ್ಸವ



ಕನ್ನಡ

ಚಿತ್ರರಂಗ-ಚಳುವಳಿ

ಲೇಖಕರು : ಎಸ್. ಆನಂದರಾಮ ರಾವ್



ಕೆಚ್ಚೆದೆಯ
ಹೋರಾಟಗಾರರು

ಸಂಪಾದಕ : ಗೌರಿ ಸುಂದರ್

ಸುಂದರ ಪ್ರಕಾಶನ, ಬೆಂಗಳೂರು – 560 019

ಚಿತ್ರರಂಗದ ದಿಗ್ಗಜರು
ಕನ್ನಡ ಚಲನಚಿತ್ರ - 75 ಅಮೃತ ಮಹೋತ್ಸವ

ಕನ್ನಡ
ಚಿತ್ರರಂಗ – ಚಳುವಳಿ

ಲೇಖಕರು
ಎನ್. ಆನಂದ ರಾಮರಾವ್

ಸಂಪಾದಕ
ಗೌರಿ ಸುಂದರ್

ಸುಂದರ ಪ್ರಕಾಶನ
ಚಿತ್ರಶ್ರೀ, # 43, ಕಲಾಮಂದಿರ, ಅ.ನ.ಸು. ರಸ್ತೆ, 5ನೇ ತಿರುವು
ಹನುಮಂತನಗರ, ಬೆಂಗಳೂರು – 560 019.

KANNADA CHITRARANGA-CHALUVALI: Written by **N. Ananda Ramarao.**

Publisher: **Sunadara Prakashana,** 'Chitrasri', # 43, Kalamandir, A.N.S. Road, Hanumantha Nagar, Bangalore - 560 019. Ph: 080 - 65623165, 92431 24699

Editor	:	**Gauri Sunder**
©	:	**Author**
First Impression	:	**2009**
Pages	:	**104**
Paper	:	**70 gsm Maplitho**
Price	:	**Rs. 80/-**

ಸಂಪಾದಕ	:	ಗೌರಿ ಸುಂದರ್
©	:	ಲೇಖಕರದು
ಮೊದಲ ಮುದ್ರಣ	:	2009
ಪುಟಗಳು	:	104
ಬೆಲೆ	:	ರೂ. 80/-
ಕಾಗದ	:	70 ಜಿ.ಎಸ್.ಎಂ. ಮ್ಯಾಪ್ಲಿತೊ
ಮುಖಪುಟ	:	ಮಧುಸೂದನ್
ಡಿ.ಟಿ.ಪಿ.	:	ಮಂಗಲ ಗಣೇಶ್, 99010 93911
ಪ್ರಕಾಶಕರು	:	ಸುಂದರ ಪ್ರಕಾಶನ 'ಚಿತ್ರಶ್ರೀ', ಕಲಾಮಂದಿರ, ಅ.ನ.ಸು. ರಸ್ತೆ, ಹನುಮಂತನಗರ, ಬೆಂಗಳೂರು - 560 019. ದೂರವಾಣಿ: 080 - 65623165

ಮುದ್ರಣ :
ನಂದಿ ಪ್ರೋಸೆಸ್
ತ್ಯಾಗರಾಜನಗರ, ಬೆಂಗಳೂರು-28.
ದೂ: 26772292, 26766242

ಸುಂದರ ಪ್ರಕಾಶನದ ಗೌರವಾನ್ವಿತ ಸಲಹೆಗಾರರು

ಪ್ರೊ. ಜಿ. ವೆಂಕಟಸುಬ್ಬಯ್ಯ
ಪ್ರೊ. ಎಲ್.ಎಸ್. ಶೇಷಗಿರಿ ರಾವ್
ಶ್ರೀ ವಿಶ್ವೇಶ್ವರ ಭಟ್
ಶ್ರೀ ವಿ.ಎನ್. ಸುಬ್ಬರಾವ್
ಡಾ. ಚಂದ್ರಶೇಖರ ಕಂಬಾರ
ಶ್ರೀ ಸಿ.ಆರ್. ಸಿಂಹ
ಪ್ರೊ. ಕೆ.ಇ. ರಾಧಾಕೃಷ್ಣ
ಶ್ರೀ ಎಚ್.ಜಿ. ಸೋಮಶೇಖರ ರಾವ್
ಶ್ರೀ ಕೆ.ಎಸ್.ಎಲ್. ಸ್ವಾಮಿ (ರವೀ)
ಶ್ರೀಮತಿ ಇಂದಿರಾ ಸುಂದರ್

ಸಂಪಾದಕ ಮಂಡಳಿ

ಗೌರವ ಅಧ್ಯಕ್ಷರು
ಶ್ರೀ ವಿ.ಎನ್. ಸುಬ್ಬರಾವ್

ಸಂಪಾದಕರು
ಗೌರಿ ಸುಂದರ್

ಸದಸ್ಯರು

ಶ್ರೀ ಎಂ.ಎ. ವೆಂಕಟೇಶ್
ಶ್ರೀ ಎನ್.ಎಸ್. ಶ್ರೀಧರಮೂರ್ತಿ
ಶ್ರೀ ಎ.ಎಸ್. ಮೂರ್ತಿ
ಶ್ರೀ ಜಗನ್ನಾಥ ಬಹುಳೆ
ಶ್ರೀ ಎನ್. ಆನಂದರಾಮರಾವ್
ಶ್ರೀಮತಿ ಇಂದಿರಾ ಸುಂದರ್

ಛಾಯಾಗ್ರಾಹಕರು

ಶ್ರೀ ಡಿ.ಸಿ. ನಾಗೇಶ್
ಶ್ರೀ ಕೆ.ಎನ್. ನಾಗೇಶಕುಮಾರ್
ಶ್ರೀ ಮನು

ಚಳುವಳಿಯಿಂದ ಬಂದ ಬಳುವಳಿ

ಸುಂದರ ಪ್ರಕಾಶನದ ಸಲಹೆಗಾರರಲ್ಲೊಬ್ಬರಾದ ಶ್ರೀ ಎನ್. ಆನಂದ ರಾಮರಾವ್ ಬಳಿ ಕೂತಾಗಲೆಲ್ಲಾ ಒಂದಲ್ಲ ಒಂದು ವಿಷಯ ಹೊರಗೆಡವುತ್ತಿರುತ್ತಾರೆ. ಅವು ಆಪ್ಯಾಯಮಾನವಾಗಿಯೂ ರೋಚಕವಾಗಿಯೂ ಇರುತ್ತವೆ. ಘಟನೆಗಳ ಸರಮಾಲೆಯನ್ನು ಅಚ್ಚುಕಟ್ಟಾಗಿ ಹೇಳುವುದರಲ್ಲಿ ಪ್ರವೀಣರು ಶ್ರೀ ರಾವ್.

ಅಮೃತ ಮಹೋತ್ಸವ–75 ಆಚರಿಸುತ್ತಿರುವ ಚಿತ್ರರಂಗದ ರೂಪುರೇಶೆಗಳನ್ನು ಮಂಥಿಸುತ್ತಿದ್ದಾಗ ಹೊಳೆದಿದ್ದ ಮತ್ತು ಈ ವಿಷಯ ಪುಸ್ತಕದ ಓದುಗರಿಗೆ ತಲುಪಲೇ ಬೇಕು ಎಂಬ ನಿಟ್ಟಿನಲ್ಲಿ 'ಕನ್ನಡ ಚಿತ್ರರಂಗ – ಚಳುವಳಿ' ಕೃತಿ ಹೊರಬರುತ್ತಿದೆ. ಸಾಹಿತ್ಯ ಲೋಕದ ಅತಿರಥ ಮಹಾರಥರಲ್ಲದೆ ಚಿತ್ರರಂಗದ ದಿಗ್ಗಜರೂ ಈ ಸ್ಮರಣೀಯ ಚಳುವಳಿಯಲ್ಲಿ ಭಾಗವಹಿಸಿದ್ದು – ಭಾಗವಹಿಸುತ್ತಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ.

ಅನಕೃ, ತರಾಸು, ಕಣಗಾಲ್ ಪ್ರಭಾಕರಶಾಸ್ತ್ರಿ, ಮ. ರಾಮಮೂರ್ತಿ, ವಾಟಾಳ್ ನಾಗರಾಜ್, ನಾರಾಯಣಕುಮಾರ್, ನಾಡಿಗೇರ ಕೃಷ್ಣರಾಯರು, ಬೀಚಿ, ಎಂ. ಚಿದಾನಂದ ಮೂರ್ತಿ, ಎಲ್.ಎಸ್. ಶೇಷಗಿರಿ ರಾವ್, ಡಾ. ರಾಜಕುಮಾರ್ ಹೀಗೆ ಹತ್ತು ಹಲವಾರು ಮಂದಿಯ ಸತತ ಪ್ರಯತ್ನದಿಂದಾಗಿ ತಮಿಳು–ತೆಲುಗು ಭಾಷಿಕರು ಹರಡಿಕೊಂಡು, ಹಮ್ಮಿಕೊಂಡು ಕನ್ನಡ ಮೂಲೆಗುಂಪಾಗುವ ಸಾಧ್ಯತೆಯ ಸಮಯದಲ್ಲಿ ಕನ್ನಡದ ಡಂಗುರ ಸಾರಿ, ತನು ಮನ ಧನ ಸಹಾಯದಿಂದ, ಕಾಯಾ ವಾಚಾ ಮನಸಾ ದುಡಿದು ಕನ್ನಡವನ್ನು, ಸಾಹಿತ್ಯವನ್ನು, ಚಿತ್ರರಂಗವನ್ನು ಉಚ್ಛ್ರಾಯ ಸ್ಥಿತಿಗೆ ತಂದ ಕೀರ್ತಿ ಈ ಕನ್ನಡ ಪ್ರೇಮಿಗಳಿಗೆ ಸಲ್ಲುತ್ತದೆ.

ಅಂದು ಚಳುವಳಿಯ ಬೀಜ ನೆಟ್ಟಿದ್ದು, ಇಂದು ಇದು ಹೆಮ್ಮರವಾಗಿ ಬೆಳೆದು ಕನ್ನಡಕ್ಕೆ ರಾಷ್ಟ್ರೀಯ ಸ್ಥಾನಮಾನ ದೊರೆತಿರುವುದು ಪ್ರತಿಯೊಬ್ಬ ಕನ್ನಡಿಗನೂ ಹೆಮ್ಮೆಪಡುವಂಥ ವಿಷಯವಾಗಿದೆ. ಇಂತಹ ನೂರಾರು ಕಾರ್ಯಕರ್ತರ ನಡುವೆ ಇದ್ದು, ಹೋರಾಡಿ ಕನ್ನಡದ ಆಗು ಹೋಗುಗಳ ಬಗ್ಗೆ ಅತೀವ ಕಾಳಜಿ ವಹಿಸಿರುವ ಚಿತ್ರಸಾಹಿತಿ ಶ್ರೀ ಸಿ.ವಿ. ಶಿವಶಂಕರ್, ನಾಟಕಕಾರ ಶ್ರೀ ಎ.ಎಸ್. ಮೂರ್ತಿ ಅವರಿಂದ ಸಾಕಷ್ಟು ವಿಷಯ ಸಂಗ್ರಹಿಸಿ ಇದಕ್ಕೊಂದು ರೂಪ ನೀಡಿದ್ದಾರೆ ಶ್ರೀ ಎನ್. ಆನಂದ ರಾಮರಾವ್. ಇವರಿಗೆಲ್ಲಾ ಸುಂದರ ಪ್ರಕಾಶನದ ನಮನಗಳು.

– ಗೌರಿ ಸುಂದರ್

ಕೃತಿ ಕುರಿತು ಹೃದಯದಿಂದ ಬಂದ ಮೆಚ್ಚುಗೆ ಮಾತು

ಸುಂದರ ಪ್ರಕಾಶನದ ಶ್ರೀಮಾನ್ ಗೌರಿ ಸುಂದರ್‌ರವರು ಕನ್ನಡ ಚಿತ್ರರಂಗದ ಅಮೃತ ಮಹೋತ್ಸವದ ನೆನಪಾಗಿ ಚಿತ್ರರಂಗದ ಗಣ್ಯರನ್ನು ಕುರಿತಾದ ಪುಸ್ತಕಗಳನ್ನು ಪ್ರಕಟಿಸುವ ದೀಕ್ಷೆ ಕೈಗೊಂಡು ಈಗಾಗಲೇ 50ಕ್ಕೂ ಹೆಚ್ಚು ಪುಸ್ತಕಗಳನ್ನು ಕನ್ನಡ ಚಿತ್ರರಸಿಕರಿಗೆ, ಸಾಹಿತ್ಯ ಪ್ರೇಮಿಗಳಿಗೆ ನೀಡಿದ್ದಾರೆ. ಶ್ರೀಮಾನ್ ಎನ್. ಆನಂದ ರಾಮರಾವ್‌ರವರು ಸುಂದರ ಪ್ರಕಾಶನಕ್ಕಾಗಿ ರಚಿಸಿರುವ 'ಕನ್ನಡ ಚಿತ್ರರಂಗ-ಚಳುವಳಿ' ಕುರಿತಾದ ಕೃತಿಯ ಬಗೆಗೆ ಒಂದೆರಡು ಪಂಕ್ತಿಯನ್ನು ಬರೆದುಕೊಡಿ ಎಂದು ನನ್ನನ್ನು ಕೇಳಿದರು. ಶ್ರೀಮಾನ್ ಗೌರಿ ಸುಂದರ್‌ರವರು ನನಗೆ ಈ ಸದವಕಾಶ ನೀಡಿದ್ದಕ್ಕಾಗಿ ನಾನು ಅವರನ್ನು ಹೃದಯಪೂರ್ವಕ ಅಭಿನಂದಿಸಿ ನನ್ನ ಚಿತ್ರರಂಗದ ಹಾಗೂ ಕನ್ನಡ ಚಳುವಳಿಯ ಹೋರಾಟವನ್ನು ಗೌರಿ ಸುಂದರ್ ಗುರ್ತಿಸಿರುವುದಕ್ಕಾಗಿ ಸಂತೋಷಪಟ್ಟು ಈ 'ಕನ್ನಡ ಚಿತ್ರರಂಗ ಮತ್ತು ಚಳುವಳಿ' ಕೃತಿಯ ಕುರಿತು ನಾಲ್ಕು ಪಂಕ್ತಿಯನ್ನು ಬರೆದಿರುತ್ತೇನೆ.

ಕನ್ನಡ ಚಿತ್ರರಂಗವಾಗಲೀ ಕನ್ನಡ ಚಳುವಳಿಯಾಗಲೀ ವರ್ಣನೆಗೆ, ಬರವಣಿಗೆಗಷ್ಟೇ ಸೀಮಿತವಾದ ರಂಗವಲ್ಲ. ಅದರ ಆಳವನ್ನು, ವಿಸ್ತಾರವನ್ನು ಅಳೆಯುತ್ತಾ ಹೋಗುವುದು ಅಸಾಧ್ಯವಾದ ಕಾರ್ಯವೇ ಆಗುತ್ತದೆ. ಅದರಲ್ಲಿ ನೋವುಗಳನ್ನು ಅನುಭವಿಸಿದವರು, ಗುರಿ ಸಾಧನೆಗಾಗಿ ಶ್ರಮಿಸಿದವರು ಇಷ್ಟೇ ಜನ ಎಂದು ಹೇಳುವುದು ಕಷ್ಟಸಾಧ್ಯವಾದ ಕಾರ್ಯ. ಶ್ರೀಮಾನ್ ಎನ್. ಆನಂದ ರಾಮರಾವ್‌ರವರು ಅವರದೇ ಆದ ಸುಲೋಚನದಿಂದ ಕನ್ನಡ ಚಳುವಳಿಯನ್ನೂ ಕನ್ನಡ ಚಿತ್ರರಂಗವನ್ನೂ ಕ್ಲೋಸಪ್‌ನಲ್ಲೂ ಲಾಂಗ್‌ಷಾಟ್‌ಗಳಲ್ಲೂ ಕಂಡು ಅದನ್ನು ಯಥಾವತ್ತಾಗಿ ಓದುಗರಿಗೆ ತಿಳಿಸಿದ್ದಾರೆ.

ಚಿತ್ರರಂಗದ ಪ್ರಾರಂಭದ ದಿನಗಳು ಕನ್ನಡ ಚಿತ್ರರಂಗಕ್ಕೆ ನೀಡಿದ ಬೆಳಕು ಹಾಗೂ ಆ ಬೆಳಕಿನಲ್ಲಿ ಕನ್ನಡ ಮೂಕೀ ಚಿತ್ರಗಳೂ, ಕನ್ನಡದ ಮೊದಲ ವಾಕ್ಚಿತ್ರಗಳು ಹೇಗೆ ರೂಪುಗೊಂಡವು? ಆ ಚಿತ್ರದ ನಿರ್ಮಾತೃಗಳ ಕನ್ನಡಾಭಿಮಾನ ಹೇಗಿತ್ತು?

ಪ್ರೇಕ್ಷಕರು ಆ ಚಿತ್ರಗಳನ್ನು ಹೇಗೆ ಸ್ವಾಗತಿಸಿದರು? ಎಂಬುದರ ಬಗೆಗೆ ರಸವತ್ತಾಗಿ ಬರೆದಿದ್ದಾರೆ. ಕನ್ನಡ ಚಿತ್ರಗಳು ಮಾತನಾಡಿದ್ದು ಹೇಗೆ? ಅದರಲ್ಲಿ ಮಾತನಾಡಿದವರು ಎಂಥವರು? ಅವರ ಕಲಾಪ್ರತಿಭೆ ಅವರನ್ನು ಕನ್ನಡದಲ್ಲಿ ಮಾತನಾಡಿಸಿದ ಸಾಹಿತಿಗಳು, ನಿರ್ದೇಶಕರು ಮಾಡಿದ ಸಾಹಸ, ಕನ್ನಡ ಚಿತ್ರರಂಗದ ಗಣಪತಿ ಪೂಜೆಯನ್ನೇ ನೋಡಿಲ್ಲದವರಿಗೆ ಈ ಕನ್ನಡ ಚಿತ್ರರಂಗದ ಪರಿಚಯ ಸ್ವಾರಸ್ಯವಾಗಿದೆ.

ಇನ್ನು ಕನ್ನಡ ಚಳುವಳಿಯ ಬಗೆಗೆ ಅದು ಪ್ರಾರಂಭವಾದ ಉದ್ದೇಶ, ಅದು ಬೆಳೆದು ಬಂದ ದಾರಿ, ಕನ್ನಡ ಚಳುವಳಿಯಿಂದ ಕನ್ನಡ ಚಿತ್ರರಂಗಕ್ಕೆ ಆದ ಲಾಭ, ಕನ್ನಡಿಗರಲ್ಲಿ ಮಾತೃಭಾಷೆಯ ಬಗೆಗೆ ಉಂಟಾದ ಜಾಗೃತಿ –ಇವೆಲ್ಲವೂ ಕ್ಲೋಸಪ್‌ನಲ್ಲೇ ಕಾಣುತ್ತದೆ. ಚಳುವಳಿಯ ನೇತಾರರಾಗಿದ್ದ ಅ.ನ. ಕೃಷ್ಣರಾಯರು, ಮ. ರಾಮಮೂರ್ತಿಗಳು ಕಟ್ಟಿದ ಕಂಕಣವನ್ನು ವಿಷದವಾಗಿ ವರ್ಣಿಸಲಾಗಿದೆ. ಅವರುಗಳ ನಂತರ ಕನ್ನಡ ಚಳುವಳಿಯಲ್ಲಿ ಧುಮುಕಿದ ವಾಟಾಳ್ ನಾಗರಾಜ್‌ರವರು, ಜಿ. ನಾರಾಯಣಕುಮಾರರು, ಸಾ.ಕೃ. ಸಂಪಂಗಿ, ಸಂಜೀವಪ್ಪ, ಸೋಸಲೆ ಜವರಯ್ಯ, ಗೋವಿಂದಹಳ್ಳಿ ದೇವೇಗೌಡರು, ಪ್ರಭಾಕರ ರೆಡ್ಡಿ, ಸಿ.ಕೆ. ರಾಮೇಗೌಡರು – ಮೊದಲಾದವರ ಹೆಸರುಗಳು, ಅವರ ಅವಿರತ ಹೋರಾಟ ಸಂಕ್ಷಿಪ್ತವಾಗಿದೆ.

ಅ.ನ. ಕೃಷ್ಣರಾಯರು ಬೀದಿಗೆ ತಂದು ನಿಲ್ಲಿಸಿದ ಕನ್ನಡ ರಥವನ್ನು ಮುನ್ನಡೆಸುತ್ತಾ ಇವರೆಲ್ಲರೂ ಅನೇಕ ಕನ್ನಡ ಭಾಷಾಭಿಮಾನಿ ಯುವಕರ ಬಲದಿಂದ ಕನ್ನಡ ಚಿತ್ರರಂಗದಲ್ಲಿ ಹಾಗೂ ಅನ್ಯಭಾಷಿಕರಲ್ಲಿ ಕನ್ನಡಾಭಿಮಾನ ಮೂಡಲು ಕಾರಣವಾಯಿತು ಎಂಬುದನ್ನು ವಿವರಿಸಿದ್ದಾರೆ. ಅವರೇ ಹೇಳುವಂತೆ ಚಳುವಳಿಯಲ್ಲಿ ತೊಡಗಿಸಿ ಕೊಂಡವರ ಹೋರಾಟಗಳನ್ನು ಸಂಕ್ಷಿಪ್ತವಾಗಿ ಬರೆದು ಚಳುವಳಿಗಳಿಂದ ಕನ್ನಡ ಚಿತ್ರರಂಗದವರು ಪಡೆದುಕೊಂಡ ಲಾಭವನ್ನು, ಚಳುವಳಿಗಳಣ್ನು ತಾತ್ಸಾರ ಮಾಡಿದ ಸಂದರ್ಭಗಳನ್ನು ಸಂಕ್ಷಿಪ್ತವಾಗಿಯೇ ಬರೆದಿದ್ದಾರೆ.

ಸಾ.ರಾ. ಗೋವಿಂದುರವರು ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಮೂಲಕ ಮಾಡಿದ ಚಳುವಳಿ, ವಾಟಾಳ್ ನಾಗರಾಜರು ಮಾಡಿದ ಚಳುವಳಿ ದೊಡ್ಡ ಪ್ರಮಾಣದ ಚಳುವಳಿಗಳೇ ಆಗಿದ್ದುದರಿಂದ ವಿಸ್ತಾರವಾಗಿ ಈ ಕೃತಿಯಲ್ಲಿ ಮೂಡಿಸಲು ಆಗಿಲ್ಲ ಎಂಬುದನ್ನು ಲೇಖಕರೇ ಹೇಳಿದ್ದಾರೆ. ಅದು ಸತ್ಯವೂ ಹೌದು. ಅನೇಕ ಯುವಕರು ಕೂಡಿ ನಡೆಸಿದ ಚಳುವಳಿಯನ್ನು ಇಷ್ಟೇ ಎಂದು ಬರೆಯಲು ಸಾಧ್ಯವಾಗುವುದಿಲ್ಲವಾದ್ದರಿಂದ ಅವರು ಕೆಲವನ್ನು ಮಾತ್ರ ಕನ್ನಡ ಚಳುವಳಿ ಪ್ರತ್ಯಕ್ಷವಾಗಿ ಹೇಗೆ ಕನ್ನಡ ಚಿತ್ರರಂಗಕ್ಕೆ ಬೆಂಬಲ ನೀಡಿತು ಎಂಬುದನ್ನು ವಿವರಿಸಿದ್ದಾರೆ.

ಎಲ್ಲಕ್ಕೂ ಹೆಚ್ಚಾಗಿ ಕನ್ನಡ ಚಿತ್ರರಂಗದ ಧ್ರುವತಾರೆ ಡಾ. ರಾಜಕುಮಾರರು ಗೋಕಾಕ್ ಚಳುವಳಿಯಲ್ಲಿ ಬೀದಿಗಿಳಿದು ಮಾಡಿದ ಹೋರಾಟದ ಸಮಗ್ರ ಚಿತ್ರಣವಿಲ್ಲಿದೆ. ಗುಂಡೂರಾಯರ ಸರ್ಕಾರಕ್ಕೇ ಸವಾಲೆಸೆದು ಕನ್ನಡ ಭಾಷೆಯ ಉಳಿವಿಗಾಗಿ ಸರ್ಕಾರ ದೀಕ್ಷೆ ತೊಡಬೇಕೆಂದು ಡಾ. ರಾಜಕುಮಾರರ ನೇತೃತ್ವ ಸಾರಿದ ಕನ್ನಡ ಸಂದೇಶ ಈ ಕೃತಿಯ ಹೈಲೈಟ್ ಆಗಿದೆ ಎಂದು ಹೇಳಲು ಹೆಮ್ಮೆ ಪಡುತ್ತೇನೆ.

ಕನ್ನಡಿಗರು ಕನ್ನಡ ಚಿತ್ರರಂಗ, ಕನ್ನಡ ಚಳುವಳಿ ಬಗ್ಗೆ ಅರಿವು ಮೂಡಿಸಿಕೊಂಡರು ಎಂಬುದು ಇತಿಹಾಸವಾಗಿ ನಿಲ್ಲುವುದು ಎಂದು ಲೇಖಕರು ಭರವಸೆ ನೀಡಿದ್ದಾರೆ. ಧನ್ಯವಾದಗಳು.

– ಸಿ.ವಿ. ಶಿವಶಂಕರ್
ಚಿತ್ರ ಸಾಹಿತಿ

ಲೇಖಕರ ಮಾತು

ಕನ್ನಡ ಚಿತ್ರರಂಗ ತನ್ನ ಅಮೃತ ಮಹೋತ್ಸವವನ್ನು ಆಚರಿಸುವ ಸಂದರ್ಭದ ಸವಿನೆನಪಿನಲ್ಲಿ ಸುಂದರ ಪ್ರಕಾಶನದ ಶ್ರೀ ಗೌರಿಸುಂದರ್‌ರವರು ಚಿತ್ರರಂಗಕ್ಕೆ ಸಂಬಂಧಪಟ್ಟವರ ಬಗೆಗೆ 50 ಪುಸ್ತಕಗಳನ್ನು ರಚಿಸಿ ಪ್ರಕಾಶನಗೊಳಿಸುವ ಯೋಜನೆಯನ್ನು ರೂಪಿಸಿದ್ದಾರೆ. ಈ ಪುಸ್ತಕಮಾಲೆಗೆ ನನ್ನನ್ನು ಒಂದು ಪುಸ್ತಕವನ್ನು ರಚಿಸುವಂತೆ ಪ್ರೇರೇಪಿಸಿದರು. ಆ ಬಗ್ಗೆಯೇ ನಾನು ಯೋಚನೆ ಮಾಡುತ್ತಿದ್ದಾಗ ಕನ್ನಡ ಚಳುವಳಿ ನಾಯಕರಾದ ಶ್ರೀ ವಾಟಾಳ್ ನಾಗರಾಜ್ ಅವರು ನಡೆಸಿದ ಪ್ರದರ್ಶನದತ್ತದ ಸುದ್ದಿಯ ಕಡೆ ನನ್ನ ಗಮನ ಸೆಳೆಯಿತು.

"ಚಿತ್ರಮಂದಿರಗಳಲ್ಲಿ ಕನ್ನಡ ಚಲನಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು, ಕನ್ನಡ ಚಿತ್ರಗಳಿಗೆ ಪ್ರಾಧಾನ್ಯತೆ ಕೊಡಬೇಕು" ಎಂದು 1962ರ ಸೆಪ್ಟೆಂಬರ್ 7ರಂದು ಕೆಂಪೇಗೌಡ ರಸ್ತೆಯ ಪ್ರಮುಖ ಚಿತ್ರಮಂದಿರ 'ಅಲಂಕಾರ್'ಗೆ ಮುತ್ತಿಗೆ ಹಾಕಿ ಪ್ರದರ್ಶನ ನಡೆಸಿದಾಗ ಪೊಲೀಸರು ಲಾಠೀ ಪ್ರಹಾರ ನಡೆಸಿದ್ದರ ಸ್ಮರಣೆಗಾಗಿ ಅವರು ಮತ್ತು ಅವರ ಬೆಂಬಲಿಗರು ಒಂಟೆ ಮೆರವಣಿಗೆ ನಡೆಸಿದರು. (ದಿನಾಂಕ 2ನೇ ಮಾರ್ಚ್, 2009ರ ದಿನಪತ್ರಿಕೆಯ ವರದಿ)

ಅದನ್ನು ಓದುತ್ತಿದ್ದಂತೆಯೇ ಅರವತ್ತರ ದಶಕದಲ್ಲಿ ರಾಜ್ಯದಲ್ಲಿ –ಅದರಲ್ಲಿಯೂ ಬೆಂಗಳೂರಿನಲ್ಲಿ– ಇದ್ದ ಕನ್ನಡದ ಪರಿಸ್ಥಿತಿ, ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಮಂದಿರಗಳೇ ದೊರಕದಿದ್ದ ದಯನೀಯ ಪರಿಸ್ಥಿತಿ, ಅನಕೃ ಮತ್ತು ರಾಮಮೂರ್ತಿಗಳ ನಾಯಕತ್ವದ ಕನ್ನಡ ಸಂಯುಕ್ತ ರಂಗದ ಕನ್ನಡ ಚಳುವಳಿಯ ಹೋರಾಟದ ದಿನಗಳು ನೆನಪಿಗೆ ಬಂದುವು.

ಹೌದು, ಅಂದು ನಡೆದ ಕನ್ನಡ ಚಳುವಳಿಯು ಸ್ವಲ್ಪಮಟ್ಟಿಗಾದರೂ ಕನ್ನಡಿಗರ ಆತ್ಮಾಭಿಮಾನವನ್ನು ಬಡಿದೆಬ್ಬಿಸುವ, ಕನ್ನಡದ ಕಿಚ್ಚನ್ನು ಪ್ರಜ್ವಲಿಸುವ ಕಾರ್ಯದಲ್ಲಿ ಜನತೆಯನ್ನು ಪ್ರೇರೇಪಿಸುವಲ್ಲಿ ಸಾಫಲ್ಯವನ್ನು ಪಡೆಯಿತು. ಅಂದಿನ ಚಳುವಳಿ ಕನ್ನಡದ ಅನೇಕ ಕ್ಷೇತ್ರಗಳಲ್ಲಿ ತನ್ನ ಪ್ರಭಾವವನ್ನು ಬೀರಿದ್ದರೂ, ವಿಶೇಷವಾಗಿ ಚಿತ್ರರಂಗದ ಮೇಲೆ ಬೀರಿದ ಪ್ರಭಾವ ಅತ್ಯಂತ ಪರಿಣಾಮಕಾರಿಯಾಗಿತ್ತೆಂದು ಹೇಳಬಹುದು.

ಇದಕ್ಕೆ ಒಂದು ದೃಷ್ಟಾಂತವೆಂದರೆ, 1963ರ ನವೆಂಬರ್‌ನಲ್ಲಿ ಕನ್ನಡ ಸಂಯುಕ್ತ ರಂಗವು ನಗರದ ಸುಭಾಷ್‌ನಗರದ (ಪ್ರಸ್ತುತ ಸಾರಿಗೆ ನಿಲ್ದಾಣ) ಮೈದಾನದಲ್ಲಿ

ಏರ್ಪಡಿಸಿದ್ದ ರಾಜ್ಯೋತ್ಸವದ ಸಮಾರಂಭದಲ್ಲಿ ಕನ್ನಡ ಚಿತ್ರರಂಗದ ಉದ್ದಾಮ ಸಾಹಿತಿ ಕಣಗಾಲ್ ಪ್ರಭಾಕರ ಶಾಸ್ತ್ರಿಗಳು ಮಾತನಾಡುತ್ತಾ ಕನ್ನಡ ಚಳುವಳಿಯಿಂದ ಕನ್ನಡ ಚಿತ್ರರಂಗಕ್ಕೆ ಆದ ಲಾಭವನ್ನು ಕೃತಜ್ಞತೆಯಿಂದ ಸ್ಮರಿಸಿದರು. ಅಲ್ಲದೆ ಚಿತ್ರರಂಗದ ಪ್ರತಿಯೊಬ್ಬರೂ ಕನ್ನಡ ಚಳುವಳಿಗೆ ಹಾಗೂ ಅದರ ನಾಯಕರಿಗೆ ಸದಾ ಋಣಿಗಳಾಗಿರಬೇಕೆಂದು ಹೇಳಿದ್ದು ಇಂದಿಗೂ ನೆನಪಿನಲ್ಲಿ ಉಳಿದಿದೆ.

ಇಂದು ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಈ ಶುಭ ಸಂದರ್ಭದಲ್ಲಿ ಚಿತ್ರರಂಗದ ಉನ್ನತಿಗಾಗಿ ನಡೆದ ಅಂದಿನ ಚಳುವಳಿಯನ್ನು, ಅದಕ್ಕಾಗಿ ದುಡಿದವರನ್ನು ನೆನೆಯಬೇಕಾದ್ದು ಅಗತ್ಯವೇ ಆಗಿದೆ.

ಅಂದಿನ ದಿನಗಳ ಆ ಹೋರಾಟದಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಭಾಗವಹಿಸಿ ಅಂದು ನಡೆದ ಕೆಲವು ಘಟನೆಗಳು ನನ್ನ ನೆನಪಿನಲ್ಲಿ ಹಾಗೆಯೇ ತೇಲಿಬಂದುವು. ಹಾಗಾಗಿ ಚಳುವಳಿಯು ಕನ್ನಡ ಚಿತ್ರರಂಗದ ಮೇಲೆ ಬೀರಿದ ಪರಿಣಾಮದ ಬಗ್ಗೆ ಒಂದು ಕಿರು ಪುಸ್ತಕವನ್ನು ಬರೆಯುವುದಾಗಿ ಹೇಳಿದಾಗ ಶ್ರೀ ಗೌರಿಸುಂದರ್ ಅವರು ಸಕಾರಾತ್ಮಕವಾಗಿ ಸ್ಪಂದಿಸಿದರು.

ಈ ಹೊತ್ತಿಗೆಯಲ್ಲಿ ಅಂದಿನ ಚಳುವಳಿಯ ಕೆಲವು ಮಹತ್ವದ ಘಟನೆಗಳನ್ನು ಮತ್ತು ಮುಂಚೂಣಿಯಲ್ಲಿದ್ದ ಕೆಲವು ಪ್ರಮುಖರ ಪರಿಚಯವನ್ನು ಮಾಡಿಕೊಡಲಾಗುವ ಪ್ರಯತ್ನವನ್ನು ಮಾಡಿಕೊಡಲಾಗಿದೆ. ಎಲ್ಲ ಘಟನೆಗಳನ್ನು ಹಾಗೂ ಎಲ್ಲ ವ್ಯಕ್ತಿಗಳ ವಿವರಗಳನ್ನು ಸ್ಥಳಾಭಾವದಿಂದ ಮಾಡಿಕೊಡಲಾಗಿಲ್ಲ. ಹಾಗಾಗಿ ಕ್ಷಮೆ ಇರಲಿ.

ಈ ಕೃತಿಗೆ ತಿಲಕಪ್ರಾಯವಾಗಿ ಅಭಿಪ್ರಾಯ ಬರೆದುಕೊಟ್ಟ ಚಿತ್ರಸಾಹಿತಿ ಶ್ರೀ ಸಿ.ವಿ. ಶಿವಶಂಕರ್ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಈ ಸಂಗ್ರಹವನ್ನು ಹೊರತರುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಶ್ರೀ ಗೌರಿಸುಂದರ್ ಅವರಿಗೆ ವಂದನೆಗಳು.

ಅ.ನ.ಕೃ ಅವರಿಗೆ ಸಂಬಂಧಿಸಿದ ಕೆಲವು ಚಿತ್ರಗಳನ್ನು ಒದಗಿಸಿದ ಅ.ನ.ಕೃ ಪ್ರತಿಷ್ಠಾನದ ಶ್ರೀ ಕೆ.ಟಿ. ಚಂದ್ರಶೇಖರ್ ಅವರಿಗೂ ಹಾಗೂ ಮಾಹಿತಿಯನ್ನು ಸಂಗ್ರಹಿಸುವಲ್ಲಿ ನೆರವಾದ ಶ್ರೀ ಮಂ.ಅ. ವೆಂಕಟೇಶ್ ಅವರಿಗೂ ವಂದನೆಗಳು.

ಎನ್. ಆನಂದ ರಾಮರಾವ್

ಕನ್ನಡ ಚಿತ್ರರಂಗ – ಚಳುವಳಿ

ಈ ವರ್ಷ – 2009 – ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಕನ್ನಡ ಚಿತ್ರ ನಿರ್ಮಾಣವು ಆರಂಭವಾಗಿ ಎಪ್ಪತ್ತೈದು ವರ್ಷಗಳಾದ ಸವಿನೆನಪಿನ ಅಮೃತ ಮಹೋತ್ಸವದ ವರ್ಷ. ಹಾಗಾಗಿ ಇತಿಹಾಸದ ಹಿಂದಿನ ಪುಟಗಳತ್ತ ನೆನಪಿನ ನೋಟವನ್ನು ಬೀರಿದಾಗ ಕನ್ನಡದ ಮೊದಲ ಚಿತ್ರದ ಹೆಸರು ಬರುವುದು ಸಹಜ. ಆ ಚಿತ್ರವೇ 'ಸತೀ ಸುಲೋಚನ'.

1931, ಮೊಟ್ಟ ಮೊದಲಿಗೆ ಭಾರತದಲ್ಲಿ ವಾಕ್ಚಿತ್ರ ತಯಾರಾದ ವರ್ಷ. ಚಲನಚಿತ್ರದ ಪ್ರವೇಶ ಭಾರತಕ್ಕೆ ಪ್ರವೇಶವಾಗಿದ್ದು 1896ರಲ್ಲಿಯಾದರೂ ಅಂದಿನಿಂದ 1931ರವರೆಗೂ, ಅಂದರೆ 35 ವರ್ಷಗಳ ದೀರ್ಘಕಾಲದ ಅವಧಿಯಲ್ಲಿ ತಯಾರಾಗಿದ್ದು ಕೇವಲ ಮೂಕಿಚಿತ್ರಗಳು. ಭಾರತದಲ್ಲಿ ಮೊಟ್ಟಮೊದಲು ತಯಾರಾದ ವಾಕ್ಚಿತ್ರವೆಂದರೆ 'ಅಲಂಆರಾ'.

ಅದಾದ ಮೂರು ವರ್ಷಗಳ ನಂತರ, 1934ರ ಮಾರ್ಚ್ 3ರಂದು ಕನ್ನಡದ ವಾಕ್ಚಿತ್ರ ತಯಾರಾಗಿ ಬಿಡುಗಡೆಯಾಯಿತು. ಅದೇ 'ಸತೀ ಸುಲೋಚನಾ' ಕನ್ನಡದ ಪ್ರಥಮ ವಾಕ್ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಆ ವರ್ಷ 'ಭಕ್ತ ಧ್ರುವ' ಚಿತ್ರವೂ ಸಹ ಬಿಡುಗಡೆಯಾಯಿತು. ವಿಪರ್ಯಾಸವೆಂದರೆ, 'ಭಕ್ತ ಧ್ರುವ'ವು 'ಸತೀ ಸುಲೋಚನಾ'ಗಿಂತ ಮುಂಚೆಯೇ ತಯಾರಿಕೆಯನ್ನು ಆರಂಭಿಸಿದ್ದರೂ ಕೆಲವು ತಾಂತ್ರಿಕ ಕಾರಣಗಳಿಂದ ಬಿಡುಗಡೆಯಾಗುವುದರಲ್ಲಿ ವಿಳಂಬವಾಯಿತು. ಮೊದಲ ವಾಕ್ಚಿತ್ರವೆಂಬ ಹೆಸರನ್ನು ಗಳಿಸಲಾರದೆ ಹೋಯಿತು. ಅದೇನೇ ಇರಲಿ, ಈ ಎರಡೂ ಚಿತ್ರಗಳು ಒಂದೇ ವರ್ಷದಲ್ಲಿ ಬಿಡುಗಡೆಯಾಗಿದ್ದು ಕನ್ನಡ ಚಿತ್ರರಂಗದ ಆರಂಭಕ್ಕೆ ಕಾರಣವಾಗಿದ್ದನ್ನು ಸ್ಮರಿಸಲೇಬೇಕು.

'ಸತೀ ಸುಲೋಚನ' ತೆರೆಕಂಡಿದ್ದು ಬೆಂಗಳೂರಿನ ಹೃದಯಭಾಗದಲ್ಲಿದ್ದ – ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆ ಪ್ರದೇಶದಲ್ಲಿದ್ದ– ಪ್ಯಾರಾಮೌಂಟ್ ಚಿತ್ರಮಂದಿರದಲ್ಲಿ.



ಪ್ಯಾರಾಮೌಂಟ್ ಚಿತ್ರಮಂದಿರ

ದುರ್ದೈವವೆಂದರೆ ಚಿತ್ರರಂಗ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಅದು ಮಾಯವಾಗಿ, ಆ ಜಾಗದಲ್ಲಿ ಮತ್ತೊಂದು ಚಿತ್ರಮಂದಿರ ಅಸ್ತಿತ್ವದಲ್ಲಿರುವುದು. ಈ ಚಿತ್ರಮಂದಿರದ ಇತಿಹಾಸದತ್ತಲೂ ಕಣ್ಣು ಹಾಯಿಸಿದಾಗ ಅದು ಭವ್ಯ ಪರಂಪರೆಯನ್ನೇ ಹೊಂದಿರುವುದು ಕಂಡುಬರುತ್ತದೆ.



ದೊಡ್ಡಣ್ಣ ಶೆಟ್ಟರು

ಈ ಚಿತ್ರಮಂದಿರವನ್ನು ನಿರ್ಮಿಸಿದವರು ದೊಡ್ಡಣ್ಣ ಶೆಟ್ಟರು. ಆ ಕಾಲದ ಮಹಾದಾನಿಗಳು ಮತ್ತು ಜನೋಪಕಾರಿಗಳು ದೊಡ್ಡಣ್ಣ ಶೆಟ್ಟರು. ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಟ್ಟ ಮಹಾನುಭಾವರು. ಅಂದು ಅವರು ಸ್ಥಾಪಿಸಿದ ವಿದ್ಯಾಸಂಸ್ಥೆ ಇಂದಿಗೂ ಸಹ ಎಸ್.ಎಲ್.ಎನ್. ವಿದ್ಯಾಸಂಸ್ಥೆ ಎಂದೇ ಪ್ರಖ್ಯಾತವಾಗಿದ್ದು ಸಾವಿರಾರು ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿ ತಮ್ಮ ಜೀವನದಲ್ಲಿ ಉನ್ನತಿ ಹೊಂದಿದ್ದಾರೆ.

ಇಂತಹ ವಿದ್ಯಾದಾನಿ ಶ್ರೀ ದೊಡ್ಡಣ್ಣ ಶೆಟ್ಟರಿಗೆ 1907ರಲ್ಲಿ ಅಂದಿನ ಮೈಸೂರು ಮಹಾರಾಜರಾಗಿದ್ದ

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 'ಜನೋಪಕಾರಿ' ಎಂಬ ಬಿರುದು ನೀಡಿದ್ದರು.

1905ರಲ್ಲಿ ಶ್ರೀ ದೊಡ್ಡಣ್ಣ ಶೆಟ್ಟರು ಬೆಂಗಳೂರಿನ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು, ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ಒಂದು ದೊಡ್ಡ ಸಭಾ ಭವನವನ್ನು ನಿರ್ಮಿಸಿದರು. ಅದನ್ನು ದೊಡ್ಡಣ್ಣ ಹಾಲ್ ಎಂದೇ ಜನ ಆತ್ಮೀಯವಾಗಿ ಕರೆಯುತ್ತಿದ್ದರು.

ಅಂದಿನ ದಿನಗಳಲ್ಲಿ ಇಡೀ ಬೆಂಗಳೂರಿಗೇ ಶೋಭಾಯಮಾನವಾಗಿದ್ದ ಏಕೈಕ ಸಭಾಭವನ ಇದಾಗಿತ್ತು. ನಗರದಲ್ಲಿ ನಡೆಯುತ್ತಿದ್ದ ಹಲವಾರು ಸಾರ್ವಜನಿಕ ಸಭೆ ಸಮಾರಂಭಗಳು ಈ ಹಾಲ್‌ನಲ್ಲಿ ಏರ್ಪಾಡಾಗುತ್ತಿದ್ದವು. ಹೊರಗಿನಿಂದ ಗಣ್ಯರು ಬೆಂಗಳೂರಿಗೆ ಬಂದಾಗ ನಡೆಸಲಾಗುತ್ತಿದ್ದ ಸಾರ್ವಜನಿಕ ಸಮಾರಂಭಗಳು ನಡೆಯುತ್ತಿದ್ದುದೂ ದೊಡ್ಡಣ್ಣ ಹಾಲ್‌ನಲ್ಲಿಯೇ. ಅಷ್ಟೇ ಅಲ್ಲದೆ ಆ ಕಾಲದಲ್ಲಿ ತಯಾರಾಗುತ್ತಿದ್ದ ಮೂಕಿ ಚಿತ್ರಗಳು ಸಹ ಈ ಸಭಾಭವನದಲ್ಲಿಯೇ ಪ್ರದರ್ಶನಗೊಳ್ಳುತ್ತಿದ್ದವು.

ಕನ್ನಡದ ಮೊದಲ ವಾಕ್ಚಿತ್ರ 'ಸತೀ ಸುಲೋಚನ' ತೆರೆಕಂಡಿದ್ದು ಇಂದು ಇಲ್ಲವಾದರೂ ಅಂದು ಪ್ರಥಮವಾಗಿ ನಿರ್ಮಿಸಿದ್ದ ಪ್ಯಾರಾಮೌಂಟ್ ಚಿತ್ರಮಂದಿರದಲ್ಲಿ. ಹಾಗಾಗಿ ಅದನ್ನು ಇಂದಿಗೂ ನೆನಪಿಸಿಕೊಳ್ಳುವಂತಾಗಿದೆ. ಹಿಂದಿನ ಪ್ಯಾರಾಮೌಂಟ್ ಇದ್ದ ಜಾಗದಲ್ಲಿ ಈಗ ಪರಿಮಳ ಮತ್ತು ಪ್ರದೀಪ್ ಎಂಬ ಎರಡು ಚಿತ್ರಮಂದಿರಗಳು ನಿರ್ಮಾಣವಾಗಿ ಅಲ್ಲಿ ಚಿತ್ರ ಪ್ರದರ್ಶನಗಳಾಗುತ್ತಿವೆ.

'ಸತೀ ಸುಲೋಚನ' ಆರು ವಾರಗಳ ಕಾಲ ಪ್ರದರ್ಶನ ಕಂಡಿತೆಂದು ಹೇಳುತ್ತಾರೆ. ಆ ಕಾಲಕ್ಕೆ ಮಾತಿನಿಂದ ಕೂಡಿದ, ಮೊಟ್ಟಮೊದಲಿಗೆ ತೆರೆಕಂಡ ಈ ಚಿತ್ರವನ್ನು ನೋಡಲು ಬೆಂಗಳೂರಿನ ಸುತ್ತಮುತ್ತಲಿನ ಜನ ತಂಡೋಪತಂಡವಾಗಿ ಬರುತ್ತಿದ್ದರಂತೆ. ದೂರದ ಪ್ರದೇಶಗಳಿಂದ ಬರುವವರು ಗಾಡಿ ಕಟ್ಟಿಕೊಂಡು ಬರುತ್ತಿದ್ದರಂತೆ.

ಹೀಗೆ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ನೂತನ ಶಕೆಯನ್ನು ಆರಂಭಿಸಿದ ಈ ಚಿತ್ರದ ನಿರ್ಮಾಪಕರು ಷಾ ಚಮನ್‌ಲಾಲ್ ಡುಂಗಾಜಿ ಎನ್ನುವ ರಾಜಸ್ಥಾನೀಯರು. ಇವರೊಂದಿಗೆ ಇವರ ಮಗ ಷಾ ಭೂರಮಲ್ ಸಹ ನಿರ್ಮಾಪಕರಾಗಿದ್ದರು. ಮತ್ತೂ ವಿಶೇಷವೆಂದರೆ ಇವರು ಈ ಚಿತ್ರದ ವಿತರಕರೂ ಆಗಿದ್ದರು.

ಷಾ ಚಮನ್‌ಲಾಲ್ ಅವರು ಬೆಂಗಳೂರಿನ ಚಿಕ್ಕಪೇಟೆಯಲ್ಲಿ ಪಾತ್ರೆ ವ್ಯಾಪಾರದಲ್ಲಿ ತೊಡಗಿದ್ದರು. ಧಾರ್ಮಿಕ ಮನೋಭಾವನೆಯನ್ನು ಹೊಂದಿದ್ದ ಅವರು ಹಲವಾರು ದೇವಸ್ಥಾನಗಳ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದರು. ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿದ್ದರು.

ಧರ್ಮಾಭಿಮಾನಿಯೇ ಅಲ್ಲದೆ ವಿದ್ಯಾಭಿಮಾನಿಯೂ ಆಗಿದ್ದ ಚಮನ್‌ಲಾಲ್‌ರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಮ್ಮ ಹೆಸರಿನಲ್ಲಿ ಚಿನ್ನದ ಪದಕವನ್ನು ನೀಡಿದ್ದರು.

ಪ್ರಾರಂಭದಲ್ಲಿ ಪಾತ್ರೆ ವ್ಯಾಪಾರದೊಂದಿಗೆ ತಮ್ಮ ವ್ಯವಹಾರವನ್ನು ಪ್ರಾರಂಭಿಸಿ, ಕಾಲಕ್ರಮೇಣ ಮೂಕಿ ಚಿತ್ರಗಳ ವಿತರಣೆಗೂ ಸಹ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿದರು. ಅದಕ್ಕಾಗಿ ಅವರು ಸ್ಥಾಪಿಸಿದ್ದು ಶ್ರೀ ಸೌತ್ ಇಂಡಿಯಾ ಫಿಲಂ ಕಂಪನಿ ಎಂಬ ಸಂಸ್ಥೆಯನ್ನು. ನಂತರ ವಾಕ್ಚಿತ್ರ ತಯಾರಿಕೆ ಆರಂಭಗೊಂಡಾಗ ಚಿತ್ರ ನಿರ್ಮಾಣಕ್ಕೆ ಏಕೆ ಇಳಿಯಬಾರದೆಂದು ಯೋಚಿಸಿ ಸೌತ್ ಇಂಡಿಯಾ ಮೂವಿಟೋನ್ ಎಂಬ ನಿರ್ಮಾಣ ಸಂಸ್ಥೆಯನ್ನು ಆರಂಭಿಸಿದರು. 'ಸತಿ ಸುಲೋಚನಾ' ಚಿತ್ರವನ್ನು ನಿರ್ಮಿಸಿದರು.

ಈ ಚಿತ್ರ ನಿರ್ಮಾಣದ ಒಂದು ವರ್ಷದ ನಂತರ, 1935ರಲ್ಲಿ ಚಮನ್‌ಲಾಲರು ನಿಧನರಾದರು. ಆದರೆ ಅವರು ಕನ್ನಡ ವಾಕ್ಚಿತ್ರದ ಪ್ರಥಮ ನಿರ್ಮಾಪಕರೆಂದು ಜನ ಅವರನ್ನು ನೆನಪಿಸುವಂತೆ ಚಿತ್ರರಂಗದಲ್ಲಿ ಅಮರರಾದರು.

ಇನ್ನು ಚಿತ್ರದ ತಾಂತ್ರಿಕ ವರ್ಗ ಹಾಗೂ ನಟ–ನಟಿಯರ ಬಗ್ಗೆ ಹೇಳುವುದಾದರೆ ಈ ಚಿತ್ರದ ನಿರ್ದೇಶಕರು ವೈ.ವಿ. ರಾವ್. ಆವರೆಗೆ ಹಲವಾರು ಮೂಕಿ ಚಿತ್ರಗಳನ್ನು ನಿರ್ದೇಶಿಸಿದ್ದ ಅವರು ನಾಯಕ ನಟನಾಗಿಯೂ ಅಭಿನಯಿಸಿದ್ದರು. ವೈ.ವಿ. ರಾವ್ ಅವರು ಇಂದು ಜೂಲಿ ಲಕ್ಷ್ಮಿ ಎಂದೇ ಖ್ಯಾತರಾಗಿರುವ ನಟಿ ಲಕ್ಷ್ಮಿ ಅವರ ತಂದೆ. 'ಸತೀ ಸುಲೋಚನ'ದ ನಂತರ ಅವರು ಕನ್ನಡದಲ್ಲಿ 'ಭಾಗ್ಯಚಕ್ರ' ಹಾಗೂ 'ನಾಗಾರ್ಜುನ' ಎಂಬ ಮತ್ತೆರಡು ಚಿತ್ರಗಳನ್ನು ನಿರ್ದೇಶಿಸಿದರು.

ಚಿತ್ರ ಸಾಹಿತ್ಯದ ರಚನೆ ಮಾಡಿದ್ದವರು ಆಸ್ಥಾನ ವಿದ್ವಾಂಸರಾಗಿದ್ದ ಶ್ರೀ ಬೆಳ್ಳಾವೆ ನರಹರಿಶಾಸ್ತ್ರಿಗಳು. ಅವರು ರಂಗಭೂಮಿಗಾಗಿ ರಚಿಸಿದ್ದ 'ಸತೀ ಸುಲೋಚನ' ಅಥವಾ 'ಇಂದ್ರಜಿತ್ ವಧೆ' ಎಂಬ ಪ್ರಸಿದ್ಧ ಪೌರಾಣಿಕ ನಾಟಕವೇ ಚಿತ್ರವಾಗಿ ರೂಪುಗೊಂಡಿತು. ಕತೆ, ಸಂಭಾಷಣೆ, ಗೀತೆ ರಚನೆ ಹಾಗೂ ಸಾಹಿತ್ಯದ ಎಲ್ಲಾ ಪ್ರಾಕಾರಗಳಲ್ಲಿಯೂ ಬೆಳ್ಳಾವೆ ನರಹರಿಶಾಸ್ತ್ರಿಗಳ ರಚನೆಯೇ ಆಧಾರವಾಯಿತು.



ಬೆಳ್ಳಾವೆ ನರಹರಿಶಾಸ್ತ್ರಿಗಳು

ಎಂ.ವಿ. ಸುಬ್ಬಯ್ಯ ನಾಯ್ಡುರವರು ನಾಯಕನ ಅಂದರೆ ಇಂದ್ರಜಿತ್‌ನ ಪಾತ್ರ ನಿರ್ವಹಿಸಿದರು. ರಾವಣನಾಗಿ ಆರ್. ನಾಗೇಂದ್ರರಾವ್, ಸುಲೋಚನೆಯಾಗಿ ತ್ರಿಪುರಾಂಬ, ಮಂಡೋದರಿಯಾಗಿ ಲಕ್ಷ್ಮೀಬಾಯಿ, ನಾರದನಾಗಿ ಶೇಷಾಚಲಂ, ರಾಮನಾಗಿ ಡಿ.ಎನ್. ಮೂರ್ತಿರಾವ್ ಅವರುಗಳು ಅಭಿನಯಿಸಿದ್ದರು.

ಈ ಎಲ್ಲ ನಟ–ನಟಿಯರೂ ಅಂದಿನ ಕಾಲದ ಪ್ರಸಿದ್ಧ ನಟ–ನಟಿಯರಾಗಿದ್ದು ಜನಪ್ರಿಯ ಕಲಾವಿದರೇ ಆಗಿದ್ದರು. ಈ ಪಾತ್ರ ವರ್ಗದಲ್ಲಿ ಲಕ್ಷ್ಮಣನಾಗಿ ಅಭಿನಯಿಸಿದವರು ಚಿತ್ರದ ನಿರ್ದೇಶಕರಾಗಿದ್ದ ವೈ.ವಿ. ರಾವ್ ಎಂಬುದು ಗಮನಾರ್ಹವಾದುದು.

'ಸತೀ ಸುಲೋಚನ' ಬಿಡುಗಡೆಯಾದ ವರ್ಷವೇ, ಅಂದರೆ 1934ರಲ್ಲಿಯೇ 'ಭಕ್ತ ಧ್ರುವ'ವೂ ಸಹ ಬಿಡುಗಡೆಯಾಯಿತು. ಕಾಲಾನುಕ್ರಮದಲ್ಲಿ ಮುಂದಿನ ವರ್ಷಗಳಲ್ಲಿ ವರ್ಷಕ್ಕೆ ಕೇವಲ ಒಂದೋ ಎರಡೋ ಕನ್ನಡ ಚಿತ್ರಗಳು ತಯಾರಿಕೆಯಾಗಿ ಬಿಡುಗಡೆಯಾಗತೊಡಗಿದವು.

1936ರಲ್ಲಿ ತಯಾರಾಗಿ ಬಿಡುಗಡೆಯಾದ ಮತ್ತೊಂದು ಚಿತ್ರವೆಂದರೆ 'ಸಂಸಾರನೌಕೆ'. ಇದು ಕನ್ನಡದಲ್ಲಿ ಚಿತ್ರ ತಯಾರಿಕೆ ಆರಂಭವಾದ ಮೂರನೆಯ ವರ್ಷದಲ್ಲಿ ನಿರ್ಮಿಸಿದ್ದು ಹಾಗೂ ಕನ್ನಡ ಚಿತ್ರಗಳ ಸರಣಿಯಲ್ಲಿ ನಾಲ್ಕನೆಯದು. ಅಲ್ಲದೆ ಈ ಚಿತ್ರದ ಮತ್ತೊಂದು ವಿಶೇಷತೆಯೆಂದರೆ ಇದು ಕನ್ನಡದ ಮೊದಲ ಸಾಮಾಜಿಕ ಚಿತ್ರವೆಂದು ಮೈಲಿಗಲ್ಲಾಗಿದೆ. ಈ ಚಿತ್ರ ನಿರ್ಮಿಸಿದವರು ಹೆಚ್.ಎಲ್.ಎನ್. ಸಿಂಹ ಅವರು.

ಅಲ್ಲಿಯವರೆಗೆ ಪೌರಾಣಿಕ ಹಾಗೂ ಜಾನಪದ ವಿಷಯವನ್ನೇ ಆಧಾರವಾಗಿಟ್ಟುಕೊಂಡು ಚಿತ್ರ ನಿರ್ಮಾಣವಾಗುತ್ತಿದ್ದ ಸಂದರ್ಭದಲ್ಲಿ ಸಾಮಾಜಿಕ ವಿಷಯವೂ ಸಹ ಚಿತ್ರಕ್ಕೆ ಸಮಂಜಸವಾಗುತ್ತದೆ, ಜನರಿಗೆ ಮೆಚ್ಚುಗೆಯಾಗುತ್ತದೆಂದು ಈ ಚಿತ್ರ ನಿರೂಪಿಸಿತು. ಚಿತ್ರ ನಿರ್ದೇಶಿಸಿದ ಸಿಂಹ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ, ಹಾಡುಗಳನ್ನೂ ಸಹ ಬರೆದಿದ್ದರು.

ಜಿ.ಆರ್. ಪಂತುಲು, ಎಂ.ಪಿ. ರಾಜಮ್ಮ, ಸೋರಟ್ ಅಶ್ವತ್ಥ್, ಡಿಕ್ಕಿ ಮಾಧವರಾವ್, ತಮಾಷಾ ಮಾಧವರಾವ್, ಹೆಚ್.ಆರ್. ಹನುಮಂತರಾವ್, ಹುಣಸೂರು ಕೃಷ್ಣಮೂರ್ತಿ, ಎಸ್.ಕೆ. ಪದ್ಮಾದೇವಿ ಮುಂತಾದವರು ಅಭಿನಯಿಸಿದ್ದ ಈ ಚಿತ್ರದಲ್ಲಿ ನಿರ್ದೇಶಕರಾದ ಸಿಂಹರವರೂ ಪಾತ್ರ ವಹಿಸಿದ್ದರು.

ಅಂದು ಈ ಚಿತ್ರ ಗಳಿಸಿದ ಯಶಸ್ಸಿನಿಂದ ಇಡೀ ಚಿತ್ರರಂಗಕ್ಕೆ ಸಾಮಾಜಿಕ ಚಿತ್ರ ತಯಾರಿಕೆಯಲ್ಲಿ ಭರವಸೆ ಮೂಡಿ ಅಂತಹ ಚಿತ್ರಗಳ ತಯಾರಿಕೆಗೆ ಉತ್ತೇಜನ ಸಿಗುವಂತಾಯಿತು. 'ಸಂಸಾರನೌಕೆ' ದಕ್ಷಿಣ ಭಾರತದಲ್ಲಿ ಎರಡನೆಯ ಸಾಮಾಜಿಕ ಚಿತ್ರವೆಂಬ ಖ್ಯಾತಿಯನ್ನೂ ಗಳಿಸಿತು. (ದಕ್ಷಿಣ ಭಾರತದಲ್ಲಿ ತಯಾರಾದ ಮೊದಲ ಸಾಮಾಜಿಕ ಚಿತ್ರವೆಂಬ ಖ್ಯಾತಿಗೆ ಪಾತ್ರವಾಗಿರುವುದು ತಮಿಳಿನ 'ಮೇನಕಾ' (1935).

ಮಂದಗತಿಯಲ್ಲಿ ಸಾಗಿದ ಕನ್ನಡ ಚಿತ್ರನಿರ್ಮಾಣ

1934ರಲ್ಲಿ ಪ್ರಾರಂಭವಾದ ಕನ್ನಡ ಚಿತ್ರನಿರ್ಮಾಣ ವರ್ಷಕ್ಕೆ ಒಂದೋ ಎರಡೋ ಚಿತ್ರಗಳ ತಯಾರಿಕೆಯಲ್ಲಿ ಮುಕ್ತಾಯಗೊಳ್ಳುತ್ತಿತ್ತು. ಮೊದಲ 25 ವರ್ಷಗಳಲ್ಲಿ ತಯಾರಾದ ಚಿತ್ರಗಳ ಸಂಖ್ಯೆಯನ್ನು ಗಮನಿಸಿದರೆ ಅದು 100ರ ಸಂಖ್ಯೆಯನ್ನು ಸಹ ದಾಟಿರಲಿಲ್ಲವೆನ್ನುವುದು ಕಂಡುಬರುತ್ತದೆ. (ನಿಖರವಾಗಿ ಹೇಳಬಹುದಾದರೆ ಆ ಅವಧಿಯಲ್ಲಿ ಒಟ್ಟು ತಯಾರಾದ ಚಿತ್ರಗಳ ಸಂಖ್ಯೆ 92).

ಇದಕ್ಕೆ ಬಹುಮುಖ್ಯ ಕಾರಣವೆಂದರೆ ಕನ್ನಡ ಚಿತ್ರ ಪ್ರೇಕ್ಷಕರಿಗೆ ಕೇವಲ ಕನ್ನಡ ಚಿತ್ರಗಳೇ ಅಲ್ಲದೆ ಬೇರೆ ಭಾಷೆಯ ಚಿತ್ರ ವೀಕ್ಷಣೆಗೆ ಸಹ ಕನ್ನಡ ನೆಲದಲ್ಲಿ ಅವಕಾಶ ಇದ್ದಿದ್ದು. ಕನ್ನಡ ಪ್ರದೇಶದಲ್ಲಿ ಬೇರೆ ಭಾಷೆಯ ಚಿತ್ರಗಳು ಅಂದರೆ ಹಿಂದಿ, ತೆಲುಗು, ತಮಿಳು ಚಿತ್ರಗಳೂ ಸಹ ಪ್ರದರ್ಶಿತವಾಗುತ್ತಿದ್ದು ಕನ್ನಡ ಚಿತ್ರ ರಸಿಕರೂ ಎಲ್ಲಾ ಭಾಷೆಯ ಚಿತ್ರಗಳನ್ನು ಸಹ ಸಮಾನ ಮನೋಭಾವದಿಂದ ನೋಡುವ ವಿಶಾಲ ಹೃದಯವನ್ನು ಹೊಂದಿದ್ದುದು. ಅಲ್ಲದೆ ಸಾಕಷ್ಟು ಚಿತ್ರಗಳು ಕನ್ನಡದಲ್ಲಿ ತಯಾರಾಗಿ ಬಿಡುಗಡೆಯಾಗದಿದ್ದುದರಿಂದ ಬೇರೆ ಭಾಷೆಯ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರದರ್ಶಿಸುವ ಅನಿವಾರ್ಯತೆಯೂ ಉಂಟಾಗಿತ್ತು.

ಮತ್ತೂ ಒಂದು ಮುಖ್ಯ ಕಾರಣವೆನ್ನಬಹುದಾದರೆ ಕನ್ನಡ ಚಿತ್ರಗಳನ್ನೇ ನೋಡಬೇಕೆನ್ನುವ ಕನ್ನಡದ ಅಭಿಮಾನ ಕನ್ನಡಿಗರಿಗಿಲ್ಲದಿದ್ದುದು.

ಆದರೆ 1960ರ ದಶಕದ ಆರಂಭದ ದಿನಗಳಲ್ಲಿ ನಡೆದ ಒಂದೆರಡು ಘಟನೆಗಳು ಚಿತ್ರರಂಗದ ಇತಿಹಾಸವನ್ನೇ ಬದಲಾಯಿಸುವಷ್ಟು ಪರಿಣಾಮ ಬೀರಿತು. ಈ

ಘಟನೆಗಳಿಂದ ಪ್ರಭಾವಿತವಾದ ಚಿತ್ರರಂಗ, ಕನ್ನಡ ಚಿತ್ರ ನಟ-ನಟಿಯರು ಕನ್ನಡ ಪ್ರೇಕ್ಷಕರಿಂದ ನಿರೀಕ್ಷೆಗೂ ಮೀರಿದ ಪ್ರೋತ್ಸಾಹ ಪಡೆಯುವಂತಾಯಿತು. ಇದರಿಂದ ಉತ್ತೇಜನಗೊಂಡು ಹಲವಾರು ಹೊಸ ಹೊಸ ಉದ್ಯಮಿಗಳು ಕನ್ನಡ ಚಿತ್ರರಂಗದತ್ತ ಧಾವಿಸಿ ಬರುವಂತಾಯಿತು. ಕಲಾವಿದರು, ನಿರ್ಮಾಪಕರು, ತಾಂತ್ರಿಕ ವರ್ಗದವರು ಜನಮನ್ನಣೆ ಪಡೆಯುವಂತಾಯಿತು. ಚಿತ್ರರಂಗದಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸಲು ಅನುವು ಮಾಡಿಕೊಟ್ಟಂತಾಯಿತು. ಹೊಸ ಹೊಸ ಪ್ರತಿಭೆಗಳು ಚಿತ್ರರಂಗವನ್ನು ಪ್ರವೇಶಿಸಿದುವು. ರಾಷ್ಟ್ರ ಪ್ರಶಸ್ತಿಗಳನ್ನು ಗಳಿಸುವ ಮಟ್ಟದಲ್ಲಿಯೂ ಸಹ ಕನ್ನಡ ಚಿತ್ರಗಳ ನಿರ್ಮಾಣವಾಗಲು ಆರಂಭವಾಯಿತು.

ಪ್ರವಾಹ ಪರಿಹಾರದಲ್ಲಿ ನೊಂದವರಿಗೆ ಕನ್ನಡ ಚಿತ್ರರಂಗದ ನೆರವಿನ ಹಸ್ತ

1961ರಲ್ಲಿ ಪ್ರಕೃತಿಯ ಪ್ರಕೋಪಕ್ಕೆ ತುತ್ತಾಗಿ ರಾಜ್ಯದ ಹಲವು ಭಾಗಗಳಲ್ಲಿ ಉಂಟಾದ ಸಂಕಟಮಯ ವಾತಾವರಣಕ್ಕೆ ಕನ್ನಡ ಕಲಾವಿದರು ಸ್ಪಂದಿಸಿದ ರೀತಿ ಮಹತ್ತರವಾದುದು.

ರಾಜ್ಯದಲ್ಲಿ ಭೀಕರ ಪ್ರವಾಹ ಉಂಟಾಯಿತು. ಪ್ರವಾಹದ ಅಬ್ಬರಕ್ಕೆ ಬಲಿಯಾದ ಜನ ಮನೆ-ಮಠ ಕಳೆದುಕೊಂಡರು. ಜಾನುವಾರುಗಳನ್ನು ಕಳೆದುಕೊಂಡರು. ಬರಿಗೈಯಾದ ಬಡಜನತೆಯ ಕೂಗು-ಆರ್ತನಾದ ಎಲ್ಲೆಡೆ ಕೇಳಿಬರತೊಡಗಿತು. ಸಂತ್ರಸ್ತರ ಪರಿಹಾರ ಕೇಂದ್ರಗಳು ಸ್ಥಾಪಿತವಾಗಿ ಅಲ್ಲಲ್ಲಿ ಉಳ್ಳವರು ಇಲ್ಲದವರಿಗೆ ನೆರವಾಗಲು ನಿಂತರು.

ಇಂತಹ ಸಂಕಟಮಯ ಸನ್ನಿವೇಶದಲ್ಲಿ ತಮ್ಮ ಪಾತ್ರವಾದರೂ ಏನು? ತಾವು ಯಾವ ರೀತಿ ನೊಂದ ಜನಕ್ಕೆ ಸಹಾಯ ಮಾಡಬಹುದು ಎಂದು ಕನ್ನಡ ಚಿತ್ರರಂಗದವರು ಯೋಚಿಸತೊಡಗಿದರು.

ಆ ಸಮಯದಲ್ಲಿ ಪ್ರಜಾವಾಣಿ ಪತ್ರಿಕಾ ಬಳಗದವರು ಮುಂದೆ ನಿಂತು ಚಿತ್ರ ಕಲಾವಿದರಿಂದ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಸಂಚಾರ ಏರ್ಪಡಿಸಿ ನಿಧಿ ಸಂಗ್ರಹಣೆಗೆ ನಾಯಕತ್ವ ವಹಿಸಿದರು.

ನಾಡಿನಾದ್ಯಂತ ಸಂಚರಿಸಿ ನಿಧಿ ಸಂಗ್ರಹಿಸುವುದು ಮತ್ತು ಪ್ರಮುಖ ಪಟ್ಟಣಗಳಲ್ಲಿ/ಕೇಂದ್ರಗಳಲ್ಲಿ ರಸಮಂಜರಿ ಕಾರ್ಯಕ್ರಮ ಏರ್ಪಡಿಸುವುದು. ಈ ಸಂದರ್ಭಗಳಲ್ಲಿ

ಸಂಗ್ರಹವಾದ ಹಣವನ್ನು ಸಂತ್ರಸ್ತರಿಗೆ ನೇರವಾಗಿ ನೀಡುವುದು ಎಂಬ ಯೋಜನೆಯಾಗಿ ರೂಪುಗೊಂಡಿತು.

ಈ ಕಾರ್ಯಕ್ರಮಕ್ಕೆ ಕನ್ನಡ ಚಿತ್ರರಂಗಕ್ಕೆ ಚಿತ್ರರಂಗವೇ ತನ್ನ ಬೆಂಬಲವನ್ನು, ಒಪ್ಪಿಗೆಯನ್ನು ಸೂಚಿಸಿತು. ಚಿತ್ರರಂಗದ ಅತಿರಥ ಮಹಾರಥರೆಲ್ಲ ಈ ಮಾನವೀಯತೆಯ ಮಹತ್ಕಾರ್ಯಕ್ಕೆ ಮನಃಪೂರ್ವಕವಾಗಿ ಸ್ಪಂದಿಸಿದರು.

ಚಿತ್ರರಂಗದ ದಿಗ್ಗಜರೆನಿಸಿದ ರಾಜಕುಮಾರ್, ಉದಯಕುಮಾರ್, ಕಲ್ಯಾಣ ಕುಮಾರ್, ಆರ್. ನಾಗೇಂದ್ರರಾವ್, ಗುಬ್ಬಿ ವೀರಣ್ಣ, ಕೆಂಪರಾಜ್, ನರಸಿಂಹರಾಜು, ಹೊನ್ನಪ್ಪ ಭಾಗವತರ್, ಸುಬ್ಬಯ್ಯ ನಾಯ್ಡು, ಬಿ.ಆರ್. ಪಂತುಲು, ಬಿ. ಸರೋಜಾದೇವಿ, ಲೀಲಾವತಿ, ಹರಿಣಿ, ಪಂಡರೀಬಾಯಿ ಮೊದಲಾದವರೆಲ್ಲ ರಾಜ್ಯದ ಎಲ್ಲಾ ಪ್ರದೇಶಗಳಲ್ಲೂ ಸಂಚರಿಸಿದರು. ಕನ್ನಡ ಚಿತ್ರಪ್ರೇಮಿಗಳು ತಮ್ಮ ಅಭಿಮಾನಿ ನಟ–ನಟಿಯರನ್ನು ಕಾಣುವ ತವಕದಿಂದ ಜನ ಧಾವಿಸಿ ಬಂದರು. ಜೋಳಿಗೆ ಹಿಡಿದು ಬರುತ್ತಿದ್ದ ನಟ–ನಟಿಯರಿಗೆ ತಮ್ಮ ಕೈಲಾದಷ್ಟು ಹಣವನ್ನು ನೀಡಿ ಸಂತೋಷ ಪಟ್ಟುಕೊಳ್ಳುತ್ತಿದ್ದರು.

ಹೀಗೆ 50 ವರ್ಷಗಳ ಹಿಂದೆ ಕನ್ನಡ ನಟ–ನಟಿಯರಿಗೂ ಮತ್ತು ಜನಸಾಮಾನ್ಯರಿಗೂ ಅಪರೂಪದ ಸಮಾಗಮ, ಬಾಂಧವ್ಯ ಏರ್ಪಟ್ಟಿತು. ಚಿತ್ರರಂಗದವರಿಗೂ–ಪ್ರೇಕ್ಷಕರಿಗೂ ಒಂದು ಬಲವಾದ ಕೊಂಡಿಯ ಬೆಸುಗೆಯಾಯಿತು. ಈ ಒಂದು ಅವಕಾಶದಿಂದ ಸಂಗ್ರಹವಾದ ಸುಮಾರು 35ರಿಂದ 40 ಸಾವಿರ ರೂಪಾಯಿಗಳನ್ನು ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಿ.ಡಿ. ಜತ್ತಿಯವರಿಗೆ ಇಡೀ ರಾಜ್ಯದ ಜನತೆಯ ಪರವಾಗಿ ಅರ್ಪಿಸಲಾಯಿತು.

ಹೀಗೆ ಒದಗಿದ ಸಂದರ್ಭ ಮುಂದೆ ಕನ್ನಡ ಚಿತ್ರರಂಗ ಕನ್ನಡ ನೆಲದಲ್ಲಿ ನೆಲೆಯೂರಿ ನಿಲ್ಲಲು ಅವಕಾಶ ಕಲ್ಪಿಸಿದಂತಾಯಿತು.

ಅರವತ್ತರ ದಶಕದಲ್ಲಿ ಕನ್ನಡ ಚಳುವಳಿಯ ಆರಂಭ

1956, ನವೆಂಬರ್ ಒಂದರಂದು ಕನ್ನಡಿಗರ ಬಹುದಿನಗಳ ಮನದಾಸೆಯಾಗಿದ್ದ ಕರ್ನಾಟಕ ಏಕೀಕರಣ ಸಾಫಲ್ಯಗೊಂಡಿತು. ಆದರೆ ಹಲವಾರು ಕಾರಣಗಳಿಂದ ಕರ್ನಾಟಕವೆಂದಾಗಲಿಲ್ಲ. 'ವಿಶಾಲ ಮೈಸೂರು' ಎಂಬ ಹೆಸರಿನಲ್ಲಿ ಕನ್ನಡದ ಬಹುತೇಕ ಪ್ರಾಂತ್ಯಗಳು ಒಂದುಗೂಡಿದವು.

ಆದರೂ ಸಹ ಕನ್ನಡ ರಾಜ್ಯ ಭಾಷೆಯಾಗಲಿಲ್ಲ. ಕನ್ನಡಿಗರಿಗೆ ಉದ್ಯೋಗ ದಕ್ಕಲಿಲ್ಲ. ಕನ್ನಡದ ವಾತಾವರಣ ಮೂಡಲಿಲ್ಲ. ಕನ್ನಡ ಸಂಗೀತಗಾರರಿಗೆ ಅವಕಾಶವಿಲ್ಲ. ಕನ್ನಡ ನಾಟಕ ಪ್ರದರ್ಶನವಿಲ್ಲ. ಕನ್ನಡ ಚಿತ್ರಗಳಿಗೆ ಪ್ರದರ್ಶನ ಭಾಗ್ಯವಿಲ್ಲ. ಹೀಗೆ ಇಲ್ಲಗಳೇ ಜಾಸ್ತಿಯಾಗಿದ್ದವು.

ಅದರಲ್ಲಿಯೂ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡಿಗ ನಿರ್ಲಕ್ಷ್ಯಕ್ಕೊಳಗಾದ. ಕೇಂದ್ರ ಸರ್ಕಾರದ ಕೇಂದ್ರ ಕೈಗಾರಿಕೆಗಳ ಉದ್ಯೋಗಗಳು ಪರಭಾಷೆಯವರ ಪಾಲಾದುವು. ಪರಭಾಷಾ ಚಿತ್ರಗಳು ಮೆರೆದರೆ, ಕನ್ನಡ ಚಿತ್ರಗಳು ಸೊರಗುತ್ತಿದ್ದವು. ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳು ಸಿಗುವುದೇ ದುರ್ಲಭವಾಗುತ್ತಿತ್ತು. ಪರಭಾಷಾ ಸಂಗೀತಗಾರರಿಗೆ-ಕಲಾವಿದರಿಗೆ ಅಗ್ರಮನ್ನಣೆ, ಸನ್ಮಾನ; ಕನ್ನಡ ಸಂಗೀತಗಾರರು-ಕಲಾವಿದರಿಗೆ ನಂತರದ ಸ್ಥಾನ.

ಬೆಂಗಳೂರು ಕಬ್ಬನ್ ಪಾರ್ಕ್‌ನಲ್ಲಿ ಭಾನುವಾರಗಳಂದು ನಡೆಸುತ್ತಿದ್ದ ವಾದ್ಯಗೋಷ್ಠಿಯಲ್ಲಿ ಸಹ ಕೇವಲ ಪರಭಾಷಾ ಚಿತ್ರಗೀತೆಗಳಿಗೆ ಆದ್ಯತೆ ಇತ್ತೇ ಹೊರತು, ಕನ್ನಡ ಚಿತ್ರಗೀತೆಗಳಿಗಲ್ಲ.

ಹೀಗೆ ಕನ್ನಡ ನಾಡಿನಲ್ಲೇ ಕನ್ನಡ-ಕನ್ನಡಿಗರು ಉಪೇಕ್ಷೆಗೆ ಒಳಪಟ್ಟಾಗ ಅಸಮಾಧಾನದ ಅಲೆ ಸಹಜವಾಗಿಯೇ ಅಲ್ಲಲ್ಲಿ ಏಳತೊಡಗಿತು. ಸಣ್ಣದಾಗಿ

ಆರಂಭವಾದ ಕಿಚ್ಚು ಮೆಲ್ಲಗೆ ಹಬ್ಬತೊಡಗಿ ಕಾಳ್ಗಿಚ್ಚಾಗುವ ಸಮಯ ಬಂದಿತು. ಕನ್ನಡಿಗ ತನ್ನ ನೆಲದಲ್ಲಿ ತನ್ನ ಉಳಿವಿಗಾಗಿ ಚಳುವಳಿಗೆ ಸಿದ್ಧನಾಗಬೇಕಾಯಿತು.

ಚಳುವಳಿಯ ನಾಂದಿಗೆ ಕೂಡಿ ಬಂದ ಕಾಲ

ಉದ್ಯೋಗದ ಅವಕಾಶದಿಂದ ವಂಚಿತರಾದ ಯುವಕರಲ್ಲಿ ಸಹಜವಾಗಿಯೇ ಅಶಾಂತಿ, ಅಸಹನೆ, ಕ್ರೋಧ ಮೂಡಿತು. ಹಾಗಾಗಿ ಅವರು ಹೋರಾಟದ ಹಾದಿಯನ್ನು ಹಿಡಿಯಲೇಬೇಕಾದ ಅನಿವಾರ್ಯ ಪರಿಸ್ಥಿತಿ ಒದಗಿಬಂದಿತು. ಸರಿಯಾದ ನಾಯಕತ್ವವಿಲ್ಲದೆ ಮೂಕ ಸಂಕಟ ಅನುಭವಿಸುತ್ತಿದ್ದ ಹತಾಶ ಕನ್ನಡ ಯುವಕರಿಗೆ ಬೂದಿ ಮುಚ್ಚಿದ ಕೆಂಡದಂತಿದ್ದ ಅಭಿಮಾನದ ಸೆಲೆ ಪ್ರಜ್ವಲಿಸಲು ವೇದಿಕೆಯ ನಿರ್ಮಾಣವಾಗಬೇಕಾಗುತ್ತಿತ್ತು.

ಈ ಸಂದರ್ಭದಲ್ಲಿ ಮಣಿಪಾಲದಲ್ಲಿ 1960ರ ಡಿಸೆಂಬರ್ ತಿಂಗಳಿನ 27, 28, 29ರಂದು ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಆ ಸಮ್ಮೇಳನದ ಅಧ್ಯಕ್ಷರಾಗಿದ್ದವರು ಕನ್ನಡದ ಹಿರಿಯ ಕಾದಂಬರಿಕಾರರೂ ಕನ್ನಡದ ಬಗ್ಗೆ ಅಪಾರ ಅಭಿಮಾನವುಳ್ಳವರೂ ಆದ ಅ.ನ. ಕೃಷ್ಣರಾಯರು.

ಸಾಮಾನ್ಯವಾಗಿ ಎಲ್ಲ ಸಾಹಿತ್ಯ ಸಮ್ಮೇಳನಗಳಲ್ಲಿಯೂ ಸಮ್ಮೇಳನದ ಅಧ್ಯಕ್ಷ ಭಾಷಣಗಳು ಕನ್ನಡ ನಾಡು, ಕನ್ನಡ ಭಾಷೆ, ಕನ್ನಡಿಗರ ಹಿತಾಸಕ್ತಿಯ ಬಗ್ಗೆ ಒತ್ತು ಕೊಡುವಂತಹದ್ದಾಗಿದ್ದರೂ ಮಣಿಪಾಲದಲ್ಲಿ ಅ.ನ.ಕೃ. ಅವರು ಮಾಡಿದ ಭಾಷಣ ಅತ್ಯಂತ ಹರಿತವಾಗಿ ನರಸತ್ತಂತಿದ್ದ ಕನ್ನಡಿಗರನ್ನು ಬಡಿದೆಚ್ಚರಿಸುವಂತಿತ್ತು.

ಕನ್ನಡ ಭಾಷೆಯ, ಕನ್ನಡಿಗರ ಎಲ್ಲ ಸಮಸ್ಯೆಗಳನ್ನೂ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪದರ ಪದರವಾಗಿ ವಿಶ್ಲೇಷಿಸಿದ ಅ.ನ.ಕೃ ಅವರು ಕನ್ನಡದ ಏಳಿಗೆ–ಉಳಿವಿಗೆ ಕನ್ನಡಿಗರು ಟೊಂಕ ಕಟ್ಟಿ ನಿಲ್ಲಬೇಕು ಎಂದು ಕರೆ ನೀಡಿದರು. ಇದರಿಂದ ಸ್ಫೂರ್ತಿಗೊಂಡ ಹಲವಾರು ಯುವಕರು ಒಟ್ಟುಗೂಡಿ ಕನ್ನಡ ನಾಡಿನಲ್ಲಿ ಕನ್ನಡಕ್ಕಾಗಿ, ಕನ್ನಡಿಗರ ಏಳಿಗೆಗಾಗಿ ಹೋರಾಡಲೇಬೇಕು ಎಂದು ಚಳುವಳಿಗೆ ಸಜ್ಜಾದರು.

ಈ ದಿಸೆಯಲ್ಲಿ ಕೋಣಂದೂರು ಲಿಂಗಪ್ಪ, ಪೂರ್ಣಚಂದ್ರ ತೇಜಸ್ವಿ, ಕೆ.ಆರ್. ಶಾಮಣ್ಣ, ಕೆ.ಎಚ್. ಶ್ರೀನಿವಾಸ್ ಮುಂತಾದವರು ಒಗ್ಗೂಡಿ ಕನ್ನಡ ಯುವಜನ ಸಭಾ ಎಂಬ ಸಂಘಟನೆಯನ್ನು ಸ್ಥಾಪಿಸಿದರು.



ಕೆ. ಹನುಮಂತಯ್ಯನವರೊಂದಿಗೆ ಅ.ನ.ಕೃ.

ಹಲವಾರು ಸಭೆಗಳು, ಸಮ್ಮೇಳನಗಳನ್ನು ರಾಜ್ಯದಾದ್ಯಂತ ನಡೆಸಿ ಕನ್ನಡ ಚಳುವಳಿಯ ಅಗತ್ಯತೆಯನ್ನು ಮನವರಿಕೆ ಮಾಡಿದ ನಂತರ, ಬೆಂಗಳೂರಿನ ಕೆಂಪೇಗೌಡ ರಸ್ತೆಯ ಮೈಸೂರು ವಾಣಿಜ್ಯ ಭವನದಲ್ಲಿ ದಿನಾಂಕ 4–2–62ರಂದು ಕನ್ನಡಿಗರ ಅಧಿವೇಶನವನ್ನು ನಡೆಸಲಾಯಿತು.

ನಾಡಿನ ಎಲ್ಲ ಕಡೆಯಿಂದಲೂ ಪ್ರತಿನಿಧಿಗಳು ಆಗಮಿಸಿದ್ದ ಈ ಸಭೆಯು ಕನ್ನಡ ಚಳುವಳಿಯ ಅಂಕುರಾರ್ಪಣಕ್ಕೆ ನಾಂದಿ ಹಾಡಿತು. ಕನ್ನಡ ಚಳುವಳಿಯ ಹೆಸರಿನಲ್ಲಿ ಇಷ್ಟೊಂದು ಭಾರೀ ಪ್ರಮಾಣದ ಸಭೆ ಹಿಂದೆಂದೂ ನಡೆದಿರಲಿಲ್ಲವೆಂಬುದು ಅಲ್ಲಿ ಅಂದು ನೆರೆದಿದ್ದ ಅನೇಕರ ಅಭಿಮತವಾಗಿತ್ತು.

ಇಂತಹ ಐತಿಹಾಸಿಕ ಸಮಾರಂಭದ ಅಧ್ಯಕ್ಷತೆಯ ಗೌರವವನ್ನು ಪಡೆದಿದ್ದವರು ನಾಟಕಕಾರ ಶ್ರೀರಂಗರು. ಉದ್ಘಾಟಕರು ರಾಜ್ಯದ ಮಾಜೀ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು. ಈ ಸಮ್ಮೇಳನದ ಪ್ರಮುಖ ರೂವಾರಿಗಳಾಗಿದ್ದವರು ಶ್ರೀ ಅ.ನ.ಕೃ. ಮತ್ತು ಮ. ರಾಮಮೂರ್ತಿಗಳು.

ಈ ಸಮ್ಮೇಳನದ ಮತ್ತೊಂದು ವೈಶಿಷ್ಟ್ಯವೆಂದರೆ ಕನ್ನಡ ಚಳುವಳಿಯ ಧ್ಯೇಯೋದ್ದೇಶಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶಕ್ಕಾಗಿ 'ಕನ್ನಡ ಯುವಜನ' ಎಂಬ ವಾರಪತ್ರಿಕೆಯನ್ನು ಆರಂಭಿಸಿದ್ದು. ಕನ್ನಡ ಚಳುವಳಿಯ ಇತಿಹಾಸದಲ್ಲಿ ಈ ಪತ್ರಿಕೆ ವಹಿಸಿದ ಪಾತ್ರ ಮಹತ್ತರವಾದುದು. ಪತ್ತೇದಾರಿ ಕಾದಂಬರಿಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪರಿಚಿತವಾಗಿದ್ದ ಮ. ರಾಮಮೂರ್ತಿಯವರು ಈ ಪತ್ರಿಕೆಯ ಸಂಪಾದಕರಾಗಿ ತಮ್ಮ ಧೀಮಂತ ಬರಹದಿಂದ ಕನ್ನಡಿಗರಲ್ಲಿ ಜಾಗೃತಿಯನ್ನು ಮೂಡಿಸತೊಡಗಿದರು.

ಕನ್ನಡ–ಕನ್ನಡಿಗರ ಹಿತರಕ್ಷಣೆಗಾಗಿ ಏರ್ಪಡಿಸಲಾಗಿದ್ದ ಈ ಸಮಾವೇಶದಲ್ಲಿ ಅನೇಕ ನಿರ್ಣಯಗಳನ್ನು ಕೈಗೊಂಡರೂ ಕನ್ನಡ ಚಿತ್ರರಂಗಕ್ಕೆ ಸಂಬಂಧಿಸಿದ ಹಾಗೆ ಕನ್ನಡ ಚಿತ್ರರಂಗದ ಏಳಿಗೆ, ಡಬ್ಬಿಂಗ್ ವಿರೋಧಿ ನೀತಿ ಮುಂತಾದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಇದರಿಂದ ಚಿತ್ರರಂಗದ ಉನ್ನತಿಗೆ ಅನುಕೂಲ ಉಂಟಾಗುವಂತಾಯಿತು.

ಕನ್ನಡ ಚಳುವಳಿಗೆ ರಾಮೋತ್ಸವದ ಪ್ರಭಾವ

ಕನ್ನಡಿಗರ ಸಮಾವೇಶದ ನಂತರ ಆ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಲ್ಲಿ ಹಲವನ್ನಾದರೂ ಕಾರ್ಯರೂಪಕ್ಕೆ ತರುವಲ್ಲಿ ಹೋರಾಟದ ಹಾದಿಯನ್ನು ಹಿಡಿಯಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಕೈಗೊಳ್ಳಬೇಕಾಯಿತು. ಅದರಲ್ಲಿ ಆರಂಭದ ಹೋರಾಟವಾಗಿ ಬೆಂಗಳೂರಿನಲ್ಲಿ ನಡೆಯುತ್ತಿದ್ದ ರಾಮೋತ್ಸವಗಳಲ್ಲಿ ಸ್ಥಳೀಯ ಕಲಾವಿದರಿಗೆ ಪ್ರಾಮುಖ್ಯತೆ ಕೊಡಬೇಕೆಂದು ರಾಮೋತ್ಸವದ ವ್ಯವಸ್ಥಾಪಕರನ್ನು ಒತ್ತಾಯಿಸಲಾಯಿತು. ಆದರೆ ಇದಕ್ಕೆ ಸೂಕ್ತವಾದ ಪ್ರತಿಕ್ರಿಯೆ ಲಭಿಸದಿದ್ದರಿಂದ ಚಾಮರಾಜಪೇಟೆಯ ರಾಮಸೇವಾ ಮಂಡಲಿಯವರು ನಡೆಸುತ್ತಿದ್ದ ರಾಮೋತ್ಸವದಲ್ಲಿ ಸಂಗೀತ ಸಾಮ್ರಾಜ್ಞಿ, ಗಾನ ವಿಶಾರದೆ ಎಂ.ಎಸ್. ಸುಬ್ಬುಲಕ್ಷ್ಮಿಯವರು ಸಂಗೀತ ಕಾರ್ಯಕ್ರಮವನ್ನು ನೀಡುವ ದಿನಾಂಕ 27.04.1962ರಂದು ಪ್ರತಿಭಟನೆಯನ್ನು ನಡೆಸಲು ತೀರ್ಮಾನಿಸಲಾಯಿತು.

ಅದರಂತೆ ನಗರದ ಚಿಕ್ಕ ಲಾಲ್‌ಬಾಗ್‌ನಿಂದ ಹಲವಾರು ಕನ್ನಡ ಸಂಘ-ಸಂಸ್ಥೆಗಳ ನೂರಾರು ಪ್ರತಿನಿಧಿಗಳು ಕನ್ನಡಪರ ಘೋಷಣೆಗಳನ್ನು ಕೂಗುತ್ತಾ ಶಾಂತಿಯುತವಾಗಿ, ಶಿಸ್ತಿನಿಂದ ಮೆರವಣಿಗೆಯಲ್ಲಿ ಕಾರ್ಯಕ್ರಮದ ಸ್ಥಳಕ್ಕೆ ಬಂದು ಪ್ರತಿಭಟನೆ ನಡೆಸಿದರು.

ಈ ಪ್ರತಿಭಟನೆಯು ರಾಮಸೇವಾ ಮಂಡಲಿಯ ಪಕ್ಷಪಾತ ಧೋರಣೆಯನ್ನು ವಿರೋಧಿಸಿ ಸ್ಥಳೀಯ ಕಲಾವಿದರಿಗೆ ಅವಕಾಶ ನೀಡಬೇಕೆಂಬ ಆಗ್ರಹವಾಗಿತ್ತೇ ಹೊರತು ಎಂ.ಎಸ್. ಸುಬ್ಬುಲಕ್ಷ್ಮಿಯವರ ವಿರುದ್ಧವಾಗಿರಲಿಲ್ಲ. ಆದರೆ ಈ ಪ್ರತಿಭಟನೆ ಮೂಡಿಸಿದ ಕಾವು ಮತ್ತು ಬೀರಿದ ಪರಿಣಾಮ ಅನಿರೀಕ್ಷಿತ-ಅದ್ಭುತವಾದುದು ಎಂದು ಹೇಳಬಹುದು.

ಸ್ಥಳೀಯ ಕಲಾವಿದರ ಅವಕಾಶಕ್ಕಾಗಿ ನಡೆದ ಈ ಹೋರಾಟವನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ನಮ್ಮವರೇ ಹಲವರು ಇದು ಸಂಗೀತ ಶಾರದೆಗೆ ಮಾಡಿದ

ಅವಮಾನ ಎಂದು ಚಳುವಳಿಗಾರರನ್ನು ದೂರಿದರು, ಆಕ್ಷೇಪಿಸಿದರು. ತಮಿಳು ಪತ್ರಿಕೆಗಳಂತೂ ಘಟನೆಯ ಸತ್ಯಾಂಶಗಳನ್ನು ತಿರುಚಿ ವರದಿ ಮಾಡಿದುವು. ಕನ್ನಡಿಗರನ್ನು ಭಾಷಾ ಅಂಧಾಭಿಮಾನಿಗಳೆಂದು ಜರಿದುವು.

ಮದರಾಸಿನಲ್ಲಿ ನೆಲೆಸಿದ್ದ ಇಬ್ಬರು ಕನ್ನಡ ಕಲಾವಿದರಂತೂ ತಾವೂ ಕನ್ನಡಿಗರೇ ಎಂಬುದನ್ನು ಮರೆತು 'ಕನ್ನಡಿಗರು ಇಂತಹ ಚಳುವಳಿಯನ್ನು ಮಾಡಬಾರದಿತ್ತು, ಕಲೆಗೆ ಭಾಷೆಯ ಬಣ್ಣ ಬೆರೆಸಬಾರದು' ಎಂದೆಲ್ಲಾ ಹೇಳಿಕೆ ಕೊಟ್ಟರು.

ಈ ಆಕ್ಷೇಪಣೆಗಳಿಗೆಲ್ಲಾ ಬೆಂಗಳೂರಿನ ಸಮಸ್ತ ಕನ್ನಡ ಸಂಘಗಳ ಪ್ರಾತಿನಿಧಿಕ ಸಂಘವಾದ ಕನ್ನಡ ಸಂಯುಕ್ತ ರಂಗವು ಅದರ ಪ್ರಧಾನ ಕಾರ್ಯದರ್ಶಿ ಹಾಗೂ 'ಕನ್ನಡ ಯುವಜನ' ಪತ್ರಿಕೆಯ ಸಂಪಾದಕರಾದ ಮ. ರಾಮಮೂರ್ತಿ ಹಾಗೂ ಸಹ ಕಾರ್ಯದರ್ಶಿಗಳಾದ ಎಂ.ವಿ. ಸುಬ್ಬರಾವ್ ಮತ್ತು ಎಂ.ವಿ. ವರದಯ್ಯನವರು ದಿನಾಂಕ 1.6.62ರಂದು ಇಂಗ್ಲೀಷಿನಲ್ಲಿ ಒಂದು ಸುದೀರ್ಘವಾದ ವಿವರಣೆಯನ್ನು ನೀಡಿ ಅದರಲ್ಲಿ ಅಂದು ತಾವು ನಡೆಸಿದ ಪ್ರತಿಭಟನಾ ಪ್ರದರ್ಶನದ ಅಗತ್ಯತೆ ಹಾಗೂ ಅನಿವಾರ್ಯತೆಯನ್ನು ವಿವರಿಸಿದರು.

United Front of Kannada Associations in Bangalore

206, Cickanna Gardens, Bangalore - 4

Gen. Secretary	Associate Secretary
M. Ramamurthy	**M.V. Subbarao**
Editor Kannada Yuvajana	**M.V. Varadaiah**

Brother and sister artists, writers and publicists,

We write this to you following information that we are victims of a tirade engineered against us for the past four months by certain Tamil newspapers apparently as a "reply" to the healthy campaign we have sponsored for succoring Kannada artists.

It is a pity that our detractors have given an anti-Tamil colour to this movement of ours. It is a greater pity that some of them have preferred to dub this as an auxillary to the separatist movement launched by the D M K in Madras State. We should like to declare categorically that we are

averse to any kind of separatism and are always prepared to fight this tendency tooth and nail. We have never seen eye to eye with the Dravida Munnetra Kazhagam and we don't propose to gang up with them.

All our movement stands for is to make the life of the average Kannadiga endurable and to create a respectable place for him in his own land. Surely, there is nothing reprehensible in this. We have programmed to prevail upon the State Government to declare Kannada as the State language, adopt Kannada as the language of the courts and also as the medium of instruction in educational institutions and to rename the State as Karnataka.

You will surely agree that this is well within the bounds of rationalism and also that there is no vestige of hatred for any other linguistic group of State discernible anywhere in this programme.

It may well be asked why we have signled out an old institution like the Ramaseva Mandali in Bangalore for our attack on the cultural front. This needs some explanation. Just to give you a background, it was the late Sri Bidaram Krishnappa, doyen of Karnataka Music of the State, who first initiated the habit of inviting musicians from Tamilnad to the State and created platform for them in his glorious institution, Sri Prasanna Sitarama Mandira, Mysore. It was also Sri Krishnappa who took the Vidwans from Tamilnad to the Mysore Palace, then a haven for all cultural giants, and got them palace honours. No less a man than His Highness Sri Krishnaraja Wodeyar, of revered memory, presided over these "vidwathsabhas" and suitably honoured the visiting virtuosi. We are sure that this service done by the late Sri Krishnappa to his brother artistes is too precious to be so easily forgotten.

Another doyen, the late Sri Tiger Varadachariar, spent a good number of years of his fruitful life in Mysore and readily reciprocated Sri Krishnappa's fine gesture and introduced a large number of Mysore musicians to Tamilnad. These, indeed, were days one would fondly cherish in one's memory.

But, to the dismay of everybody interested in healthy interstate cultural relations, after the demise of the late Sri Krishnappa, the Gayana Samaj of Bangalore preferred a step-motherly attitude towards local artists flouting the noble traditions set up by the two doyens. The local artist became a pariah in the Samaja and the subsequent office-bearers of the institution faithfully took up the strings of this unfortunate hate-campaign.

While this happened in Bangalore, it found its echo in the Prasanna Sita Rama Mandira at Mysore also.

These two institutions then found a blind follower in the Ramaseva Mandali of Chamarajpet, Bangalore, a tiny group of people who started conducting music performances during the Ramanavami season in a small way. This institution took upon itself to throw every Kannada artist overboard. Quite naturally, this suicidal policy adopted by this commercial-minded organisation run in the name of art provoked the wrath of the local press and music-lovers alike and strong resentment of this attitude poured into the press in a stream. When, in his presidential address at the 42nd Kannada Sahitya Sammelana in Udupi in December 1960, Sri A.N. Krishna Rao, a famed Kannada writer and a member of our advisory board, made a pointed reference to this organised affront to Kannada art, the press widely hailed him. This show of righteous indignation came to a logical culmination when, at a conference of Bangalore Kannadigas, one of the most successful conferences convened in the city in recent years, a strongly-worded

resolution was passed crying halt to the policy persued by the Mandali, which, incidentally, has now grown into a big money-making cultural organisation.

We requested the Mandali and similar institutions not to do away with the services of outside artistes -and we want this to be very clearly understood- but only to invite both local and outside artists on a fifty-fifty basis.

We should thankfully acknowledge here that the Rama Seva Samithi in another area of the city, Sheshadripuram, which happens to be much more well organised and more sincere institution than the Mandali, has readily responded to our request and is treating both Mysore and outside artistes alike.

But not so our friends from the Mandali. They believe in their dogged obstinacy and have refused to budge from their most unreasonable stand. This being the case, we had no other alternative but to stage a peaceful demonstration against them and this we did on April 27. We should like you to get this clear, that we never resorted to any violence but only led a procession through the main streets of the city with black flags and banners. A public meeting was also held without any untoward incident. There was no reason whatever for our Mandali friends to get panicky, but they did, and imported into the pandal precincts a whole posse of policemen, fully armed and led by senior officers. We were called hooligans and communists, but we never deserved this blame. In fact, nothing whatever hapened from our end and Smt. Subbulakshmi did not have to stop singing even for a single second. Meanwhile, we had successfully lodged our peaceful protest.

This is not a piece of self-aggrandisement, but we can assure you that our organisation is not an offshoot of some disgruntled Kannadigas, as some of those who don't

see eye to eye with us have made out. Ours is an organised, concerted movement voicing the concern, indignation and chagrin of Kannadigas in their hour of agony. Our organisation, far from being monoplised by communists and hooligans, is composed of some of the most outstanding men of letters, musicians, journalists, students, factory workers, corporators and members of the State Legislature. There are also office-bearers of over 50 organisations fighting for the legitimate rights and aspirations of the 20 million Kannadigas.

We need hold no apology for the cause we have espoused. But we would like to make one point very clear. While we are not at all opposed to Tamil artists performing on our soil - in fact, they are most welcome- we are not prepared to tolerate the superior airs they choose to sport. This is most insulting and not even the traditionally tolerant Kannadiga can put up with this. The Tamil artists should bear in mind that it is their duty to share the destiny of their brother artists in Karnataka. They have no right to trample on the sentiments of the Kannada people by associating themselves with blatantly mercenary organisations.

We tell the Tamil artists: Don't have anything to do with such institutions: reciprocate the goodwill of Kannadigas by inviting Kannada artists in large numbers to your State and when you sing in our State, see that 50 percent of your repertoire consists of Kannada songs.

We are sure this lengthy explanation convinces you about the real facts of the case. All we are agitating for is the creation of a "live and let-live" policy. After having said all this, would it be too presumptous on our part to enlist your co-operation in our fight against oppression and low commercialism?

1st June 1962

ಮುಂದಿನ ದಿನಗಳಲ್ಲಿ ಬೆಂಗಳೂರಿನ ಹಲವಾರು ಬಡಾವಣೆಗಳಲ್ಲಿ ಬಹಿರಂಗ ಸಭೆಗಳನ್ನು ಏರ್ಪಡಿಸಿ ಜನತೆಗೆ ಕನ್ನಡ ಚಳುವಳಿಯ ಧ್ಯೇಯ, ಧೋರಣೆಗಳನ್ನು ವಿವರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು.

ಕನ್ನಡ ನಾಡಿನ ಹಿರಿಯ ಸಾಹಿತಿಗಳೂ, ಸ್ವಾತಂತ್ರ್ಯ ಹೋರಾಟಗಾರರೂ ಆದ ವೀರಕೇಸರಿ ಸೀತಾರಾಮ ಶಾಸ್ತ್ರಿಗಳು, ತಿರುಮಲೆ ತಾತಾಚಾರ್ಯ ಶರ್ಮರು, ಅ.ನ.ಕೃಷ್ಣರಾಯರು, ಮ. ರಾಮಮೂರ್ತಿಗಳು, ನಾಡಿಗೇರ ಕೃಷ್ಣರಾಯರು ಮುಂತಾಗಿ ಅನೇಕ ಹಿರಿಯರೂ, ಸಾಹಿತಿಗಳು ಸಭೆಯಲ್ಲಿ ಜನರನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದರು.



ಮ. ರಾಮಮೂರ್ತಿ, ನಾಡಿಗೇರ ಕೃಷ್ಣರಾಯ, ಜಿ. ನಾರಾಯಣ, ಎಂ.ಎಸ್. ನಟರಾಜನ್ ಅವರೊಂದಿಗೆ ಅ.ನ.ಕೃ.

ಚಳುವಳಿಯ ಉದ್ದೇಶವನ್ನು ವಿವರವಾಗಿ ಮನದಟ್ಟಾಗುವಂತೆ ಅರ್ಥೈಸುತ್ತಿದ್ದ ಪ್ರತಿಯೊಬ್ಬ ಭಾಷಣಕಾರರೂ ಈ ಹೋರಾಟವು ಯಾವುದೇ ಭಾಷೆಯವರ ವಿರುದ್ಧವೂ ಅಲ್ಲವೆಂದು, ಕೇವಲ ಕನ್ನಡಿಗರ ಉಳಿವಿಗಾಗಿ ವಿಧಿ ಇಲ್ಲದೆ ಈ ಹೋರಾಟಕ್ಕಿಳಿಯಬೇಕಾಯಿತೆಂದೂ ವಿವರಿಸುತ್ತಿದ್ದರು.

ಕಣಗಾಲ್ ಪ್ರಭಾಕರ ಶಾಸ್ತ್ರಿ, ಹುಣಸೂರು ಕೃಷ್ಣಮೂರ್ತಿ, ಸಿ.ವಿ. ಶಿವಶಂಕರ್ ಇವರೇ ಮುಂತಾದ ಕನ್ನಡ ಚಿತ್ರರಂಗದ ಹಲವಾರು ಸಾಹಿತಿಗಳು ಸಂಯುಕ್ತ ರಂಗದ ಸಭೆಗಳಲ್ಲಿ ಭಾಷಣ ಮಾಡುತ್ತಿದ್ದರು. ನಟ ಉದಯಕುಮಾರ್ ಅವರಂತೂ ತಮ್ಮ ಸಿಂಹ ಘರ್ಜನೆಯಿಂದ ಚಳುವಳಿಯ ಸಭೆಗಳಲ್ಲಿ ಬಹು ಉತ್ಸಾಹದಿಂದ

ಭಾಗವಹಿಸುತ್ತಿದ್ದರು. ತಮ್ಮ ಸಿಂಹ ಘರ್ಜನೆಯಿಂದ ಸಭೆಗಳಲ್ಲಿ ವಿದ್ಯುತ್ ಸಂಚಾರವನ್ನುಂಟು ಮಾಡುತ್ತಿದ್ದರು.

ಈ ಸಂದರ್ಭದಲ್ಲಿ ತಮ್ಮ ಪ್ರತಿಕ್ರಿಯೆಯನ್ನು ನೀಡಿದ ತ್ರಿಭಾಷಾ ತಾರೆ ಎಂ.ಪಿ. ರಾಜಮ್ಮನವರು ಚಳುವಳಿಯ ಅಗತ್ಯತೆಯನ್ನು ಬೆಂಬಲಿಸಿದರು.

ಈ ಮಧ್ಯೆ ಎಂ.ಎಸ್. ಸುಬ್ಬುಲಕ್ಷ್ಮಿಯವರು ಅ.ನ.ಕೃ. ಮತ್ತು ಇತರೆ ಸಂಘ–ಸಂಸ್ಥೆಗಳವರು ನಡೆಸಿದ ಚಳುವಳಿ ಮತ್ತು ಪ್ರದರ್ಶನದಿಂದ ತಮಗೆ ಯಾವುದೇ ಹಾನಿಯಾಗಲಿಲ್ಲವೆಂದು ಸ್ಪಷ್ಟೀಕರಣ ನೀಡಿದರಲ್ಲದೆ ಕನ್ನಡಿಗರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಪ್ರತಿಭಟನೆ ನಡೆಸಿರುವುದರಲ್ಲಿ ತಪ್ಪೇನಿಲ್ಲ ಎಂದರು.

ಹೀಗೆ ರಾವೋತ್ಸವದ ಸಂದರ್ಭದಲ್ಲಿ ಆರಂಭವಾದ ಚಳುವಳಿ ಪ್ರಕಾಶಮಾನವಾಗಿ ದೇದೀಪ್ಯಮಾನವಾಗಿ ಎಲ್ಲ ಕಡೆ ಹಬ್ಬತೊಡಗಿತು. ಮಾನಸಿಕವಾಗಿ ಮೂಕವೇದನೆ ಅನುಭವಿಸುತ್ತಿದ್ದ ಹಲವರು ಧೈರ್ಯವಾಗಿ ಹೊರಬರತೊಡಗಿದರು. ಚಳುವಳಿಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದವರು ಹಲವರಾದರೆ, ನೇಪಥ್ಯದಲ್ಲಿದ್ದುಕೊಂಡು ಬೇಕಾದ ಸಹಾಯ–ಸಹಕಾರಗಳನ್ನು ನೀಡಿದವರು ಹಲವರು.

ಕನ್ನಡ ಚಿತ್ರ ನಿರ್ಮಾಣ–ತಾಯ್ನಾಡಿಗೆ ಮರಳಿದ ಕನ್ನಡ ನಿರ್ಮಾಪಕರು

ಕನ್ನಡ ನಾಡಿನಲ್ಲಿ ಕನ್ನಡದ ಅಸ್ತಿತ್ವಕ್ಕಾಗಿ, ಕನ್ನಡ ಚಿತ್ರಗಳ ಉಳಿವಿಗಾಗಿ ಹೋರಾಟ ನಡೆಯುತ್ತಿದ್ದರೆ, ಕನ್ನಡ ಚಿತ್ರ ತಯಾರಿಕೆಗೆ ಕನ್ನಡ ನಾಡಿನಲ್ಲಿ ಸೂಕ್ತ ಅನುಕೂಲತೆ, ಸೌಲಭ್ಯದ ವಾತಾವರಣ ಇರಲಿಲ್ಲ. ಕನ್ನಡ ಚಿತ್ರ ನಿರ್ಮಾಣವೆಲ್ಲ ಮದ್ರಾಸ್‌ನಲ್ಲಿ ನೆಲೆಯೂರಿತ್ತು. ಹಾಗಾಗಿ ಕನ್ನಡ ಕಲಾವಿದರು ಹಾಗೂ ತಂತ್ರಜ್ಞರೆಲ್ಲರ ವಾಸವಿದ್ದುದು ಚಿತ್ರ ನಿರ್ಮಾಣ ಕೇಂದ್ರವಾಗಿದ್ದ ಮದ್ರಾಸ್‌ನಲ್ಲಿ.

ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಹೋಗುತ್ತಿದ್ದ ಎಷ್ಟೋ ಮಂದಿಗೆ ಮದ್ರಾಸಿನಲ್ಲಿ ಉಳಿಯಲು ಜಾಗವಿರುತ್ತಿರಲಿಲ್ಲ. ದುಬಾರಿ ಹಣ ನೀಡಿ ಹೋಟೆಲುಗಳಲ್ಲಿ ಉಳಿದುಕೊಳ್ಳುವ ಸೌಲಭ್ಯವಾಗಲೀ ಅಥವಾ ಶಕ್ತಿಯಾಗಲೀ ಅವರಲ್ಲಿರುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಅವರ ನೆರವಿಗೆ ಬರುತ್ತಿದ್ದುದು–ಆಶ್ರಯ ನೀಡುತ್ತಿದ್ದುದು ಅಶ್ವತ್ಥನಾರಾಯಣ ಶೆಟ್ಟಿ ಅರ್ಥಾತ್ ಜನಪ್ರಿಯ ಗುಗ್ಗು. ಅವರಿರುತ್ತಿದ್ದುದೂ ಸಹ ಮದ್ರಾಸಿನಲ್ಲಿ ಬಾಡಿಗೆಯ ಮನೆಯಲ್ಲಿಯೇ. ಆದರೆ ಚಿತ್ರದಲ್ಲಿ ನಟಿಸುವ ತಮ್ಮಂತಹ ಕಲಾವಿದರ ಆರ್ಥಿಕ ಪರಿಸ್ಥಿತಿ, ಅಸಹಾಯಕತೆಯನ್ನೆಲ್ಲಾ ಚೆನ್ನಾಗಿ ಅರ್ಥಮಾಡಿಕೊಂಡಿದ್ದ ಅವರು ತಮ್ಮ ಹೃದಯ ವೈಶಾಲ್ಯತೆಯಿಂದ ಅವರಿಗೆಲ್ಲ ತಮ್ಮ ಜೊತೆಯಲ್ಲಿಯೇ ವಾಸಿಸಲು ಅವಕಾಶ ಮಾಡಿಕೊಡುತ್ತಿದ್ದರು. ಹಾಗಾಗಿ ಅವರ ನಿವಾಸವನ್ನು 'ಗುಗ್ಗು ಮಹಲ್' ಎಂದೇ ಕರೆಯಲಾಗುತ್ತಿತ್ತು.

ಸ್ವಲ್ಪ ಅನುಕೂಲವಿದ್ದ ಕಲಾವಿದರು ಹಾಗೂ ನಿರ್ಮಾಪಕರು ಸಹ ಮದ್ರಾಸಿನಲ್ಲಿ ಪ್ರತ್ಯೇಕವಾಗಿ ತಮ್ಮ ಅನುಕೂಲಕ್ಕೆ ತಕ್ಕಂತೆ ವಾಸ್ತವ್ಯ ಹೂಡಿದ್ದರು.

ಯಾವಾಗ ಅರವತ್ತರ ದಶಕದಲ್ಲಿ ಕನ್ನಡ ನಾಡು–ನುಡಿಯ ಬಗ್ಗೆ ಕನ್ನಡಿಗರಲ್ಲಿ ಜಾಗೃತಿ ಮೂಡಿ, ಅಭಿಮಾನವುಕ್ಕಿತೋ ಆಗ ಅದು ಚಳುವಳಿಯ ರೂಪ ಪಡೆಯಿತು.

ಆಗ ಕನ್ನಡ ಚಿತ್ರಗಳ ತಯಾರಿಕೆಯೂ ಹೆಚ್ಚತೊಡಗಿತು. ಕನ್ನಡ ಚಿತ್ರರಂಗ ಕನ್ನಡ ನಾಡಿನಲ್ಲಿ ನೆಲೆಯೂರಬೇಕಾದ ಅವಶ್ಯಕತೆ ಮನಗಾಣುವಂತಾಯಿತು.

ಬೇರೆ ರಾಜ್ಯಗಳಲ್ಲಿ ಆಯಾ ರಾಜ್ಯದ ಭಾಷಾ ಚಿತ್ರಗಳು ತಮ್ಮ ರಾಜ್ಯಗಳಲ್ಲಿಯೇ ಚಿತ್ರ ತಯಾರಿಸುವುದಕ್ಕೆ ಪ್ರೋತ್ಸಾಹಿಸುವುದಕ್ಕಾಗಿ ಅನೇಕ ರೀತಿಯ ನೆರವು ನೀಡುವ ಯೋಜನೆಗಳನ್ನು ಆಯಾ ರಾಜ್ಯ ಸರ್ಕಾರಗಳು ಹಮ್ಮಿಕೊಂಡಿದ್ದುವು. ಈ ಸೌಲಭ್ಯವನ್ನು ಕನ್ನಡ ಭಾಷೆಯ ಚಿತ್ರಗಳಿಗೂ ಕೊಡಬೇಕೆಂದು ಆಗ್ರಹ ಕೇಳಿಬರತೊಡಗಿತು.

ಕನ್ನಡ ಚಳುವಳಿಯು ನಿರೂಪಿಸಿದ್ದ ಹಲವಾರು ಬೇಡಿಕೆಗಳಲ್ಲಿ ಕನ್ನಡ ಚಿತ್ರಗಳು ನಾಡಿನಲ್ಲಿ ನೆಲೆಯೂರಲು ಬೇಕಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಪೂರ್ವಕವಾಗಿ ಆಗ್ರಹಿಸುವುದೂ ಒಂದು ಅಂಶವಾಗಿತ್ತು. ಇದೇ ಸಂದರ್ಭದಲ್ಲಿ ಮೈಸೂರಿನಲ್ಲಿ ಪ್ರೀಮಿಯರ್ ಸ್ಟುಡಿಯೋ ಸ್ಥಾಪಿಸಿ ಸ್ಥಳೀಯವಾಗಿ ಚಿತ್ರ ನಿರ್ಮಾಣಕ್ಕೆ ಕಾರಣರಾಗಿದ್ದ ಬಸವರಾಜಯ್ಯನವರು ಸರಕಾರಕ್ಕೆ ಅಹವಾಲೊಂದನ್ನು ಸಲ್ಲಿಸಿ ಒತ್ತಾಯಪಡಿಸಿದರು.

ಈ ಎಲ್ಲಾ ಬೇಡಿಕೆಗಳಿಗೆ ಹಾಗೂ ಕನ್ನಡ ಚಳುವಳಿಯ ಒತ್ತಾಯದಲ್ಲಿರುವ ಮಹತ್ವವನ್ನು ಮನಗಂಡ ಸರ್ಕಾರ ಅದಕ್ಕೆ ಸೂಕ್ತವಾಗಿ ಸ್ಪಂದಿಸಿತು. 1966ನೇ ಏಪ್ರಿಲ್‌ನಿಂದ ರಾಜ್ಯದಲ್ಲಿ ತಯಾರಾಗುವ ಎಲ್ಲ ಚಿತ್ರಗಳಿಗೆ ಸಬ್ಸಿಡಿ ನೀಡುವ ಯೋಜನೆಯನ್ನು ಜಾರಿಗೆ ತಂದಿತು.

ಕನ್ನಡ ಚಿತ್ರರಂಗದ ಉಳಿವಿಗಾಗಿ ಸರ್ಕಾರವು ರೂಪಿಸಿದ ಈ ಐತಿಹಾಸಿಕ ನಿರ್ಣಯವನ್ನು ಪ್ರಕಟಿಸಿದವರು ಅಂದಿನ ಹಣಕಾಸಿನ ಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗ್ಗಡೆಯವರು. ಈ ಸೌಲಭ್ಯವನ್ನು ಪ್ರಕಟಿಸುವುದರೊಂದಿಗೆ ಅದನ್ನು ಪಡೆಯಲು ಕೆಲವೊಂದು ಅರ್ಹತೆಗಳನ್ನು ವಿಧಿಸಿದರು.

ಅವುಗಳಲ್ಲಿ ಮುಖ್ಯವಾದುದೆಂದರೆ:

1. **ಸಹಾಯಧನ ಪಡೆಯುವ ಚಿತ್ರಗಳು ರಾಜ್ಯದಲ್ಲಿಯೇ ಸಂಪೂರ್ಣವಾಗಿ ತಯಾರಾಗಿರಬೇಕು.**
2. **ಚಿತ್ರ ನಿರ್ಮಾಪಕರು ತಮ್ಮ ಚಿತ್ರ ನಿರ್ಮಾಣ ಸಂಸ್ಥೆಯ ನೋಂದಣಿಯನ್ನು ರಾಜ್ಯದಲ್ಲಿಯೇ ಮಾಡಿರಬೇಕು.**
3. **ಬೇರೆ ಭಾಷೆಗಳಿಂದ ಡಬ್ ಆದ ಚಿತ್ರಗಳಿಗೆ ಸಬ್ಸಿಡಿ ಪಡೆಯಲು ಅರ್ಹತೆ ಇರುವುದಿಲ್ಲ.**

ಅಷ್ಟೇ ಅಲ್ಲದೆ ಕನ್ನಡ ನಿರ್ಮಾಪಕರನ್ನು ಉತ್ತೇಜಿಸುವ ಸಲುವಾಗಿ ಬೆಂಗಳೂರಿನ ಕಂಠೀರವ ಸ್ಟುಡಿಯೋದಲ್ಲಿ ಒಂದು ಲ್ಯಾಬೋರೇಟರಿಯನ್ನು ಸಹ ಸ್ಥಾಪಿಸಲಾಯಿತು. ಅಷ್ಟೇ ಅಲ್ಲದೆ ಕನ್ನಡ ಚಿತ್ರಗಳಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡುವ ಸಲುವಾಗಿ ಪ್ರತಿವರ್ಷವೂ ಕನ್ನಡದ ಮೂರು ಉತ್ತಮ ಚಿತ್ರಗಳಿಗೆ ಪ್ರಶಸ್ತಿಯನ್ನು ನೀಡುವ ಪದ್ಧತಿಯನ್ನೂ ಸಹ 1966ರಿಂದಲೇ ಜಾರಿಗೆ ಬರುವಂತೆ ಸರ್ಕಾರ ಘೋಷಿಸಿತು.

ಇದೇ ಸಮಯದಲ್ಲಿ ಚಿತ್ರರಂಗದ ಖ್ಯಾತ ನಟರಾಗಿದ್ದ ಟಿ.ಎನ್. ಬಾಲಕೃಷ್ಣ ಅವರು ಕನ್ನಡ ಚಿತ್ರೋದ್ಯಮ ರಾಜ್ಯದಲ್ಲಿ ನೆಲೆಯೂರಲೆಂಬ ಸದಾಶಯದಿಂದ ಸ್ಟುಡಿಯೋ ನಿರ್ಮಾಣಕ್ಕೆ ಸನ್ನದ್ಧರಾದರು. ಸರ್ಕಾರವೂ ಸಹ ಇವರ ನೆರವಿಗೆ ಬಂದು ಕೆಂಗೇರಿ ಬಳಿ ಅಗತ್ಯವಾದ ಜಾಗವನ್ನು ಮಂಜೂರು ಮಾಡಿತು. ಆ ಜಾಗದಲ್ಲಿ ಬಾಲಕೃಷ್ಣ ಅವರು ಕನ್ನಡ ಜನರ ಅಭಿಮಾನದ ದ್ಯೋತಕವಾಗಿ ತಮ್ಮ ಸ್ಟುಡಿಯೋ ನಿರ್ಮಾಣಕ್ಕೆ ಕನ್ನಡ ಜನತೆಯ ಸಹಾಯವನ್ನು ನಿರೀಕ್ಷಿಸಿ ಸಾಂಕೇತಿಕವಾಗಿ ಒಂದು ರೂಪಾಯಿಯ ಕೂಪನ್‌ಗಳನ್ನು ಮುದ್ರಿಸಿ ಮಾರಾಟ ಮಾಡಿದರು. ಹೀಗೆ ಜನತೆಯ ಅಭಿಮಾನ, ಸಹಕಾರದಿಂದ ನಿರ್ಮಿತವಾದ ಈ ಸ್ಟುಡಿಯೋಗೆ ಅಭಿಮಾನ್ ಸ್ಟುಡಿಯೋ ಎಂದೇ ಹೆಸರನ್ನು ಇಟ್ಟರು.

ಇಷ್ಟೆಲ್ಲ ಮೂಲಭೂತ ಸೌಕರ್ಯಗಳು, ಅಂದರೆ – ಸ್ಟುಡಿಯೋ, ಸಹಾಯಧನ, ತೆರಿಗೆ ವಿನಾಯಿತಿ, ಸರ್ಕಾರದ ಪ್ರೋತ್ಸಾಹ, ಕನ್ನಡ ಜನತೆಯ ಅಭಿಮಾನ ಹರಿದುಬಂದುದರ ಫಲವಾಗಿ ಮದ್ರಾಸಿನಿಂದ ಕನ್ನಡ ಚಿತ್ರೋದ್ಯಮ ಕನ್ನಡ ನೆಲದತ್ತ ಸಾಗಿಬರಲೇಬೇಕಾದ ಅನಿವಾರ್ಯತೆ ಬರಲೇಬೇಕಾಯಿತು. ಹಾಗಾಗಿ ಕನ್ನಡ ಚಿತ್ರೋದ್ಯಮ ಕನ್ನಡ ನಾಡಿನಲ್ಲಿ ನೆಲೆಯೂರಿತು. ನಂತರದಲ್ಲಿ ಕನ್ನಡ ಚಿತ್ರರಂಗ ತನ್ನ ದಾಪುಗಾಲಿನಿಂದ ಯಶಸ್ಸಿನ ದಾರಿಯಲ್ಲಿ ಮುನ್ನುಗ್ಗಿದ್ದು ಒಂದು ಇತಿಹಾಸವೇ ಸರಿ.

ಚಿತ್ರಗಳಲ್ಲಿ ಕನ್ನಡತನ

ಹೀಗೆ ಅಸ್ಥಿರತೆಯ ದಾರಿಯಲ್ಲಿದ್ದ ಚಿತ್ರರಂಗ ಸ್ಥಿರವಾಗಿ ನೆಲೆಯೂರಲು ಆರಂಭಿಸಿದ ಮೇಲೆ ಚಿತ್ರ ನಿರ್ಮಾಣದಲ್ಲಿ ಅನೇಕ ಬದಲಾವಣೆಗಳು ಕಂಡುಬರತೊಡಗಿದವು. ಪ್ರತಿಯೊಂದು ಚಿತ್ರದಲ್ಲಿಯೂ ಕನ್ನಡತನ ಮೂಡಿಬರತೊಡಗಿದುವು.

ಕನ್ನಡದಲ್ಲಿ ಕನ್ನಡ ಸಾಹಿತಿಗಳ ಕಾದಂಬರಿ, ಕತೆಗಳನ್ನು ಬಳಸಿಕೊಂಡು ಚಿತ್ರಗಳು ಬರಲಾರಂಭಿಸಿದುವು. ಕೇವಲ ಸಾಹಿತ್ಯಪ್ರಿಯರಿಗೆ ಮಾತ್ರ ಸೀಮಿತವಾಗಿದ್ದ ಕನ್ನಡ ಸಾಹಿತ್ಯ ಕನ್ನಡ ಚಿತ್ರರಸಿಕರಿಗೂ ಸಿಗುವಂತಾಯಿತು. ಅಲ್ಲದೆ ಕನ್ನಡ ಕವಿಶ್ರೇಷ್ಠರ

ಹಲವಾರು ಕವನಗಳನ್ನು ಚಿತ್ರಗಳಲ್ಲಿ ಅಳವಡಿಸಿಕೊಂಡು ಜನಪ್ರಿಯವಾಗತೊಡಗಿದುವು. ಕನ್ನಡ ಚಿತ್ರಗಳು ರಾಜ್ಯ ಪ್ರಶಸ್ತಿ, ರಾಷ್ಟ್ರ ಪ್ರಶಸ್ತಿ ಗಳಿಸಿದುವು.

ಈ ಎಲ್ಲಾ ಬೆಳವಣಿಗೆಗಳಿಗೂ ನಾಂದಿ ಹಾಡುವುದರಲ್ಲಿ ಅರವತ್ತರ ದಶಕದ ಕನ್ನಡ ಚಳುವಳಿ ಹಾಗೂ ಅದಕ್ಕೆ ಸೂಕ್ತವಾಗಿ ಸ್ಪಂದಿಸಿ ಪ್ರೋತ್ಸಾಹ ನೀಡಿದ ಸರ್ಕಾರದ ರೀತಿ, ಕ್ರಮಗಳು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಮೈಸೂರಿನಲ್ಲಿಯೇ ನೆಲೆನಿಂತ ಡಿ. ಶಂಕರ್‌ಸಿಂಗ್

ಕನ್ನಡ ನಾಡಿನಲ್ಲಿ ಚಿತ್ರ ನಿರ್ಮಾಣಕ್ಕೆ ಸೂಕ್ತ ವಾತಾವರಣವಿಲ್ಲ, ಅಗತ್ಯವಾದ ಸೌಲಭ್ಯವಿಲ್ಲ ಎಂಬ ನೆಪವನ್ನೊಡ್ಡಿ ಬಹಳಷ್ಟು ಮಂದಿ ನಿರ್ಮಾಪಕರು ಮದ್ರಾಸಿನಲ್ಲಿ ಚಿತ್ರ ನಿರ್ಮಾಣಕ್ಕೆ ತೊಡಗಿದ್ದುದು ತಿಳಿದ ವಿಷಯವೇ.

ಈ ಸಂದರ್ಭದಲ್ಲಿ ಬಹಳವಾಗಿ ಕನ್ನಡ ಚಿತ್ರ ನಿರ್ಮಾಣವಾಗುತ್ತಿದ್ದುದು ರಾತ್ರಿಯ ವೇಳೆ. ಕನ್ನಡ ಚಿತ್ರ ನಿರ್ಮಾಣಕ್ಕೆ ಅಲ್ಲಿಯ ಸ್ಟುಡಿಯೋ ಮಾಲೀಕರಿಂದ ಸಾಕಷ್ಟು ನೆರವು ಸಿಗುತ್ತಿರಲಿಲ್ಲವೆಂಬುದು ಕಾರಣವಾಗಿದ್ದರೆ, ಮತ್ತೊಂದು ಕಾರಣ ರಾತ್ರಿಯಲ್ಲಿ ಚಿತ್ರದ ಶೂಟಿಂಗ್ ನಡೆಸುವಾಗ ವಿಧಿಸುತ್ತಿದ್ದ ಬಾಡಿಗೆ ಕಡಿಮೆ ದರದಲ್ಲಿ ಸಿಗುತ್ತಿದ್ದುದು ಒಂದು ಪ್ರಮುಖ ಕಾರಣವೆನ್ನುವುದು ಕೆಲವರ ಅಭಿಪ್ರಾಯವಾಗಿತ್ತು.

ಕನ್ನಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಗಳನ್ನು ತಯಾರಿಸಿರುವ ಮಹಾತ್ಮ ಪಿಕ್ಚರ್ಸ್‌ನ ಡಿ. ಶಂಕರ್ ಸಿಂಗರು ಯಾವುದೇ ಸಂದರ್ಭದಲ್ಲಿಯೂ ತಮ್ಮ ಚಿತ್ರ ನಿರ್ಮಾಣವನ್ನು ಮೈಸೂರು ಬಿಟ್ಟು ಬೇರೆ ಸ್ಥಳಕ್ಕೆ ಸ್ಥಳಾಂತರಿಸಲಿಲ್ಲವೆಂಬುದು ಅತ್ಯಂತ ಗಮನಾರ್ಹವಾದ ವಿಚಾರ.

ಕನ್ನಡದ ಮೂವರು ಪ್ರಸಿದ್ಧ ನಿರ್ಮಾಪಕರಾಗಿದ್ದ ಡಿ. ಶಂಕರ್‌ಸಿಂಗ್, ಬಿ. ವಿಠಲಾಚಾರ್ಯ ಮತ್ತು ವಿಶ್ವನಾಥ ಶೆಟ್ಟಿ –ಈ ಮೂವರು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಆಗಸ್ಟ್ 15, 1947ರಂದು ಚಿತ್ರ ನಿರ್ಮಾಣ ಸಂಸ್ಥೆಯನ್ನು ಆರಂಭಿಸಿದರು. ಮಹಾತ್ಮ ಗಾಂಧಿಯವರ ಸ್ವಾತಂತ್ರ್ಯ ಹೋರಾಟ, ದೇಶಭಕ್ತಿಯಿಂದ ಪ್ರೇರಿತರಾಗಿ ನಿರ್ಮಾಣ ಸಂಸ್ಥೆಯನ್ನು ಮಹಾತ್ಮ ಪಿಕ್ಚರ್ಸ್ ಎಂಬ ಹೆಸರಿನಲ್ಲಿ ಕರೆಯಲಾಯಿತು.

ಕಾಲಾನಂತರದಲ್ಲಿ ಬಿ. ವಿಠಲಾಚಾರ್ಯ ಮತ್ತು ವಿಶ್ವನಾಥ ಶೆಟ್ಟಿ ಅವರುಗಳು ಪ್ರತ್ಯೇಕವಾದರೂ, ಶಂಕರ್ ಸಿಂಗ್ ಅವರು ಸಂಸ್ಥೆಯ ಹೆಸರಿನಲ್ಲಿ ಹಲವಾರು ಕನ್ನಡ ಚಿತ್ರಗಳನ್ನು ತಯಾರಿಸಿದರು.

ಶಂಕರ್ ಸಿಂಗ್ ಅವರು ತಮ್ಮ ಚಿತ್ರ ನಿರ್ಮಾಣಕ್ಕೆ ಆರಿಸಿಕೊಂಡಿದ್ದು ಮೈಸೂರನ್ನೇ. ಅಲ್ಲಿ ಸೂಕ್ತ ಅವಕಾಶವಿಲ್ಲವೆಂದು ಬೇರೆ ನಿರ್ಮಾಪಕರು ಮದ್ರಾಸ್ ಕಡೆ ಹೊರಟರೂ, ಶಂಕರ್‌ಸಿಂಗ್ ಮಾತ್ರ ತಳ ಊರಿದ್ದು ಮೈಸೂರಿನಲ್ಲಿ. ಮೈಸೂರಿನಲ್ಲಿಯೇ ಕನ್ನಡ ಚಿತ್ರಗಳಿಗೆ ಭದ್ರವಾದ ಬುನಾದಿ ಹಾಕಬೇಕು ಎಂಬ ಸಂಕಲ್ಪ ಅವರದ್ದಾಗಿತ್ತು. ಚಿತ್ರ ನಿರ್ಮಾಣಕ್ಕೆ ಮೈಸೂರೇ ಪ್ರಶಸ್ತವಾದುದು. ನಗರದ ಸುತ್ತಮುತ್ತಲಿರುವ ಪ್ರಾಕೃತಿಕ ಸೌಂದರ್ಯ, ಸುಂದರ ದೃಶ್ಯಗಳು ಹೊರಾಂಗಣ ಚಿತ್ರೀಕರಣಕ್ಕೆ ಅತ್ಯಂತ ಸೂಕ್ತವಾದುದು ಎಂದು ಅಭಿಪ್ರಾಯಪಟ್ಟಿದ್ದರು. ಹಾಗಾಗಿ ತಮ್ಮ ನಿಲುವಿಗೆ ಬದ್ಧರಾಗಿದ್ದ ಅವರು ಮೈಸೂರು ಬಿಟ್ಟು ತೆರಳಲಿಲ್ಲ. ತಮ್ಮ ಎಲ್ಲ ಚಿತ್ರಗಳನ್ನು ಮೈಸೂರಿನಲ್ಲಿಯೇ ತಯಾರಿಸಿದರು. ಅವರ ಈ ನಿಲುವು ಪ್ರಶಂಸನೀಯವೇ ಹೌದು.

ಚಳುವಳಿಯ ಪರಿಣಾಮ

1960ರ ದಶಕದಲ್ಲಿ ನಡೆದ ಕನ್ನಡ ಚಳುವಳಿಯು ಸಾಕಷ್ಟು ಪರಿಣಾಮಕಾರಿ ಫಲಿತಾಂಶವನ್ನು ನೀಡಿತು. ಸಂಯುಕ್ತ ರಂಗದ ಸಭೆಗಳಲ್ಲಿ ಮೂಡಿಸಿದ ಕನ್ನಡ ವಾತಾವರಣದ ಅರಿವಿನಿಂದ ಕನ್ನಡಿಗರಲ್ಲಿ ಕನ್ನಡ ಜಾಗೃತಿ ಮೂಡತೊಡಗಿತು. ಕನ್ನಡದ ವಾತಾವರಣ ಬೆಳೆಯತೊಡಗಿತು.

ಪರಭಾಷೆಯ ನಾಮಫಲಕಗಳ ಬದಲಿಗೆ ಕನ್ನಡ ನಾಮಫಲಕಗಳು ಕಾಣತೊಡಗಿದುವು. ರಸ್ತೆಗಳಲ್ಲಿ ಕನ್ನಡದ ಹೆಸರುಗಳ ನಾಮಕರಣವಾಯಿತು. ಉದ್ಯಾನವನಗಳಲ್ಲಿ ಕನ್ನಡೇತರ ಹಾಡುಗಳ ಬದಲಿಗೆ ಕನ್ನಡದ ಹಾಡುಗಳು ಕೇಳಿಸತೊಡಗಿದುವು. ಕನ್ನಡ ಚಿತ್ರಗಳು ಹೆಚ್ಚಾದುವು. ಕನ್ನಡ ನಾಟಕಗಳಿಗೆ ಬೇಡಿಕೆ ಹೆಚ್ಚಾಯಿತು. ಕನ್ನಡ ಸಂಗೀತಗಾರರಿಗೆ-ಕಲಾವಿದರಿಗೆ ಪ್ರೋತ್ಸಾಹ ದೊರಕಲಾರಂಭಿಸಿತು. ಕನ್ನಡ ಪತ್ರಿಕೆಗಳ ಪ್ರಸಾರ ಅಧಿಕವಾಯಿತು. ಹೊಸ ಹೊಸ ಪತ್ರಿಕೆಗಳು, ನಿಯತಕಾಲಿಕೆಗಳು ಪ್ರಕಾಶನಗೊಳ್ಳಲಾರಂಭಿಸಿದುವು.

ಹೀಗೆ ಸರ್ವಾಂಗೀಣವಾಗಿ ಕನ್ನಡದ ವಾತಾವರಣ ಪಸರಿಸಲು ಕನ್ನಡ ಚಳುವಳಿಯು ನೆರವಾಯಿತು.

ಕನ್ನಡ ಚಿತ್ರರಂಗದ ಮೇಲೆ ಚಳುವಳಿಯ ಪರಿಣಾಮ

ಕನ್ನಡ ಚಿತ್ರರಂಗದ ಮೇಲೆ ಕನ್ನಡ ಚಳುವಳಿಯಿಂದ ಆದ ಪ್ರಭಾವವಂತೂ ಅಪಾರ. ಬಹುಶಃ ಯಾವುದೇ ಕ್ಷೇತ್ರದ ಮೇಲೆ ಆದ ಪ್ರಭಾವಕ್ಕಿಂತ ಚಿತ್ರರಂಗದ ಮೇಲೆ ಆದ ಪ್ರಭಾವ ಅತ್ಯಧಿಕ ಹಾಗೂ ಅನನ್ಯ.

ಚಳುವಳಿಯ ಆರಂಭಕ್ಕೆ ಮುಂಚೆ ಕನ್ನಡ ಚಿತ್ರಗಳ ಸಂಖ್ಯೆ ಗಣನೀಯವಾಗಿರಲಿಲ್ಲ. ಒಂದು ಅಂದಾಜಿನಂತೆ, 1958ರಲ್ಲಿ ಏಳು ಚಿತ್ರಗಳು ತಯಾರಾದರೆ, 1959ರಲ್ಲಿ

ಆರು ಚಿತ್ರಗಳು ಮಾತ್ರ ತಯಾರಾದುವು. ಈ ವೇಳೆಗೆ ಇಪ್ಪತ್ತೈದು ವರ್ಷಗಳನ್ನು ಕಂಡಿದ್ದ ಕನ್ನಡ ಚಿತ್ರರಂಗದಲ್ಲಿ ಕಲಾವಿದರು ನಿರುದ್ಯೋಗಿಗಳಾಗುವ ಸಂದರ್ಭ ಬಂದಿತ್ತು.

ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಚಿತ್ರರಂಗದ ಕಲಾವಿದರೆಲ್ಲರೂ ಸೇರಿ "ಕನ್ನಡ ಕಲಾವಿದರು" ಎಂಬ ಸಂಸ್ಥೆಯ ಹೆಸರಿನಲ್ಲಿ ರಾಜ್ಯದಾದ್ಯಂತ ಕನ್ನಡ ನಾಟಕಗಳನ್ನು ಆಡತೊಡಗಿದರು. ಅಲ್ಲದೆ ಸಹಕಾರ ತತ್ವದಡಿಯಲ್ಲಿ 'ರಣಧೀರ ಕಂಠೀರವ' ಎಂಬ ಐತಿಹಾಸಿಕ ಚಿತ್ರವನ್ನು ನಿರ್ಮಿಸಿದರು. ರಾಜಕುಮಾರ್, ಜಿ.ವಿ. ಅಯ್ಯರ್, ಬಾಲಕೃಷ್ಣ ಮತ್ತು ನರಸಿಂಹರಾಜು ಅವರುಗಳೇ ಈ ಚಿತ್ರದ ನಿರ್ಮಾಪಕರು. ಇದು ಕನ್ನಡದ 100ನೇ ವಾಕ್ಚಿತ್ರವೇ ಅಲ್ಲದೆ ಕನ್ನಡದ ಮೊದಲ ಐತಿಹಾಸಿಕ ಚಿತ್ರವೂ ಆಗಿತ್ತು.

ಅಂದು ಬೆಂಗಳೂರಿನಲ್ಲಿ ಕನ್ನಡ ಚಿತ್ರಗಳಿಗೆ ಯಾವ ಪರಿಸ್ಥಿತಿ ಇತ್ತೆಂದರೆ, ಚಿತ್ರಮಂದಿರಗಳು ಸಿಗುವುದೇ ದುರ್ಲಭವಾಗಿತ್ತು. ಚಿತ್ರಮಂದಿರಗಳು ಸಾಲು ಸಾಲಾಗಿದ್ದ ಕೆಂಪೇಗೌಡ ರಸ್ತೆಯಲ್ಲಿ ಕನ್ನಡ ಭಾಷೆಯ ಚಿತ್ರಗಳಿಗೆ ಆದ್ಯತೆ ಇರಲಿಲ್ಲ. ಪ್ರತಿಷ್ಠಿತ ಚಿತ್ರಮಂದಿರಗಳೆಂದು ಹೆಸರುವಾಸಿಯಾಗಿದ್ದ ಕೆಲವು ಚಿತ್ರಮಂದಿರಗಳು ಹಿಂದಿ ಚಿತ್ರಗಳನ್ನು ಪ್ರದರ್ಶಿಸುವುದರಲ್ಲಿಯೇ ತಮ್ಮ ಘನತೆ ಎಂದು ತಿಳಿದು ಹಿಂದಿ ಚಿತ್ರಗಳಿಗೆ ಮೀಸಲಾಗಿದ್ದರೆ, ಬೇರೆ ಉಳಿದ ಚಿತ್ರಮಂದಿರಗಳು ಕನ್ನಡವನ್ನು ಹೊರತುಪಡಿಸಿದ ಅನ್ಯಚಿತ್ರಗಳಿಗೆ ಮೀಸಲಾಗಿದ್ದವು.

ಕನ್ನಡ ಚಿತ್ರ ಕಲಾವಿದರು ಸಹಕಾರ ತತ್ವದ ಆಧಾರದ ಮೇಲೆ ಒಟ್ಟುಗೂಡಿ ತಯಾರಿಸಿದ 'ರಣಧೀರ ಕಂಠೀರವ' ಚಿತ್ರವು ಬಿಡುಗಡೆಯಾದಾಗ ಅದಕ್ಕೆ ಸೂಕ್ತವಾದ ಚಿತ್ರಮಂದಿರವೇ ದೊರಕದೆ, ಕೊನೆಗೆ ಹಿಮಾಲಯ ಚಿತ್ರಮಂದಿರದಲ್ಲಿ ಬಿಡುಗಡೆಯಾಗುವ ಅನಿವಾರ್ಯ ಹಾಗೂ ಅಸಹಾಯಕ ಪರಿಸ್ಥಿತಿ ಒದಗಿಬಂದಿತು.

ಆದರೆ ಚಳುವಳಿಯು ಆರಂಭವಾದ ಮೇಲೆ, ಇತಿಹಾಸವೇ ಬದಲಾಯಿತು. ಕೆಂಪೇಗೌಡ ರಸ್ತೆಯಲ್ಲಿ ಇದ್ದ ಚಿತ್ರಮಂದಿರಗಳ ಮೇಲೆ ಕನ್ನಡ ಚಿತ್ರ ಪ್ರದರ್ಶಿಸಬೇಕೆಂಬ ಒತ್ತಡ ಕನ್ನಡ ಚಿತ್ರ ಪ್ರೇಮಿಗಳಿಂದ, ಕನ್ನಡ ಚಳುವಳಿಗಾರರಿಂದ ಹೆಚ್ಚಾಯಿತು. ಚಳುವಳಿಗಾರರ ಆಕ್ರೋಶಕ್ಕೆ ಪರಭಾಷಾ ಚಿತ್ರ ಪ್ರದರ್ಶನವನ್ನೇ ಮಾಡುತ್ತಿದ್ದ ಚಿತ್ರಮಂದಿರಗಳ ಮಾಲೀಕರು ವಿಧಿಯಿಲ್ಲದೆ ಮಣಿಯಲೇಬೇಕಾಯಿತು.

ಹಿಂದಿ ಚಿತ್ರಗಳಿಗೇ ಮೀಸಲಾಗಿದ್ದ ಕೆಂಪೇಗೌಡ ರಸ್ತೆಯ, ಏಕೆ ಇಡೀ ರಾಜ್ಯದ, ಪ್ರತಿಷ್ಠೆಯ ಚಿತ್ರಮಂದಿರವೆಂದೇ ಹೆಗ್ಗಳಿಕೆ ಹೊಂದಿದ್ದ 'ಅಲಂಕಾರ್'ನಲ್ಲಿ ಪ್ರಸಿದ್ಧ

ಕಾದಂಬರಿಕಾರ ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ 'ದೇವರ ಕೂಸು' ಆಧಾರಿತ 'ಬಂಗಾರಿ' ಮೊಟ್ಟಮೊದಲಿಗೆ ಪ್ರದರ್ಶಿತವಾಯಿತು. ಅದೇ ರೀತಿ ಕೇವಲ ಹಿಂದಿ ಚಿತ್ರಗಳನ್ನೇ ಪ್ರದರ್ಶಿಸುತ್ತಿದ್ದ ಪ್ರಭಾತ್ ಚಿತ್ರಮಂದಿರದಲ್ಲಿ ಪ್ರಥಮವಾಗಿ 'ಗೌರಿ' ಚಿತ್ರ ಪ್ರದರ್ಶನಗೊಂಡಿತು. ಅದೇ ಟಾಕೀಸಿನ ಎದುರುಗಡೆ ಇದ್ದ ಸ್ಟೇಟ್ಸ್ ಚಿತ್ರಮಂದಿರದಲ್ಲಿ 'ಕನ್ಯಾರತ್ನ' ಪ್ರದರ್ಶಿತವಾಯಿತು. ಅಲ್ಲಿಂದ ಮುಂದೆ ನಿರಂತರ ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಪರಿಪಾಠವನ್ನು ಚಿತ್ರಮಂದಿರದ ಮಾಲೀಕರು ಮುಂದುವರೆಸಿದರು.

ಆ ಸಂದರ್ಭದಲ್ಲಿ ಚಳುವಳಿಗಾರರು ಬಹು ಉತ್ಸಾಹದಿಂದ ಚಿತ್ರಮಂದಿರಗಳಿಗೆ ತೋರಣ, ಬಲೂನ್ ಕಟ್ಟಿ ಬೂದುಗುಂಬಳಕಾಯಿ, ತೆಂಗಿನಕಾಯಿ ಒಡೆದು ಕರ್ಪೂರದ ಆರತಿಯನ್ನು ಮಾಡಿ ತಮ್ಮ ಹರ್ಷವನ್ನು ವ್ಯಕ್ತಪಡಿಸುತ್ತಿದ್ದರು. ಚಿತ್ರಮಂದಿರಗಳ ಮುಂದೆ ಸ್ಟಾರ್‌ಗಳನ್ನು (ಬಿದಿರು ನಕ್ಷತ್ರಗಳನ್ನು) ತೂಗುಹಾಕುವ ಸಂಪ್ರದಾಯ ಆರಂಭವಾಗಿದ್ದು ಆಗಲೇ.

ಬೆಂಗಳೂರಿನ ಜಯಚಾಮರಾಜೇಂದ್ರ ರಸ್ತೆಯಲ್ಲಿದ್ದ ಭಾರತ್ ಚಿತ್ರಮಂದಿರ ಕೇವಲ ಇಂಗ್ಲಿಷ್ ಚಿತ್ರಗಳಿಗೆ ಮೀಸಲಾಗಿತ್ತು. ಅದರ ಮಾಲೀಕರು ಷರೀಫ್ ಅವರು. ನಂತರ ಅವರು ತಮ್ಮ ಕನ್ನಡ ಭಾಷಾಭಿಮಾನವನ್ನು, ತಮ್ಮ ಚಿತ್ರಮಂದಿರದಲ್ಲಿ ಕನ್ನಡ ಚಿತ್ರವನ್ನೇ ಪ್ರದರ್ಶಿಸುವ ಮೂಲಕ, ಇತರರಿಗೆ ಮಾದರಿಯಾದರು.

ಹೀಗಾಗಿ ಇಲ್ಲಿಂದ ಆರಂಭವಾದ ಕನ್ನಡ ಚಿತ್ರಗಳ ಪ್ರದರ್ಶನ ಅಡೆತಡೆಯಿಲ್ಲದೆ ಬೆಂಗಳೂರಿನಲ್ಲಷ್ಟೇ ಅಲ್ಲದೆ ಇಡೀ ರಾಜ್ಯದ ಎಲ್ಲ ಚಿತ್ರಮಂದಿರಗಳಲ್ಲಿಯೂ ನಡೆಯತೊಡಗಿತು. ಅಷ್ಟೇ ಅಲ್ಲ, ಯಾವುದೇ ಹೊಸ ಚಿತ್ರಮಂದಿರ ಆರಂಭವಾದರೂ ಅದು ಕನ್ನಡ ಚಿತ್ರ ಪ್ರದರ್ಶನದೊಂದಿಗೇ ಆರಂಭವಾಗುವ ಅಘೋಷಿತ ಸಂಪ್ರದಾಯವೂ ಜಾರಿಗೆ ಬಂದಿತು. ಒಂದು ವೇಳೆ ಹೊಸ ಚಿತ್ರಮಂದಿರವನ್ನು ಆರಂಭಿಸಿದ ಮಾಲೀಕರು ಕನ್ನಡ ಚಿತ್ರವಲ್ಲದೆ ಬೇರೆ ಭಾಷೆಯ ಚಿತ್ರ ಪ್ರದರ್ಶನ ಮಾಡುವ ಸಾಹಸ ಕೈಗೊಂಡರೆ, ಚಳುವಳಿಗಾರರ ಆಕ್ರೋಶಕ್ಕೆ ಗುರಿಯಾಗುತ್ತಿತ್ತು. ಬೆಂಗಳೂರಿನ ಸುಬೇದಾರ್ ಛತ್ರ ರಸ್ತೆಯಲ್ಲಿರುವ ಕಪಾಲಿ ಚಿತ್ರಮಂದಿರದಲ್ಲಿ ಪ್ರಾರಂಭದ ಚಿತ್ರವಾಗಿ ಕನ್ನಡ ಚಿತ್ರವನ್ನು ಪ್ರದರ್ಶಿಸದೆ ಸಿನೆರಮಾ ಚಿತ್ರವನ್ನು ಪ್ರದರ್ಶಿಸಿದ್ದು ಕನ್ನಡ ಚಿತ್ರಪ್ರೇಮಿಗಳ ಕೋಪಕ್ಕೆ ಕಾರಣವಾಗಿ ಚಿತ್ರಮಂದಿರಕ್ಕೆ ಅಪಾರ ಹಾನಿಯಾಯಿತು.

ಕನ್ನಡ ಚಳುವಳಿಯ ಕಾವು ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಿದ್ದರಿಂದ ಕನ್ನಡ ಚಿತ್ರಗಳ ಸಂಪಾದನೆ, ಹಿಂದಿಗಿಂತ ಉತ್ತಮಗೊಂಡು ಹೆಚ್ಚು ಹೆಚ್ಚು ಚಿತ್ರಗಳ ನಿರ್ಮಾಣಕ್ಕೆ ಅನುಕೂಲವಾಯಿತು.

ಈ ಸಂದರ್ಭದಲ್ಲಿ ನಿರ್ಮಾಪಕರ ಒಲವು ಕನ್ನಡ ಕಾದಂಬರಿಗಳತ್ತ ಹರಿದು ಕಾದಂಬರಿ ಆಧಾರಿತ ಚಿತ್ರಗಳು ನಿರ್ಮಾಣವಾಗತೊಡಗಿದವು. ಚಿತ್ರಗಳಲ್ಲಿ ಕನ್ನಡತನ ಕಾಣಲಾರಂಭಿಸಿತು. ಕೃಷ್ಣಮೂರ್ತಿ ಪುರಾಣಿಕರ ಜನಪ್ರಿಯ ಕಾದಂಬರಿ 'ಧರ್ಮದೇವತೆ'ಯನ್ನು ಆಧರಿಸಿ 'ಕರುಣೆಯೇ ಕುಟುಂಬದ ಕಣ್ಣು' ರಜತ ಪರದೆಯ ಮೇಲೆ ಬಂದ ಪ್ರಥಮ ಕನ್ನಡ ಕಾದಂಬರಿ ಆಧಾರಿತ ಚಿತ್ರವಾಯಿತು. ಎ.ಸಿ. ನರಸಿಂಹಮೂರ್ತಿ ಮತ್ತು ಮಿತ್ರರು ನಿರ್ಮಿಸಿದ ಈ ಚಿತ್ರವನ್ನು ನಿರ್ದೇಶಿಸಿದವರು ಟಿ.ವಿ. ಸಿಂಗ್ ಠಾಕೂರ್ ಅವರು. ನಂತರದಲ್ಲಿ ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರ ಜನಪ್ರಿಯ ಕೃತಿಗಳು ಚಲನಚಿತ್ರವಾಗಿ ನಿರ್ಮಿತವಾದುವು ಹಾಗೂ ಯಶಸ್ವಿಯಾದುವು.

ಇದರಲ್ಲಿ ಬಹುಮುಖ್ಯವಾಗಿ ಹೆಸರಿಸಬಹುದಾದರೆ ಕಾದಂಬರಿಕಾರ ಟಿ.ಕೆ. ರಾಮರಾವ್ ಅವರ ಕಾದಂಬರಿ ಆಧಾರಿತ, ಸಿದ್ಧಲಿಂಗಯ್ಯ ಅವರು ನಿರ್ದೇಶಿಸಿ, ರಾಜಕುಮಾರ್–ಭಾರತಿ ಅಭಿನಯಿಸಿದ 'ಬಂಗಾರದ ಮನುಷ್ಯ'. ಇದು ಕನ್ನಡ ಚಿತ್ರರಂಗದಲ್ಲಿ ಇತಿಹಾಸವನ್ನೇ ಸೃಷ್ಟಿಸಿತು. 104 ವಾರಗಳು ಅಂದರೆ ಎರಡು ವರ್ಷಗಳು ಪ್ರದರ್ಶನಗೊಂಡು ಹಿಂದಿನ ಎಲ್ಲ ಚಿತ್ರಗಳ ವಿಕ್ರಮವನ್ನು ಮೀರಿಸಿತು. ಈ ಎಲ್ಲಾ ಬದಲಾವಣೆಗಳು ಸಾಧ್ಯವಾಗಿದ್ದು ಕನ್ನಡ ಚಳುವಳಿಯಿಂದ ಮಾತ್ರ ಎಂದು ಧಾರಾಳವಾಗಿ ಹೇಳಬಹುದು.

ಚಳುವಳಿಯಿಂದ ಪ್ರೇರಿತರಾದ ಅನೇಕ ಚಿತ್ರ ಸಾಹಿತಿಗಳು ಚಿತ್ರಗಳಲ್ಲಿ ಕನ್ನಡಾಭಿಮಾನ ಕುರಿತಂತೆ ಸಾಹಿತ್ಯವನ್ನು ರಚಿಸತೊಡಗಿದರು. ನಾಡು–ನುಡಿ, ನೆಲ–ಜಲದ ಬಗ್ಗೆ ಅಭಿಮಾನಪೂರಿತ ಗೀತೆಗಳು, ಸಂಭಾಷಣೆಗಳು ಎಲ್ಲ ಚಿತ್ರಗಳಲ್ಲೂ ಮೂಡಿಬರತೊಡಗಿತು. ಕೆಲವೊಮ್ಮೆ ಅಂತಹ ಸಂಭಾಷಣೆ, ಗೀತೆಗಳಿಗಂದೇ ಚಿತ್ರಕಥೆಯಲ್ಲಿ ಸೂಕ್ತ ಸನ್ನಿವೇಶಗಳನ್ನು ಅಳವಡಿಸಿಕೊಳ್ಳುವುದೂ ನಡೆಯುತ್ತಿತ್ತು. ಈ ರೀತಿಯ ಚೇತೋಹಾರಿ ಕನ್ನಡಪರ ಸಂಭಾಷಣೆಯಿಂದ ಪ್ರೇಕ್ಷಕರ ಕನ್ನಡ ಪ್ರಜ್ಞೆಯನ್ನು ಎಚ್ಚರಿಸತೊಡಗಿದರು.

ಪ್ರೇಕ್ಷಕರೂ ಸಹ ಈ ರೀತಿಯ ಸಂಭಾಷಣೆಗೆ ಸ್ಪಂದಿಸುತ್ತಿದ್ದ ರೀತಿ ಗಮನಾರ್ಹವಾಗಿರುತ್ತಿತ್ತು. ಚಿತ್ರದ ಸಂಭಾಷಣೆಯಲ್ಲಿ ಕನ್ನಡ, ನಾಡು–ನುಡಿಯ ಬಗ್ಗೆ ಪ್ರಸ್ತಾಪವಾದಾಗಲೆಲ್ಲ ಕರತಾಡನದಿಂದ ಹಾಗೂ ಶಿಳ್ಳೆಗಳಿಂದ ಅದನ್ನು ಸ್ವಾಗತಿಸುತ್ತಿದ್ದರು.

ಕು.ರಾ. ಸೀತಾರಾಮಶಾಸ್ತ್ರಿ, ಎಸ್.ಕೆ. ಕರೀಂಖಾನ್, ಹುಣಸೂರು ಕೃಷ್ಣಮೂರ್ತಿ, ಕಣಗಾಲ್ ಪ್ರಭಾಕರ ಶಾಸ್ತ್ರಿ, ಸಿ.ವಿ. ಶಿವಶಂಕರ್, ಆರ್.ಎನ್. ಜಯಗೋಪಾಲ್, ಜಿ.ವಿ. ಅಯ್ಯರ್, ಚಿ. ಸದಾಶಿವಯ್ಯ, ಚಿ. ಉದಯಶಂಕರ್ ಮುಂತಾದ

ಗೀತರಚನೆಕಾರರು ಕನ್ನಡದ ಅಭಿಮಾನವನ್ನು ಪ್ರೇರೇಪಿಸುವ ಗೀತೆಗಳನ್ನು ರಚಿಸಿ ಔಚಿತ್ಯಪೂರ್ಣವಾಗಿ ಚಿತ್ರದಲ್ಲಿ ಸೇರಿಸತೊಡಗಿದರು.

ಇಷ್ಟೇ ಅಲ್ಲ, ಕನ್ನಡ ಕವಿಗಳ ಕವನಗಳನ್ನು ಕನ್ನಡ ಚಿತ್ರಗಳಲ್ಲಿ ಅಳವಡಿಸುವ ಕಾರ್ಯ ಆರಂಭವಾಗಿದ್ದು ಸಹ ಕನ್ನಡ ಚಳುವಳಿಯ ಪರಿಣಾಮದಿಂದಲೇ ಎಂದು ಹೇಳಬಹುದು. ಅಲ್ಲಿಯವರೆಗೆ ಸಾಹಿತ್ಯಾಭಿಮಾನಿಗಳ ರಸಾಸ್ವಾದನೆಗೆ ಮಾತ್ರ ಮೀಸಲಾಗಿದ್ದ ಹಲವಾರು ಕವನಗಳನ್ನು ಚಿತ್ರಗೀತೆಗಳಾಗಿ ಚಿತ್ರಗಳಲ್ಲಿ ಬಳಸಿಕೊಂಡ ನಂತರ ನಾಡಿನ ಶ್ರೇಷ್ಠ ಕವಿಗಳ ಹಲವಾರು ರಚನೆಗಳು ಜನಸಾಮಾನ್ಯರ ಬಾಯಲ್ಲಿಯೂ ಹಾಡುವಂತಾಯಿತು.

1963ರಲ್ಲಿ ಬಿಡುಗಡೆಯಾದ 'ಗೌರಿ' ಚಿತ್ರದಲ್ಲಿ ಸುಪ್ರಸಿದ್ಧ ಸಂಗೀತ ನಿರ್ದೇಶಕರಾದ ಜಿ.ಕೆ. ವೆಂಕಟೇಶ್ ಅವರು ರಾಷ್ಟ್ರಕವಿ, ರಸಋಷಿ ಕುವೆಂಪು ಅವರ ರಚನೆಯಾದ 'ಯಾವ ಜನ್ಮದ ಮೈತ್ರಿ ಈ ಜನ್ಮದಲ್ಲಿ ಬಂದು' ಎಂಬ ಗೀತೆಯನ್ನು ಚಿತ್ರದಲ್ಲಿ ಅಳವಡಿಸುವ ಮೂಲಕ ಕನ್ನಡ ಕವಿಗಳ ಗೀತೆಗಳನ್ನು ಕನ್ನಡಿಗರಿಗೆ ಪರಿಚಯಿಸುವ ಸತ್ಸಂಪ್ರದಾಯವನ್ನು ಅನುಸರಿಸಿದರು. ಖ್ಯಾತ ಹಿನ್ನೆಲೆ ಗಾಯಕಿ ಎಸ್. ಜಾನಕಿ ಹಾಡಿದ ಈ ಗೀತೆ ಇಂದಿಗೂ ಸಹ ಜನಪ್ರಿಯವಾಗಿದೆ. ಅಲ್ಲಿಂದೀಚೆಗೆ ಅನೇಕ ಕವಿಗಳ ಗೀತೆಗಳು ಚಿತ್ರಗಳಲ್ಲಿ ಅಳವಡಿಸಲ್ಪಟ್ಟು ಚಿತ್ರರಸಿಕರ ಮನತಣಿಸಿವೆ.

ಕನ್ನಡ ಚಿತ್ರರಂಗದ ಚಳುವಳಿಗೆ ಬಲ ತಂದ ಮತ್ತೊಂದು ಚಿತ್ರ 'ಕಣ್ತೆರೆದು ನೋಡು'. ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ಹಾಡಿದ 'ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ನಾವು ಕೀಳ್ ಎಂಬುವರ ಬಾಯ್ ಮುಚ್ಚ ಬನ್ನಿ' ಎಂಬ ಗೀತೆ ಅತ್ಯಂತ ಜನಪ್ರಿಯವಾಗಿ ಚಳುವಳಿ ಸಭೆಗಳ ಆರಂಭಕ್ಕೆ ಮೊದಲು ಹಾಡಲಾಗುತ್ತಿತ್ತು. ಈ ಗೀತೆಯನ್ನು ಚಳುವಳಿ ಗೀತೆ ಎಂದೇ ಪರಿಗಣಿಸಲಾಗಿತ್ತು.

ಡಬ್ಬಿಂಗ್ ಚಿತ್ರ ನಿರ್ಮಾಣಕ್ಕೆ ವಿರೋಧ

ಐವತ್ತರ ದಶಕದಲ್ಲಿ ಕನ್ನಡ ಚಿತ್ರ ನಿರ್ಮಾಣದ ಸಂಖ್ಯೆ ಗಣನೀಯವಾಗಿರಲಿಲ್ಲ. 1955, 1956ರಲ್ಲಿ ತಲಾ 13 ಚಿತ್ರಗಳು ನಿರ್ಮಾಣವಾಗಿದ್ದರೆ, 1957ರಲ್ಲಿ 11 ಚಿತ್ರಗಳು ತಯಾರಾಗಿದ್ದವು. 1958ರಲ್ಲಿ ಅದು ಏಳು ಚಿತ್ರಗಳಿಗಿಳಿದು, 1959ರಲ್ಲಿ 8 ಚಿತ್ರಗಳು ತಯಾರಾದವು. ಹಾಗಾಗಿ ಕನ್ನಡ ಚಿತ್ರರಂಗದ ಮೇಲೆ ಅವಲಂಬಿತರಾದವರೆಲ್ಲ ಜೀವನ ನಿರ್ವಹಣೆಗೆ ಪರದಾಡಬೇಕಾಗಿ ಬಂತು. ಅಂತಹ ಪರಿಸ್ಥಿತಿಯಲ್ಲಿ ಕೆಲವರು ಮೊರೆ ಹೊಕ್ಕಿದ್ದು ಡಬ್ಬಿಂಗ್ ಸಂಸ್ಕೃತಿಗೆ.

ಡಬ್ಬಿಂಗ್ ಎಂದರೆ ಬೇರೆ ಭಾಷೆಯಲ್ಲಿ ತಯಾರಾದ ಚಿತ್ರಕ್ಕೆ ಕನ್ನಡ ಭಾಷೆಯ ಧ್ವನಿ ಜೋಡಿಸುವುದು. ಚಿತ್ರದ ನಟ-ನಟಿಯರೆಲ್ಲರೂ ಮೂಲಭಾಷೆಯ ಚಿತ್ರದಲ್ಲಿದ್ದವರೇ ಆಗಿರುತ್ತಾರೆ. ಆದರೆ ಅವರ ತುಟಿ ಚಲನೆಗೆ ಹೊಂದಿಕೊಂಡಂತೆ ಕನ್ನಡ ಸಂಭಾಷಣೆಯನ್ನು ಚಿತ್ರ ಸಾಹಿತಿಗಳು ಬರೆದರೆ, ಕನ್ನಡ ಭಾಷೆಯ ಜ್ಞಾನ ಉಳ್ಳವರು, ಮೂಲಭಾಷೆಯ ನಟ-ನಟಿಯರ ಪಾತ್ರಗಳ ತುಟಿ ಚಲನೆಗೆ ಹೊಂದಿಕೊಳ್ಳುವಂತೆ ಮಾತನಾಡುವುದು ಅರ್ಥಾತ್ ಕಂಠದಾನ ಮಾಡುವುದು. ಇದೇ ಡಬ್ಬಿಂಗ್ ಸಂಸ್ಕೃತಿಯ ಮೂಲತತ್ವ

ಕನ್ನಡ ಭಾಷೆಗೆ ಅಂತಹ ಹತ್ತಾರು ಬೇರೆ ಬೇರೆ ಭಾಷೆಯ ಚಿತ್ರಗಳು ಡಬ್ ಆಗಿವೆ. ಸಿ.ಐ.ಡಿ., ಸತಿ ಸಾವಿತ್ರಿ, ಗಿರಿಜಾ ಕಲ್ಯಾಣ, ಮಾಯಾ ಮಚ್ಛೇಂದ್ರ, ಸೀತಾರಾಮ ಕಲ್ಯಾಣ, ಸೀತಾ, ಮಾಯಾ ಬಜಾರ್, ಜಂಬೋನಗರ ಪ್ರವೇಶ, ಶ್ರೀ ಕೃಷ್ಣಾರ್ಜುನ ಯುದ್ಧ, ಜಗದೇಕ ವೀರ, ಇತ್ಯಾದಿ ಇತ್ಯಾದಿ.

ಡಬ್ಬಿಂಗ್ ಚಿತ್ರಗಳು ಬಂದ ಪ್ರಾರಂಭದಲ್ಲಿ ಈ ಡಬ್ಬಿಂಗ್ ಚಿತ್ರಗಳಿಂದ, ಡಬ್ಬಿಂಗ್ ಸಂಸ್ಕೃತಿಯಿಂದ ಕನ್ನಡ ಚಿತ್ರಗಳಿಗೆ ಭಾರೀ ಹೊಡೆತ ಬೀಳುತ್ತದೆ, ಅದು ಕನ್ನಡ ಚಿತ್ರಗಳಿಗೆ ಮಾರಕ ಹಾಗೂ ಅಪಾಯಕಾರಿ ಎಂದು ಕೆಲ ಚಿತ್ರಪ್ರೇಮಿಗಳು ತಮ್ಮ ವಿರೋಧವನ್ನು ಪತ್ರಿಕೆಗಳಲ್ಲಿ ಲೇಖನಗಳ ಮೂಲಕ ವ್ಯಕ್ತಪಡಿಸತೊಡಗಿದರು.

ಆದರೆ ಕೆಲವು ಹಿರಿಯ ಚಿತ್ರಸಾಹಿತಿಗಳು, ಅದರಲ್ಲಿಯೂ ಪ್ರಮುಖವಾಗಿ ಡಬ್ಬಿಂಗ್ ಚಿತ್ರಗಳ ಮೂಲ ಸಾಹಿತ್ಯವನ್ನು ಕನ್ನಡಕ್ಕೆ ಹಾಗೆಯೇ ಭಟ್ಟಿ ಇಳಿಸಿ ಸಂಪಾದನೆ ಮಾಡುತ್ತಿದ್ದವರು ಮತ್ತು ಕಂಠದಾನ ಮಾಡುತ್ತಿದ್ದವರು ಡಬ್ಬಿಂಗ್ ಪರ ನಿಲುವು ತಾಳಿ ಅದನ್ನು ಸಮರ್ಥಿಸಿಕೊಳ್ಳ ಹತ್ತಿದರು.

ಚಿತ್ರ ಸಾಹಿತಿಗಳು ಹಾಗೂ ಕಂಠದಾನ ಕಲಾವಿದರ ಈ ನಿಲುವನ್ನು ಒಪ್ಪದ ಕನ್ನಡ ಭಾಷಾ ಪ್ರೇಮಿಗಳು ತಮ್ಮ ವಿರೋಧವನ್ನು ತೀವ್ರಗೊಳಿಸಿದರು. ಪತ್ರಿಕೆಗಳಲ್ಲಿ ಡಬ್ಬಿಂಗ್ ಹಾವಳಿಯ ಪರ-ವಿರೋಧಗಳ ಬಗ್ಗೆ ಚರ್ಚೆಯೇ ಆರಂಭವಾಗಿ ವಿರೋಧದ ಪ್ರತಿಕ್ರಿಯೆಯೇ ಜಾಸ್ತಿಯಾಯಿತು.

ಸಮಸ್ತ ಕನ್ನಡಿಗರ ಸಾಂಸ್ಕೃತಿಕ-ಸಾಹಿತ್ಯಿಕ ಮುಖವಾಣಿಯಾದ ಕನ್ನಡ ಸಾಹಿತ್ಯ ಪರಿಷತ್ ಕೂಡ ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ಮಾರಕವಾದ ಈ ಅನಿಷ್ಟ ಪದ್ಧತಿಯನ್ನು ವಿರೋಧಿಸಿ ಒಂದು ನಿರ್ಣಯವನ್ನು ಸಹ ಕೈಗೊಂಡಿತು. ಅಷ್ಟೇ ಅಲ್ಲದೆ, ದಿನಾಂಕ 4.2.1962ರಂದು ಬೆಂಗಳೂರಿನಲ್ಲಿ ನಡೆದ ಕನ್ನಡಿಗರ ಬೃಹತ್ ಸಮಾವೇಶ-ಕನ್ನಡ

ಯುವಜನ ಸಭಾ-ದಲ್ಲಿ ಕೈಗೊಂಡ ಹಲವು ನಿರ್ಣಯಗಳಲ್ಲಿ ಕನ್ನಡ ಚಿತ್ರರಂಗದ ಏಳಿಗೆ ಮತ್ತು ಡಬ್ಬಿಂಗ್ ವಿರೋಧಿ ನೀತಿಯ ಬಗ್ಗೆಯೂ ಕೈಗೊಂಡ ನಿರ್ಣಯಗಳು ಪ್ರಮುಖವೆನಿಸಿದುವು.

ಈ ವೇಳೆಗೆ ಬೆಂಗಳೂರಿನಲ್ಲಿ ಕನ್ನಡ ಚಿತ್ರಪ್ರೇಮಿಗಳು ಒಗ್ಗೂಡಿ "ಕನ್ನಡ ಚಿತ್ರಪ್ರೇಮಿಗಳ ಸಂಘ" ಎಂಬ ಸಂಸ್ಥೆಯನ್ನು ಪ್ರಾರಂಭ ಮಾಡಿ ವರ್ಷದ ಅತ್ಯುತ್ತಮ ಚಿತ್ರ, ಶ್ರೇಷ್ಠ ನಟ, ಶ್ರೇಷ್ಠ ನಟಿ, ದಿಗ್ದರ್ಶಕ ಮುಂತಾದ ಅನೇಕ ಪ್ರಶಸ್ತಿಗಳನ್ನು ನೀಡುವ ಸಂಪ್ರದಾಯವನ್ನು ಆರಂಭಿಸಿದರು.

ಬಿ.ವಿ. ಅರಸುಕುಮಾರ್ ಅವರು ಅಧ್ಯಕ್ಷರಾಗಿ ಈ ಸಂಘದ ಚಾಲನಾಶಕ್ತಿ ಯಾಗಿದ್ದರು. ಅವರು ಮುಂದೆ ಕನ್ನಡ ಚಿತ್ರ ನಿರ್ಮಾಪಕರೂ ಆಗಿ ನಿರ್ಮಿಸಿದ 'ಬಂಗಾರದ ಹೂ' ರಾಷ್ಟ್ರಪ್ರಶಸ್ತಿಯನ್ನು ಗಳಿಸಿತು.

ಕೇವಲ ಕೆಲವೇ ಚಿತ್ರಸಾಹಿತಿಗಳು ಮತ್ತು ಕಂಠದಾನ ಕಲಾವಿದರಿಗೆ ಪ್ರಯೋಜನವಾಗುತ್ತಿದ್ದ ಈ ಡಬ್ಬಿಂಗ್ ಪಿಡುಗಿನಿಂದ ಬಹುತೇಕ ಕನ್ನಡದ ಕಲಾವಿದರು, ತಂತ್ರಜ್ಞರುಗಳಿಗೆ ಯಾವುದೇ ರೀತಿಯ ಪ್ರಯೋಜನವೂ ಆಗುತ್ತಿರಲಿಲ್ಲ. ಕನ್ನಡ ಪ್ರತಿಭೆ ಬೆಳಕಿಗೆ ಬಾರದೇ ಸೊರಗುವಂತಾಗಿತ್ತು.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಕನ್ನಡ ಚಿತ್ರಪ್ರೇಮಿಗಳ ಸಂಘ ಹಾಗೂ ಕನ್ನಡ ಚಳುವಳಿಗಾರರು ಒಗ್ಗೂಡಿ ಕನ್ನಡ ಚಳುವಳಿಯ ಮತ್ತೊಂದು ರೂಪವಾಗಿ ಡಬ್ಬಿಂಗ್ ವಿರೋಧಿ ಚಳುವಳಿಯನ್ನು ಆರಂಭಿಸಿದರು. ಚಳುವಳಿಯ ಮುಂಚೂಣಿಯಲ್ಲಿದ್ದ ಎಲ್ಲ ನಾಯಕರೂ ಈ ಹೋರಾಟಕ್ಕೆ ಬೆಂಬಲವಿತ್ತರು. ಕನ್ನಡ ಪ್ರತಿಭೆಯನ್ನು ಕತ್ತು ಹಿಸುಕಿ ಸಾಯಿಸುವ ಈ ಡಬ್ಬಿಂಗ್ ಪ್ರವೃತ್ತಿ ಅವರ ಪ್ರಗತಿಗೆ ಹೇಗೆ ಕೊಡಲಿಪೆಟ್ಟು ಬೀಸುತ್ತದೆ ಎಂದು ಮನವರಿಕೆ ಮಾಡಲಾಯಿತು. ಇದರಿಂದ ಪ್ರಭಾವಿತರಾದ ಹಲವಾರು ಮಂದಿ ನಟ-ನಟಿಯರು ಡಬ್ಬಿಂಗ್ ಚಿತ್ರಗಳಿಗೆ ಕಂಠದಾನ ಮಾಡಲು ತಮ್ಮ ಅಸಮ್ಮತಿಯನ್ನು ಸೂಚಿಸಿದರು.

ಹೀಗೆ ಕನ್ನಡ ಚಳುವಳಿಗಾರರು, ಚಿತ್ರ ಪ್ರೇಮಿಗಳು, ಚಿತ್ರ ನಟ-ನಟಿಯರು ಎಲ್ಲರೂ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಇದರಿಂದಾಗಿ ಡಬ್ಬಿಂಗ್ ಸಂಸ್ಕೃತಿ ಸಂಪೂರ್ಣವಾಗಿ ನೆಲಕಚ್ಚುವುದರೊಂದಿಗೆ ಕನ್ನಡ ಚಿತ್ರ ಪ್ರಗತಿಗೆ ಮಾರಕವಾಗಿದ್ದ ಈ ಅನಿಷ್ಟ ಪದ್ಧತಿ ಹಾಗೆಯೇ ಕಮರಿಹೋಯಿತು.

ಮತ್ತೆ ವಕ್ಕರಿಸಲಿದ್ದ ಡಬ್ಬಿಂಗ್ ಸಂಸ್ಕೃತಿ

'ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷಿಯೊಳಗೆ' ಎಂಬಂತೆ ಮಾಯವಾಗಿ, ಅಸ್ತಿತ್ವವನ್ನೇ ಕಳೆದುಕೊಂಡಿದ್ದ ಡಬ್ಬಿಂಗ್ ಸಂಸ್ಕೃತಿ 1990ರ ಆರಂಭದಲ್ಲಿ ಮತ್ತೆ ಕಾಲಿಡಲು ಪ್ರಾರಂಭಿಸಿತು. ಅದು ದೂರದರ್ಶನದ ಮೂಲಕ.

ಹಿಂದಿ ಚಿತ್ರನಟ ಸಂಜಯ್ ಖಾನ್ 'Sword of Tippusultan' ಎಂಬ ಹೆಸರಿನಲ್ಲಿ ಹಿಂದಿ ಭಾಷೆಯಲ್ಲಿ ಧಾರಾವಾಹಿಯನ್ನು ದೂರದರ್ಶನಕ್ಕಾಗಿ ತಯಾರಿಸುವ ಕಾರ್ಯ ಕೈಗೊಂಡರು. 'ಮೈಸೂರು ಹುಲಿ' ಎಂದೇ ಖ್ಯಾತನಾದ ಟಿಪ್ಪುವಿನ ಬಗೆಗಿನ ಧಾರಾವಾಹಿಯನ್ನು ತಯಾರಿಸಿ ದೂರದರ್ಶನದಲ್ಲಿ ಪ್ರಸರಣ ಮಾಡುವ ಯೋಜನೆಯದಾಗಿತ್ತು. ತಯಾರಿಕೆಯ ನಂತರ ಅದನ್ನು ಎಲ್ಲಾ ಭಾರತೀಯ ಭಾಷೆಗಳಿಗೂ ಡಬ್ ಮಾಡಿ ಆಯಾ ದೂರದರ್ಶನ ಕೇಂದ್ರಗಳಿಂದ ಪ್ರಸಾರ ಮಾಡುವ ಕಾರ್ಯಕ್ರಮವಿತ್ತು.

ಕನ್ನಡದಲ್ಲಿ ಡಬ್ಬಿಂಗ್ ಸಂಸ್ಕೃತಿಗೆ ಮೊದಲಿನಿಂದಲೂ ವಿರೋಧವಿದ್ದ ಕಾರಣ ಅದನ್ನು ಕನ್ನಡಕ್ಕೆ ಡಬ್ ಮಾಡುವುದಕ್ಕೆ ಕನ್ನಡ ಕಲಾವಿದರು ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಆದರೆ ನಿರ್ಮಾಪಕರು ಕನ್ನಡಿಗರ ಈ ನಿಲುವನ್ನು ಹಗುರವಾಗಿ ತೆಗೆದುಕೊಂಡು ಕನ್ನಡಿಗರ ವಿರೋಧಕ್ಕೆ ಕ್ಯಾರೇ ಎನ್ನಲಿಲ್ಲ. ಅಲ್ಲದೆ ತಮ್ಮ ನಿಲುವಿಗೇ ಬದ್ಧರಾಗಿ ಡಬ್ಬಿಂಗ್ ಕಾರ್ಯದಲ್ಲಿ ಮುಂದುವರೆದಾಗ, ಇಡೀ ಕನ್ನಡ ಚಿತ್ರರಂಗವೇ ಒಟ್ಟಾಗಿ ನಿಂತು ನಿರ್ಮಾಪಕರ ಈ ನಿಲುವನ್ನು ತೀವ್ರವಾಗಿ ಪ್ರತಿಭಟಿಸಿತು.

ಡಾ. ರಾಜಕುಮಾರ್ ಸೇರಿದಂತೆ ಸಮಸ್ತ ಕನ್ನಡ ಚಿತ್ರರಂಗ ಹಾಗೂ ಕನ್ನಡ ಪ್ರೇಮಿಗಳು ಪ್ರಬಲವಾದ ಪ್ರತಿಭಟನೆಯನ್ನು ತೋರಿ ಶತಾಯ ಗತಾಯ ಕನ್ನಡಕ್ಕೆ ಡಬ್ ಆದ 'Sword of Tippusultan' ಧಾರಾವಾಹಿಯ ದೂರದರ್ಶನ ಪ್ರಸಾರಕ್ಕೆ ಅವಕಾಶವನ್ನು ನೀಡುವುದಿಲ್ಲ ಎಂದು ಪ್ರತಿರೋಧವನ್ನು ತೋರಿದರು. ವಾರ್ತಾ ಮತ್ತು ಪ್ರಸಾರ ಇಲಾಖೆ ಡಬ್ಬಿಂಗ್ ಕಾರ್ಯವನ್ನು ನಿಲ್ಲಿಸುವುದರ ಮೂಲಕ ಕನ್ನಡಿಗರ ವಿರೋಧಕ್ಕೆ ಮಣಿಯಲೇಬೇಕಾಯಿತು. ಕನ್ನಡಿಗರ ಭಾವನೆಗಳಿಗೆ ಸ್ಪಂದಿಸಲೇ ಬೇಕಾಯಿತು.

ಹೀಗಾಗಿ ಡಬ್ಬಿಂಗ್ ಸಂಸ್ಕೃತಿ ಮತ್ತೊಮ್ಮೆ ಈ ನೆಲದಲ್ಲಿ ಅಡಿ ಇಡುವುದಕ್ಕೆ ಅವಕಾಶವಾಗಲಿಲ್ಲ.

ಗೋಕಾಕ್ ವರದಿ ಚಳುವಳಿ – ಚಿತ್ರರಂಗದವರ ಪಾತ್ರ

ಕನ್ನಡ ಚಳುವಳಿಯ ಪ್ರಭಾವದಿಂದ ಕನ್ನಡ ಚಲನಚಿತ್ರರಂಗ ಇನ್ನಿಲ್ಲದ ಪ್ರೋತ್ಸಾಹ ಪಡೆಯಿತು. ಕನ್ನಡ ಚಿತ್ರ ಪ್ರೇಕ್ಷಕರ ಸಂಖ್ಯೆಯಲ್ಲಿ ಹೆಚ್ಚಳವಾಯಿತು. ಹೊಸ ಹೊಸ ನಿರ್ಮಾಪಕರು ಚಿತ್ರ ನಿರ್ಮಾಣಕ್ಕೆ ಬಂದರು – ಹೇರಳ ಹಣವನ್ನು ಬಂಡವಾಳ ಹೂಡಿದರು. ಚಿತ್ರ ನಿರ್ಮಾಣದಲ್ಲಿ ಶ್ರೀಮಂತಿಕೆಯ ಪ್ರಭಾವ ಕಾಣತೊಡಗಿತು. ಅದ್ದೂರಿತನ, ವೈಭವ, ತಾಂತ್ರಿಕತೆಯಲ್ಲಿ ಸುಧಾರಣೆ, ಹೊರದೇಶಗಳಲ್ಲಿ ಚಿತ್ರೀಕರಣ –ಹೀಗೆಲ್ಲಾ ಅಗಾಧ ಪ್ರಗತಿ ಬದಲಾವಣೆ ಕಂಡಿತು. ಪರಭಾಷಾ ಚಿತ್ರಗಳಿಗೆ ಯಾವುದರಲ್ಲಿಯೂ ಕಡಿಮೆ ಇಲ್ಲ ಎಂಬಂತಹ ಅಭೂತಪೂರ್ವ ಬದಲಾವಣೆ ಕನ್ನಡ ಚಿತ್ರರಂಗದಲ್ಲಿ ಕಾಣತೊಡಗಿತು.

ಈ ಎಲ್ಲಾ ಬದಲಾವಣೆಗಳಿಗೆ 1960ರ ದಶಕದಲ್ಲಿ ಆರಂಭಗೊಂಡ ಕನ್ನಡ ಚಳುವಳಿಯ ಕೊಡುಗೆ ಎಂಬುದನ್ನು ಯಾರೊಬ್ಬರೂ ಮರೆಯುವಂತೆ ಇಲ್ಲ. ಹೀಗೆ ಚಳುವಳಿಗೂ ಚಿತ್ರರಂಗಕ್ಕೂ ಒಂದು ಅವಿನಾಭಾವ ಸಂಬಂಧವೇರ್ಪಟ್ಟಿತೆಂದು ಹೇಳಬಹುದು. ಈ ಸಂಬಂಧವೇ ಕನ್ನಡ ಚಿತ್ರರಂಗದವರು ಮುಂದೆ ಕನ್ನಡ ನೆಲ–ಜಲ–ಭಾಷಾ ಸಮಸ್ಯೆಗಳು ಎದುರಾದಾಗ ಆ ಎಲ್ಲಾ ಹೋರಾಟಗಳಲ್ಲಿಯೂ ತಮ್ಮನ್ನು ತಾವೇ ತೊಡಗಿಸಿಕೊಳ್ಳಲು ಕಾರಣವಾಯಿತೆನ್ನಬಹುದು.

ಕನ್ನಡ ಚಿತ್ರರಂಗದವರು ಕನ್ನಡಪರ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರಲ್ಲಿ ಬಹುಪ್ರಮುಖವಾದುದೆಂದರೆ ಗೋಕಾಕ್ ವರದಿಗಾಗಿ ನಡೆದ ಚಳುವಳಿ.

1961–62ರಲ್ಲಿ ಹಲವಾರು ಸಾಹಿತಿಗಳು, ಕಲಾವಿದರು ಹಾಗೂ ಕನ್ನಡ ಅಭಿಮಾನಿ ಯುವಕರ ದಂಡು ಕನ್ನಡದ ನೆಲದಲ್ಲಿ ಕನ್ನಡ ಭಾಷೆಯ ಉಳಿವಿಗಾಗಿ, ಕನ್ನಡಿಗರ ಶ್ರೇಯಸ್ಸಿಗಾಗಿ ಹೋರಾಟ ನಡೆಸಬೇಕಾದ ಅನಿವಾರ್ಯ ಪರಿಸ್ಥಿತಿ ಒದಗಿಬಂದದ್ದು ಕನ್ನಡಿಗರ ದುರದೃಷ್ಟವೇ ಸರಿ.

ಹಾಗೆ ಹೋರಾಟ ನಡೆಸಬೇಕಾದ ಹಲವಾರು ಉದ್ದೇಶಗಳಲ್ಲಿ ನೆಲ-ಜಲ-ಭಾಷೆಗೆ ಸಂಬಂಧಪಟ್ಟ ಹಾಗೆ ಕನ್ನಡ ಚಿತ್ರರಂಗದ ಏಳಿಗೆ ಹಾಗೂ ಡಬ್ಬಿಂಗ್ ವಿರೋಧಿ ನೀತಿಗಳು ಸೇರಿದ್ದುವು ಹಾಗೂ ಚಳುವಳಿಯ ಫಲವಾಗಿ ಈ ಎರಡೂ ಕ್ಷೇತ್ರಗಳಲ್ಲಿ ಸಾಫಲ್ಯತೆಯನ್ನು ಕಾಣುವಲ್ಲಿ ಯಶಸ್ವಿಯೂ ಆಯಿತೆಂದು ಧಾರಾಳವಾಗಿ ಹೇಳಬಹುದು.

ಹೀಗೆ ಚಳುವಳಿಯ ಕಾರಣದಿಂದ ಪ್ರಯೋಜನ ಪಡೆದ ಚಿತ್ರರಂಗ ಮುಂದೊಂದು ದಿನ ತಾವೂ ಸಹ ಚಳುವಳಿಗೆ ಧುಮುಕಿ ಭಾಷೆಯ ಬಗ್ಗೆ ಹೋರಾಟ ನಡೆಸಬೇಕಾಗಿದ್ದು ಗಮನಿಸಬೇಕಾದ ಅಂಶ.

ಗೋಕಾಕ ವರದಿಗಾಗಿ ಚಳುವಳಿ – ಹಿನ್ನೆಲೆ

ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಭಾಷಾ ಸ್ಥಾನಮಾನದ ಬಗ್ಗೆ ವರದಿ ನೀಡಲು ಸರ್ಕಾರವು ಶಿಕ್ಷಣ ತಜ್ಞರಾಗಿದ್ದ ಡಾ. ವಿ.ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಅಕ್ಟೋಬರ್ 1980ರಲ್ಲಿ ರಚಿಸಿತು.

ಸಮಿತಿಯು ಸಾರ್ವಜನಿಕ ಅಭಿಪ್ರಾಯ, ಮನವಿಗಳನ್ನು ಸಂಗ್ರಹಿಸಲು ರಾಜ್ಯದ ಹಲವಾರು ಪ್ರದೇಶಗಳಿಗೆ ಭೇಟಿ ನೀಡಿ ಜನವರಿ 1981ರಲ್ಲಿ ತನ್ನ ವರದಿಯನ್ನು ನೀಡಿತು. ಆ ವರದಿಯಲ್ಲಿ ಕನ್ನಡಕ್ಕೆ ಸಿಗಬೇಕಾದ ಪ್ರಾಶಸ್ತ್ಯವನ್ನು ಸಮಿತಿಯು ಪ್ರಕಟಿಸಿತು. ಅದರಂತೆ ಪ್ರಾಥಮಿಕ ಶಾಲೆಯ ಮೂರನೆಯ ತರಗತಿಯಿಂದ ರಾಜ್ಯದ ಎಲ್ಲಾ ಶಾಲೆಗಳಲ್ಲಿಯೂ ಕನ್ನಡ ಕಲಿಕೆ ಕಡ್ಡಾಯ ಎಂದು ಶಿಫಾರಸು ಮಾಡಿತು.

ಆರಂಭದಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಆರ್. ಗುಂಡೂರಾಯರು ಸಮಿತಿ ವರದಿಯನ್ನು ಅನುಷ್ಠಾನಗೊಳಿಸುವ ಭರವಸೆಯನ್ನು ನೀಡಿದರು. ಆದರೆ ಅಲ್ಪಸಂಖ್ಯಾತ ನಾಯಕರೆನಿಸಿಕೊಂಡ ಕೆಲವರು ಹಾಗೂ ಗುಂಡೂರಾಯರ ಆಪ್ತವಲಯದಲ್ಲಿದ್ದ ಹಲವರು ವರದಿಯ ಅನುಷ್ಠಾನಕ್ಕೆ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸಿದರು. ಸದಾ ಅಲ್ಪಸಂಖ್ಯಾತರನ್ನು ಓಲೈಸಿ ಮತಬ್ಯಾಂಕುಗಳನ್ನಾಗಿ ಮಾಡಿಕೊಂಡಿದ್ದ ಆಡಳಿತ ನಾಯಕರು ವರದಿಯನ್ನು ಅನುಷ್ಠಾನಗೊಳಿಸುವತ್ತ ನಿರಾಸಕ್ತಿ ಹೊಂದಿ ಮೌನವಹಿಸಿದರು. ಆ ಸಂದರ್ಭದಲ್ಲಿ ವಿಧಿ ಇಲ್ಲದೆ ಕನ್ನಡಿಗರು ಹೋರಾಟದ ಹಾದಿಗೆ ಧುಮುಕದೆ ಬೇರೆ ಗತ್ಯಂತರವೇ ಇಲ್ಲದ ಪರಿಸ್ಥಿತಿ ಉಂಟಾಯಿತು. ಚಳುವಳಿಯನ್ನು ಹೂಡಲೇಬೇಕಾದ ಅನಿವಾರ್ಯತೆ ಒದಗಿತು.

ಆರಂಭದಲ್ಲಿ ಹುಬ್ಬಳ್ಳಿಯಲ್ಲಿ ದಿನಾಂಕ 8.3.1982ರಂದು ಕನ್ನಡಿಗರ ಕ್ರಿಯಾ ಸಮಿತಿ ಸಭೆಯು ನಡೆಯಿತು. ಸುಪ್ರಸಿದ್ಧ ಕನ್ನಡ ಸಾಹಿತಿ ಶಂ.ಬಾ. ಜೋಷಿಯವರು

ಅಧ್ಯಕ್ಷತೆ ವಹಿಸಿದ್ದ ಆ ಸಭೆಯಲ್ಲಿ ಕನ್ನಡ ಭಾಷೆಯ ಕಲಿಕೆಯನ್ನು ಕಡ್ಡಾಯಗೊಳಿಸದೆ ಹೋದರೆ ಚಳುವಳಿಯನ್ನು ಆರಂಭಿಸಬೇಕು ಎಂದು ನಿರ್ಧರಿಸಲಾಯಿತು.

ಈ ಸಭೆಯಲ್ಲಿ ಮಾಜಿ ಉಪಕುಲಪತಿಗಳಾದ ಡಾ. ಆರ್.ಸಿ. ಹಿರೇಮಠ, ಸಾಹಿತಿಗಳಾದ ಬಸವರಾಜ ಕಟ್ಟೀಮನಿ, ಖ್ಯಾತ ಪತ್ರಕರ್ತ ಪಾ.ವೆಂ. ಆಚಾರ್ಯ, ಪ್ರೊ. ಚಂದ್ರಶೇಖರ ಪಾಟೀಲ ಮುಂತಾದವರು ಭಾಗವಹಿಸಿದ್ದರು.

ಈ ಮಧ್ಯೆ ಬೆಂಗಳೂರಿನಲ್ಲಿ 16.3.82ರಂದು ಪ್ರಥಮ ಹೆಜ್ಜೆಯಾಗಿ ಕನ್ನಡ ಪಕ್ಷವು ವಿಧಾನಸೌಧದ ಎದುರು ಆಮರಣ ಉಪವಾಸದ ಪ್ರತಿಭಟನೆಯನ್ನು ಆರಂಭಿಸಿ ಹೋರಾಟಕ್ಕೆ ಚಾಲನೆಯನ್ನು ನೀಡಿತು. ಈ ಕಾರ್ಯಕ್ರಮದಲ್ಲಿ ರೆಹಮಾನ್ ಖಾನ್, ಗೋವಿಂದಹಳ್ಳಿ ದೇವೇಗೌಡ, ಜಿ.ಎಸ್. ರೇಣುಕಪ್ಪ, ಸುಧಾಮ, ಮಾಜಿ ಶಾಸಕರಾದ ಕೆ. ಪ್ರಭಾಕರ ರೆಡ್ಡಿ, ಕನ್ನಡ ಪಕ್ಷದ ಅಧ್ಯಕ್ಷರಾದ ಶಿವಪ್ರಸಾದ್, ಸತ್ಯನಾರಾಯಣ ಮಾನೆ ಮುಂತಾದವರಿದ್ದರು.

ಹೀಗೆ ಬೆಂಗಳೂರಿನಲ್ಲಿ ಆರಂಭವಾದ ಪ್ರತಿಭಟನೆ ಕ್ರಮೇಣ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿಯೂ ಹಬ್ಬತೊಡಗಿತು. ಮೈಸೂರಿನಲ್ಲಿಯೂ ಸಹ ಅನೇಕ ಸಂಘ–ಸಂಸ್ಥೆಗಳು ಧರಣಿ, ಪ್ರತಿಭಟನೆ ಕಾರ್ಯಕ್ರಮಗಳನ್ನು ನಡೆಸಿದವು. ಕಾಲೇಜು ಅಧ್ಯಾಪಕರು, ವಿದ್ಯಾರ್ಥಿಗಳು, ಕನ್ನಡ ಸಂಘ–ಸಂಸ್ಥೆಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡವು.

ಗೋಕಾಕ್ ಸಮಿತಿ ವರದಿಯನ್ನು ಜಾರಿಗೊಳಿಸದಿದ್ದ ಪಕ್ಷದಲ್ಲಿ ಮೈಸೂರಿನಲ್ಲಿ ನಡೆಸಲು ತೀರ್ಮಾನಿಸಿದ್ದ ವಿಶ್ವ ಕನ್ನಡ ಸಮ್ಮೇಳನವನ್ನು ಬಹಿಷ್ಕರಿಸಬೇಕಾಗುತ್ತದೆಂದು ಸರ್ಕಾರಕ್ಕೆ ಎಚ್ಚರಿಕೆ ನೀಡಲಾಯಿತು.

ಬಿಜಾಪುರದಲ್ಲಿ ಗಂಗಾಧರ ಕೊರಳ್ಳಿ ಅವರು ಉಪವಾಸ ಸತ್ಯಾಗ್ರಹ ಆರಂಭಿಸಿ ಚಳುವಳಿಯ ಇತಿಹಾಸದಲ್ಲಿಯೇ ದಾಖಲೆಯಾದ 49 ದಿನಗಳಷ್ಟು ಸುದೀರ್ಘ ಅವಧಿಯ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು.

ಏತನ್ಮಧ್ಯೆ ಅಲ್ಲಲ್ಲಿ ಪ್ರತಿಭಟನಾ ಸಭೆಗಳು, ಧರಣಿ ಸತ್ಯಾಗ್ರಹ, ಉಪವಾಸ ಸತ್ಯಾಗ್ರಹ ಮುಂತಾದವನ್ನು ಸಂಘ–ಸಂಸ್ಥೆಗಳು ನಿರಂತರವಾಗಿ ನಡೆಸಿಕೊಂಡು ಬಂದವು. ನಾಡಿನ ಹಿರಿಯ ಸಾಹಿತಿಗಳು, ವಿದ್ವಾಂಸರು, ಕಾಲೇಜು ಉಪನ್ಯಾಸಕರು ಉಪವಾಸ ಸತ್ಯಾಗ್ರಹವನ್ನು ಕೈಗೊಂಡರು.

ಧಾರವಾಡ ಕನ್ನಡ ಕ್ರಿಯಾ ಸಮಿತಿಯು ರೂಪುಗೊಂಡು ಹೋರಾಟದ ನಾಯಕತ್ವವನ್ನು ವಹಿಸಿತು.

ವಯೋವೃದ್ಧ ಶಂ.ಬಾ. ಜೋಷಿಯವರು "ಕನ್ನಡ ನನ್ನ ಜೀವಾಳದ ಉಸಿರು. ಈ ಕನ್ನಡ ಅಸ್ತಿತ್ವವನ್ನೇ ಸಂದಿಗ್ಧ ಸ್ಥಿತಿಗೆ ತಳ್ಳುವ ಹೊಂಚು ಕಾಣುತ್ತಿದೆ. ಆದ ಕಾರಣ ಈ ಒಳಸಂಚನ್ನು ವಿರೋಧಿಸಲು ಈ ಉಪವಾಸದ ಸರಣಿಗೆ ಒಪ್ಪಿದ್ದೇನೆ" ಎಂದು ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದರು.

ಬೆಂಗಳೂರಿನಲ್ಲಿ 6.4.1982ರಂದು ಕನ್ನಡ ಜಾಗೃತಿ ಸಮಾವೇಶ ನಡೆಯಿತು. ಅನೇಕ ಜನ ಹಿರಿಯ ಸಾಹಿತಿಗಳೂ, ಕಲಾವಿದರೂ ಮೌನ ಮೆರವಣಿಗೆಯಲ್ಲಿ ಭಾಗವಹಿಸಿದರು. ಈ ಮೌನ ಮೆರವಣಿಗೆಯಲ್ಲಿ ವಯೋವೃದ್ಧರೂ ಹಿರಿಯ ಸಾಹಿತಿಗಳೂ ಆದ ಬಿ. ಪುಟ್ಟಸ್ವಾಮಯ್ಯನವರು ಹಾಗೂ ಎಂ.ವಿ. ಸೀತಾರಾಮಯ್ಯನವರು ಭಾಗವಹಿಸಿದ್ದರು.

ಡಾ. ರಾಜಕುಮಾರ್ ಬೆಂಬಲ – ಚಳುವಳಿಗೆ ತಂದ ಹುರುಪು

ಇದುವರೆಗೂ ಹೋರಾಟದಲ್ಲಿ ಶಿಕ್ಷಣ ತಜ್ಞರೂ ವಿದ್ಯಾರ್ಥಿಗಳೂ ಹಾಗೂ ಕನ್ನಡ ಸಂಘಟನೆಗಳು ಕ್ರಿಯಾತ್ಮಕವಾಗಿ ಭಾಗವಹಿಸುತ್ತಿದ್ದವು.

ದಿನಾಂಕ 15.4.1982ರಂದು ಕನ್ನಡದ ವರನಟ ಡಾ. ರಾಜಕುಮಾರ್ ಅವರು ಒಂದು ಹೇಳಿಕೆಯನ್ನು ನೀಡಿ ಗೋಕಾಕ್ ವರದಿಯ ಜಾರಿ ಬಗ್ಗೆ ಯಾರೇ ಚಕಾರವೆತ್ತಿದರೂ ಅಂಥವರು ಕನ್ನಡ ನಾಡು–ನುಡಿಗೆ ದ್ರೋಹ ಬಗೆದಂತೆ ಎಂದು ಹೇಳಿ ಚಳುವಳಿಗೆ ತಮ್ಮ ಎಲ್ಲ ರೀತಿಯ ಬೆಂಬಲ ಸೂಚಿಸಿದರು. ಅವರ ಈ ಹೇಳಿಕೆ ಚಳುವಳಿಗೆ ವಿದ್ಯುತ್ಸಂಚಾರ ತಗುಲಿದಂತೆ ಆಯಿತು. ಚಳುವಳಿಗೆ ಇನ್ನಿಲ್ಲದ ಹುರುಪು, ಉತ್ಸಾಹ ತುಂಬಿ ಬಂತು.

ಅವರ ಈ ಹೇಳಿಕೆಗೆ ಕನ್ನಡ ಚಿತ್ರರಂಗದ ಇತರ ನಟರೂ ಸಹ ಚಳುವಳಿಯಲ್ಲಿ ಭಾಗವಹಿಸಲು ಪ್ರೇರಕವಾಯಿತು.

ಸತ್ಯಾಗ್ರಹ ಶಿಬಿರಕ್ಕೆ ರಾಜ್ ಭೇಟಿ

ಬೆಂಗಳೂರಿನ ಸಾಹಿತಿ ಕಲಾವಿದರ ಬಳಗವು ಬೇಡಿಕೆಯ ಈಡೇರಿಕೆಗಾಗಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿತು. ಅದರಲ್ಲಿ ಕನ್ನಡದ ಹಿರಿಯ ಸಾಹಿತಿಗಳು, ಲೇಖಕರು ಭಾಗವಹಿಸಿದ್ದರು. ಈ ಸತ್ಯಾಗ್ರಹ ಶಿಬಿರಕ್ಕೆ ರಾಜಕುಮಾರ್ ಅವರು

ಭೇಟಿ ನೀಡಿದರು. ಸರಸ್ವತಿ ಪುತ್ರರು ನಾಡ ಭಾಷೆಗಾಗಿ ನಡೆಸುತ್ತಿರುವ ಸತ್ಯಾಗ್ರಹಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದರು. ಗೋಕಾಕ್ ವರದಿಯ ಜಾರಿಗೆ ನಡೆಯುತ್ತಿರುವ ಹೋರಾಟಕ್ಕೆ ತಮ್ಮ ದನಿಯನ್ನು ಸಹ ಕೂಡಿಸಿದರು. ಚಳುವಳಿಗಾರರ ಬೇಡಿಕೆಯನ್ನು ಒಪ್ಪಿಕೊಂಡು ಸರ್ಕಾರವು ವರದಿಯನ್ನು ಜಾರಿಗೊಳಿಸಬೇಕೆಂದು ಆಗ್ರಹಪೂರ್ವಕವಾಗಿ ಒತ್ತಾಯದ ಹೇಳಿಕೆಯನ್ನು ಮಂಡಿಸಿದರು.

ಅಂದು ಅವರು ಮಾಡಿದ ಭಾಷಣದಲ್ಲಿ ನಾಡು-ನುಡಿಯ ಬಗ್ಗೆ ತಮ್ಮ ಅಭಿಮಾನವನ್ನು ಹಾಗೂ ಹಿರಿಯ ಸಾಹಿತಿಗಳ ಬಗ್ಗೆ ತಾವು ಹೊಂದಿದ್ದ ಗೌರವವನ್ನು ತಮ್ಮ ಮನದ ಅಂತರಾಳದ ಮಾತುಗಳಿಂದ ವ್ಯಕ್ತಪಡಿಸಿದರು.

'ಹೆತ್ತ ತಾಯಿ ಎಷ್ಟು ಮುಖ್ಯವೋ ನಾಡಿಗೆ ಭಾಷೆಯೂ ಅಷ್ಟೇ ಮುಖ್ಯ. ತಾಯಿನಾಡು ಬೇರೆ ಅಲ್ಲ, ಕನ್ನಡ ಬೇರೆ ಅಲ್ಲ. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆ ಆಗಲೇಬೇಕು' ಎಂದು ಒತ್ತಾಯಪೂರ್ವಕವಾಗಿ ಆಗ್ರಹಿಸಿದರು.

ಸತ್ಯಾಗ್ರಹದಲ್ಲಿ ಭಾಗವಹಿಸಿದ ವಯೋವೃದ್ಧ ಸಾಹಿತಿಗಳನ್ನು ಕಂಡು ಅವರ ಮನಸ್ಸು ತುಂಬಿ ಬಂದಿತು. ನಾಡು-ನುಡಿಯ ಬಗ್ಗೆ ಹಿರಿಯ ಸಾಹಿತಿಗಳು



ಗೋಕಾಕ್ ಚಳುವಳಿಯಲ್ಲಿ ಡಾ. ರಾಜ್‌ಕುಮಾರ್, ಲೋಕೇಶ್ ಮತ್ತು ಅಶೋಕ್.

ವ್ಯಕ್ತಪಡಿಸುತ್ತಿರುವ ಕಾಳಜಿ, ಆಸ್ಥೆ, ಅಭಿಮಾನಗಳನ್ನು ಕಂಡ ಅವರು ಗದ್ಗದಿತರಾದರು. ಅವರ ಹೋರಾಟಕ್ಕೆ ತಮ್ಮ ಸಂಪೂರ್ಣ ಸಹಕಾರವನ್ನು, ಬೆಂಬಲವನ್ನು ವ್ಯಕ್ತಪಡಿಸಿದ ರಾಜಕುಮಾರ್ ಅವರು 'ಎಂಬತ್ತು ವರ್ಷದ ಹಿರಿಯ ಸಾಹಿತಿಗಳೂ, ಕವಿಗಳು ಅನ್ನ ನೀರು ಬಿಟ್ಟು ಉಪವಾಸ ಇದ್ದಾರೆ ಎಂದ ಮೇಲೆ ರಾಜಕುಮಾರನೂ ಅದೇ ಸ್ಥಾನದಲ್ಲಿರುತ್ತಾನೆ' ಎಂದು ಅವರು ಹೇಳಿದಾಗ ಅಲ್ಲಿ ಸೇರಿದ ಜನಸ್ತೋಮ ಉತ್ಸಾಹದಿಂದ ಚಪ್ಪಾಳೆ ತಟ್ಟಿದರು.

ಅಷ್ಟೇ ಅಲ್ಲ, ತಮ್ಮ ಮಾತುಗಳನ್ನು ಮುಂದುವರೆಸಿದ ರಾಜ್ ಅವರು 'ಕನ್ನಡಕ್ಕಾಗಿ ಎಲ್ಲ ಪದವಿ ಮತ್ತು ಪ್ರಶಸ್ತಿಗಳ ತ್ಯಾಗಕ್ಕೆ ಸಿದ್ಧನಾಗಿದ್ದೇನೆ' ಎಂದು ಘೋಷಿಸಿದರು.

ಸತ್ಯಾಗ್ರಹ ಶಿಬಿರಕ್ಕೆ ಬಂದುದೂ ಅಲ್ಲದೆ ಅವರು ಅಭಿಮಾನಪೂರ್ವಕವಾಗಿ ನಾಡಿನ ಬಗ್ಗೆ, ಭಾಷೆಯ ಬಗ್ಗೆ ಹಾಗೂ ಹಿರಿಯ ಸಾಹಿತಿಗಳ ಬಗ್ಗೆ ತೋರಿಸಿದ ಆದರ, ಗೌರವ ಅಲ್ಲಿ ನೆರೆದಿದ್ದ ಎಲ್ಲ ಚಳುವಳಿಗಾರರ ಮನಸ್ಸನ್ನು ಸೂರೆಗೊಂಡಿತು.

ಅದೇ ವೇದಿಕೆಯಲ್ಲಿ ಚಿತ್ರನಟರಾದ ಶಿವರಾಂ, ದಿನೇಶ್, ಅಶೋಕ್, ಲೋಕೇಶ್, ಶಂಕರನಾಗ್, ಅನಂತನಾಗ್, ಅಂಬರೀಶ್, ಮುಸುರಿ ಕೃಷ್ಣಮೂರ್ತಿ, ಜೈಜಗದೀಶ್, ಚಂದ್ರಶೇಖರ್ ಮುಂತಾದವರು ಹಾಗೂ ಕನ್ನಡ ಚಳುವಳಿಯ ನಾಯಕ ಜಿ. ನಾರಾಯಣಕುಮಾರ್, ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಮೇಗೌಡ, ಮುಂತಾದವರೂ ಸಹ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಆ ಸಮಯದಲ್ಲಿ ಜನಜಂಗುಳಿ ಜಾಸ್ತಿಯಾಗಿ ರಾಜಕುಮಾರ್ ಅವರು ಬಂಧಿಸಲ್ಪಟ್ಟರೆಂದು ಸುದ್ದಿ ಹರಡಿ ಜನ ರೊಚ್ಚಿಗೆದ್ದರು. ಪೋಲೀಸರು ಅಶ್ರುವಾಯು ಸಿಡಿಸಿ ಬೆತ್ತ ಪ್ರಹಾರ ಮಾಡಿದ ಘಟನೆಯೂ ನಡೆಯಿತು.

ಬೆಂಗಳೂರಿನಲ್ಲಿ ಈ ಮೇಲ್ಕಂಡ ಘಟನೆ ನಡೆದರೆ, ಮೈಸೂರಿನಲ್ಲೂ ಸಹ ಚಿತ್ರ ನಟರು ಚಳುವಳಿಯಲ್ಲಿ ಭಾಗವಹಿಸಿ ಗೋಕಾಕ್ ವರದಿ ಜಾರಿಗಾಗಿ ತಮ್ಮ ಬೆಂಬಲವನ್ನು ಸೂಚಿಸಿದರು.

ದಿನಾಂಕ 18.4.1982ರಂದು ಮೈಸೂರಿನ ಚಿತ್ರೀಕರಣದಲ್ಲಿ ಭಾಗವಹಿಸುತ್ತಿದ್ದ ನಟ ವಿಷ್ಣುವರ್ಧನ್ ಅವರು ಅಭಿಮಾನಿಗಳೊಂದಿಗೆ ಮೆರವಣಿಗೆಯಲ್ಲಿ ಉಪವಾಸ ಸತ್ಯಾಗ್ರಹ ನಡೆಯುತ್ತಿದ್ದ ಸ್ಥಳಕ್ಕೆ ಕನ್ನಡಪರ ಘೋಷಣೆಗಳೊಂದಿಗೆ ಆಗಮಿಸಿದರು. ನಟ ಧೀರೇಂದ್ರ ಗೋಪಾಲ್, ಎಂ.ಪಿ. ಶಂಕರ್ ಅವರುಗಳು ಮಾತನಾಡಿ ಹೋರಾಟಕ್ಕೆ

ತಮ್ಮ ಸಂಪೂರ್ಣ ಬೆಂಬಲವನ್ನು ಸೂಚಿಸಿದರು. ದ್ವಾರಕೀಶ್, ಸುಧೀರ್, ಚೇತನ್ ರಾಮರಾವ್ ಅವರುಗಳು ಸಹ ತಮ್ಮ ಬೆಂಬಲವನ್ನು ಘೋಷಿಸಿದರು.

ಎಂ.ಪಿ. ಶಂಕರ್ ಅವರು ಹಾಗೂ ತೂಗುದೀಪ ಶ್ರೀನಿವಾಸ್ ಅವರು ತಮಟೆ ಬಾರಿಸಿಕೊಂಡು ಮೆರವಣಿಗೆಯಲ್ಲಿ ಭಾಗವಹಿಸಿದರು. ಅಲ್ಲದೆ ಶಂಕರ್ ಅವರು ಮೈಸೂರು ಪುರಭವನದ ಬಿಸಿಲು ಮಂಚದ ಮೇಲೆ ಶಂಖ ಊದಿ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

ಹಿರಿಯ ಸಾಹಿತಿಗಳು ಹಾಗೂ ಕನ್ನಡ ಚಿತ್ರಗಳಿಗೆ ತಮ್ಮ ಕಾದಂಬರಿಗಳನ್ನು ನೀಡಿ ಚಿತ್ರಸಾಹಿತ್ಯಕ್ಕೆ ಮಹತ್ತರ ಕೊಡುಗೆಯನ್ನು ನೀಡಿರುವ ತ.ರಾ. ಸುಬ್ಬರಾವ್ – ತ.ರಾ.ಸು.– ಅವರು ಮೈಸೂರಿನ ಪುರಭವನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ "ನನಗೆ ಹೆಚ್ಚುದಿನ ಬದುಕುವ ಆಸೆ ಇಲ್ಲ. ಕನ್ನಡವನ್ನು ಬದುಕಿಸುತ್ತೇವೆಂಬ ವಚನವನ್ನು ಕೊಡಿ" ಎಂದು ಗದ್ಗದಿತರಾಗಿ ಜನಸ್ತೋಮವನ್ನು ಉದ್ದೇಶಿಸಿ ಹೇಳಿದರು.

ಹೋರಾಟಕ್ಕೆ ಪ್ರತ್ಯಕ್ಷವಾಗಿ ಧುಮುಕಿದ ಡಾ. ರಾಜ್ ಮತ್ತು ಕನ್ನಡ ಚಿತ್ರರಂಗ

ಗೋಕಾಕ್ ವರದಿ ಅನುಷ್ಠಾನಕ್ಕಾಗಿ ಆರಂಭದಲ್ಲಿ ನಡೆದ ಚಳುವಳಿ ಸಭೆಗಳು, ಉಪವಾಸಗಳಿಗೆ ಮೀಸಲಾಗಿದ್ದುವು. ಸಾಹಿತಿಗಳು, ಕನ್ನಡಪರ ಹೋರಾಟಗಾರರು ಭಾಗವಹಿಸುತ್ತಿದ್ದ ಈ ಕಾರ್ಯಕ್ರಮದಲ್ಲಿ ಆಗಾಗ್ಗೆ ಚಿತ್ರನಟರು ಭಾಗವಹಿಸಿ ತಮ್ಮ ಬೆಂಬಲವನ್ನು, ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದರು.

ಆದರೆ ಸಾತ್ವಿಕಮಯವಾದ ಶಾಂತಿಯುತ ಹೋರಾಟಕ್ಕೆ ಸರ್ಕಾರದಿಂದ ಯಾವುದೇ ಸೂಕ್ತ ಪ್ರತಿಕ್ರಿಯೆ ಬರಲಿಲ್ಲ. ಹಾಗಾಗಿ ಧಾರವಾಡದ ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯು ದಿನಾಂಕ 16.5.1982ರಿಂದ ರಾಜ್ಯದಾದ್ಯಂತ ಕನ್ನಡ ಜನಜಾಗೃತಿಗಾಗಿ ಜಾಥಾವನ್ನು ಏರ್ಪಡಿಸಿತು.

ಈ ಜಾಥಾದಲ್ಲಿ ಕನ್ನಡ ಚಿತ್ರರಂಗದ ತಂಡವೂ ಭಾಗವಹಿಸಿದರೆ ಹೆಚ್ಚಿನ ಪರಿಣಾಮ ಬೀರುತ್ತದೆ ಎಂದು ಭಾವಿಸಿದ ಕ್ರಿಯಾ ಸಮಿತಿಯು ರಾಜಕುಮಾರ್ ಅವರೂ ಸಹ ಜಾಥಾದಲ್ಲಿ ಪಾಲ್ಗೊಳ್ಳಬೇಕೆಂದು ಅವರನ್ನು ಸಂಪರ್ಕಿಸಿ ಕ್ರಿಯಾ ಸಮಿತಿಯ ನಿಲುವನ್ನು ರಾಜ್ ಅವರಲ್ಲಿ ತಿಳಿಸಿತು. ಈ ಕೋರಿಕೆಗೆ ಡಾ. ರಾಜ್ ಅವರು ತಕ್ಷಣವೇ ಸಕಾರಾತ್ಮಕವಾಗಿ ಸ್ಪಂದಿಸಿ ಚಳುವಳಿಯ ಜಾಥಾದಲ್ಲಿ ಭಾಗವಹಿಸಲು ಸಂಪೂರ್ಣ ಸಮ್ಮತಿಯನ್ನು ನೀಡಿದರು.

ಯಾವಾಗ ರಾಜ್ ಅವರು ಜಾಥಾದಲ್ಲಿ ಭಾಗವಹಿಸಲು ಒಪ್ಪಿದರೋ ಇಡೀ ಕನ್ನಡ ಚಿತ್ರರಂಗವೇ ಈ ಅಭೂತಪೂರ್ವ ಹೋರಾಟದಲ್ಲಿ ಭಾಗವಹಿಸಲು ಸನ್ನದ್ಧವಾಯಿತು. ಚಲನಚಿತ್ರರಂಗದ ನಟ–ನಟಿಯರೂ, ನಿರ್ಮಾಪಕ, ನಿರ್ದೇಶಕರು, ತಾಂತ್ರಿಕ ವರ್ಗ –ಹೀಗೆ ಸಮಸ್ತ ಚಿತ್ರರಂಗವೇ ರಾಜ್ ಅವರ ನಾಯಕತ್ವದಲ್ಲಿ ಚಳುವಳಿಗೆ ಪಾದಾರ್ಪಣೆ ಮಾಡಿದರು.

ಡಾ. ರಾಜ್ ಅವರೊಂದಿಗೆ ಅವರ ಪತ್ನಿ ಪಾರ್ವತಮ್ಮ ರಾಜಕುಮಾರ್, ಇತರೇ ನಟರಾದ ವಿಷ್ಣುವರ್ಧನ್, ಅನಂತನಾಗ್, ಲೋಕೇಶ್, ಅಶೋಕ್, ಧೀರೇಂದ್ರ ಗೋಪಾಲ್, ಜೂ. ನರಸಿಂಹರಾಜು, ಮುಸುರಿ ಕೃಷ್ಣಮೂರ್ತಿ, ನಿರ್ದೇಶಕ ಭಗವಾನ್. ನಿರ್ಮಾಪಕರಾದ ಅಬ್ಬಾಯಿ ನಾಯ್ಡು, ಜಗನ್ನಾಥ್, ಅಖಿಲ ಕರ್ನಾಟಕ ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಮೇಗೌಡ, ವಿತರಕ ಜಗನ್ನಾಥ್ ಮುಂತಾದವರೆಲ್ಲ ಜಾಥಾದಲ್ಲಿ ಭಾಗವಹಿಸಿದರು.

ಬೆಳಗಾವಿಯಿಂದ ಹೊರಟ ಜಾಥಾ ಧಾರವಾಡ, ಹುಬ್ಬಳ್ಳಿ, ಗದಗ, ಬಳ್ಳಾರಿ, ಹರಿಹರ, ದಾವಣಗೆರೆ –ಹೀಗೆ ರಾಜ್ಯದ ಹಲವಾರು ಪ್ರದೇಶಗಳಲ್ಲಿ ಸಂಚರಿಸಿತು.

ಧಾರವಾಡದಲ್ಲಿ ನಾಡಿನ ಶ್ರೇಷ್ಠ ಕವಿಗಳಾದ ಚನ್ನವೀರ ಕಣವಿಯವರು 'ಸತ್ಯಾಗ್ರಹ ನಮ್ಮ ಸತ್ಯಾಗ್ರಹ' ಎಂಬ ಗೀತೆಯನ್ನು ಹಾಡಿದರು. ಇದೇ ಕವನವನ್ನು ನಿರ್ದೇಶಕ ಭಗವಾನ್ ಅವರು ಮುಂದೆ ಎಲ್ಲಾ ಊರುಗಳಲ್ಲಿಯೂ ಹಾಡತೊಡಗಿದರು. ಇದರ ಜೊತೆಗೆ ಚಂದ್ರಶೇಖರ ಪಾಟೀಲರ 'ಜೈ ಜೈ ಕನ್ನಡ ತಾಯಿಗೆ ನಾವು ಹೊರಟೆವು ಜೈಲಿಗೆ' ಎಂಬ ಕವನವನ್ನು ಸಹ ಹಾಡುತ್ತಿದ್ದರು.

ಚಿತ್ರರಂಗದವರೂ ಭಾಗವಹಿಸುತ್ತಿದ್ದ ಈ ಜಾಥಾಕ್ಕೆ ನಾಡಿನ ಜನತೆಯಿಂದ ಅಭೂತಪೂರ್ವ ರೀತಿಯ ಸ್ವಾಗತ ಹಾಗೂ ಸ್ಪಂದನೆ ದೊರಕುತ್ತಿತ್ತು. ಕೇವಲ ಬೆಳ್ಳಿತೆರೆಯ ಮೇಲೆ ನೋಡುತ್ತಿದ್ದ ತಮ್ಮ ನೆಚ್ಚಿನ ತಾರೆಯರನ್ನು ತಮ್ಮ ಊರಿನಲ್ಲಿಯೇ ನೋಡುವ ಅವಕಾಶವನ್ನು ಪಡೆದ ಜನತೆ ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರುತ್ತಿದ್ದರು.

ಅಭಿಮಾನಿ ಜನತೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದ ರಾಜ್ ಅವರು, ನಾವು ಕೇವಲ ಕಲಾವಿದರಾಗಿ ಬಂದಿಲ್ಲ, ಕನ್ನಡದ ಭಾಷೆ ಕೇಳಲು ಬಂದಿದ್ದೇವೆ. ನಮ್ಮನ್ನು ಸಲಹಿದ ತಾಯಿಯನ್ನು ನಾವು ರಕ್ಷಿಸಬೇಡವೆ? ಕನ್ನಡಕ್ಕಾಗಿ, ಕರ್ನಾಟಕಕ್ಕಾಗಿ ಯಾವುದೇ ತ್ಯಾಗಕ್ಕೂ ನಾನು ಸಿದ್ಧ ಎಂದು ಭಾಷಣದಲ್ಲಿ ಎಲ್ಲ ಕಡೆ ಹೇಳುತ್ತಿದ್ದರು.

ಅಷ್ಟೇ ಅಲ್ಲದೆ, ದಿನಾಂಕ 3.6.1982ರಂದು ಸಾಹಿತಿ ಕಲಾವಿದರ ಬಳಗವು ಬೆಂಗಳೂರಿನ ಪುರಭವನದ ಮುಂಭಾಗದಲ್ಲಿ ಧರಣಿ ಕಾರ್ಯಕ್ರಮವನ್ನು ಯೋಜಿಸಿತ್ತು. ಈ ಧರಣಿ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಡಾ. ಜಿ.ಎಸ್. ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ ಮುಂತಾದವರೊಂದಿಗೆ ಚಲನಚಿತ್ರ ನಟರಾದ ಲೋಕೇಶ್, ಗಿರಿಜಾ ಲೋಕೇಶ್. ಅಶೋಕ್, ಚಂದ್ರಶೇಖರ್, ನೀಗ್ರೋ ಜಾನಿ ಮುಂತಾದವರು ಸಹ ಪಾಲ್ಗೊಂಡಿದ್ದರು.

ಹೀಗೆ ಗೋಕಾಕ್ ವರದಿ ಅನುಷ್ಠಾನಕ್ಕೆ ನಡೆದ ಚಳುವಳಿ ಇಡೀ ರಾಜ್ಯದಲ್ಲಿಯೂ ಒಂದು ಮಹತ್ತರ ಘಟನೆಯಾಗಿ ಒಂದು ದಾಖಲೆಯಾಗಿದೆ. ಇಡೀ ನಾಡಿಗೆ ನಾಡೇ ಅಭಿಮಾನಪೂರ್ವಕವಾಗಿ ನಡೆದ ಈ ಹೋರಾಟ 'ನ ಭೂತೋ ನ ಭವಿಷ್ಯತಿ' ಎಂಬಂತೆ ಅಪರೂಪದ ಘಟನೆ ಎನಿಸಿದೆ.

ಈ ಹೋರಾಟದಲ್ಲಿ ತೊಡಗಿಸಿಕೊಂಡ ಇಡೀ ಕನ್ನಡ ಚಿತ್ರೋದ್ಯಮ ನಾಡು-ನುಡಿಯ ರಕ್ಷಣೆಯಲ್ಲಿ ತಾವೂ ಸಹ ಭಾಗಿ ಎಂದು ಸಾಬೀತುಪಡಿಸಿತು.

ಈ ಎಲ್ಲ ಹೋರಾಟದ ಫಲವಾಗಿ ದಿನಾಂಕ 24.6.82ರಂದು ಅಂದರೆ ಹೋರಾಟ ಆರಂಭವಾದ ಸುಮಾರು ಮೂರೂವರೆ ತಿಂಗಳುಗಳ ನಂತರ ಸರ್ಕಾರ ಜನತೆಯ ಹೋರಾಟಕ್ಕೆ ತಲೆಬಾಗಲೇ ಬೇಕಾಯಿತು – ಮಣಿಯಲೇ ಬೇಕಾಯಿತು. ಹಾಗಾಗಿ ಅಂದು ಅಂದರೆ 24.6.82ರಂದು ಸರ್ಕಾರವು ಸರ್ವಭಾಷಾ ಸೂತ್ರವನ್ನು ವಿಧಾನಮಂಡಲದಲ್ಲಿ ಒಪ್ಪಿಗೆ ಪಡೆದ ನಂತರ ಪ್ರಕಟಿಸಿತು.

ವಿಜಯೋತ್ಸವದ ಮೆರವಣಿಗೆ – ಬಲಿದಾನ

ಗೋಕಾಕ್ ವರದಿಯ ಅನುಷ್ಠಾನಕ್ಕೆ ಸರ್ಕಾರದ ಒಪ್ಪಿಗೆ ನೀಡಿದುದನ್ನು ಜನತೆ ಹರ್ಷೋತ್ಸಾಹದಿಂದ ಸ್ವಾಗತಿಸಿತು. ಈ ಅಭೂತಪೂರ್ವ ಹೋರಾಟದ ಜಯಸಾಧನೆಯನ್ನು ರಾಜ್ಯದಾದ್ಯಂತ ಸಂಭ್ರಮೋತ್ಸಾಹದಿಂದ ಆಚರಿಸಲು ಏರ್ಪಾಟುಗಳು ನಡೆದುವು.

ಆದರೆ ವಿಷಾದದ ಸಂಗತಿ ಎಂದರೆ ಅಂದು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ವಿಜಯೋತ್ಸವದ ಮೆರವಣಿಗೆ ಕೆಲವು ಕಿಡಿಗೇಡಿಗಳು ಹಾಗೂ ಸಮಯ ಸಾಧಕರಿಂದ ದಾರಿ ತಪ್ಪಿ ಶಿಸ್ತು ಸಂಯಮ ಕಳೆದುಕೊಂಡಿತು. ಪೋಲೀಸರಿಂದ ಲಾಠೀ ಪ್ರಹಾರ, ಗೋಲೀಬಾರ್ ಕೂಡ ನಡೆದು ಅರಸಪ್ಪನೆಂಬ ಅಮಾಯಕ ವ್ಯಕ್ತಿಯೊಬ್ಬನ ಬಲಿದಾನವಾಗಿದ್ದು ಹೋರಾಟದಲ್ಲೊಂದು ಕಪ್ಪುಚುಕ್ಕೆಯಾಯಿತು.

ಆ ಸಂದರ್ಭದಲ್ಲಿ ಇಡೀ ಹೋರಾಟಕ್ಕೆ ತಮ್ಮ ಭಾಗವಹಿಸುವಿಕೆಯಿಂದ ಸ್ಫೂರ್ತಿ ಚೈತನ್ಯ ನೀಡಿದ್ದ ಡಾ. ರಾಜ್‌ಕುಮಾರ್ ಅವರು ತಮ್ಮ ಹೃದಯಾಂತರಾಳದಿಂದ ಮಾತನಾಡಿ, ವಿಜಯೋತ್ಸವದ ಮೆರವಣಿಗೆ ಹೀಗೆ ಅಮಾಯಕ ಅರಸಪ್ಪನ ಬಲಿದಾನದಿಂದ ಕೊನೆಗೊಳ್ಳುವಂತಾದುದಕ್ಕೆ ತಮ್ಮ ಅನುತಾಪವನ್ನು ವ್ಯಕ್ತಪಡಿಸಿದರು.

ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯ: ಪ್ರತಿಭಟನೆ–ಹೋರಾಟ–ಚಿತ್ರರಂಗದ ಪಾತ್ರ

ಕಾವೇರಿ ನದಿ ನೀರಿನ ವಿವಾದ ನೂರು ವರ್ಷಗಳಿಗೂ ಮೀರಿದ ವಿವಾದ. ದಿನಾಂಕ 11.12.1991ರಲ್ಲಿ ಕೇಂದ್ರ ಸರ್ಕಾರವು ಕಾವೇರಿ ನ್ಯಾಯ ಪಂಚಾಯಿತಿಯ ಮಧ್ಯಂತರ ತೀರ್ಪಿನ ಪ್ರಕಟಣೆಯನ್ನು ಹೊರಡಿಸಿತು. ಅಂದಿನ ಜಲಸಂಪನ್ಮೂಲ ಸಚಿವರಾಗಿದ್ದ ವಿದ್ಯಾಚರಣ ಶುಕ್ಲ ಅವರು ಈ ವಿಷಯವನ್ನು ಪ್ರಕಟಿಸಿದಾಗ ರಾಜ್ಯದಲ್ಲಿ ಜನತೆ ತೀವ್ರವಾಗಿ ಪ್ರತಿಭಟಿಸಿತು.

ರಾಜ್ಯ ಸರ್ಕಾರದ ಹಾಗೂ ರಾಜ್ಯದ ಜನತೆಯ ಹಿತಾಸಕ್ತಿಗೆ ಮಾರಕವಾದ ಮಧ್ಯಂತರ ಗೆಜೆಟ್ ಪ್ರಕಟವಾದ ತಕ್ಷಣ ರಾಜ್ಯದಾದ್ಯಂತ ಪ್ರತಿಭಟನೆ, ಹೋರಾಟ ಪ್ರಾರಂಭವಾಯಿತು.

ಬೆಂಗಳೂರಿನಲ್ಲಿ ರಾಜಕುಮಾರ್ ಅಭಿಮಾನಿ ಸಂಘದವರು ಹದಿನೈದು ಸಾವಿರಕ್ಕೂ ಮೀರಿದ ಪ್ರತಿಭಟನಾಕಾರರಿದ್ದ ಮೆರವಣಿಗೆಯನ್ನು ನಡೆಸಿದರು. 'ಕೋಡಿ ಹರಿಸೇವು ಕಾವೇರಿ ಬಿಡೆವು' ಎಂದು ಘೋಷಣೆ ಕೂಗಿದರು.

ಸರ್ವಪಕ್ಷಗಳ ಮುಖಂಡರು 13ನೇ ಡಿಸೆಂಬರ್ 1991ರಂದು ಕರ್ನಾಟಕ ಬಂದ್‌ಗೆ ಕರೆಕೊಟ್ಟರು. ಕನ್ನಡ ಚಲನಚಿತ್ರರಂಗ ಸಹ ತನ್ನ ಹೊಣೆಗಾರಿಕೆಯನ್ನು ಅರಿತುಕೊಂಡು ತನ್ನ ಬೆಂಬಲವನ್ನು ವ್ಯಕ್ತಪಡಿಸಿತು.

ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಬಹಿಷ್ಕಾರ

ಇದೇ ಸಂದರ್ಭದಲ್ಲಿ ಅಂದರೆ 1992ನೇ ಜನವರಿ ತಿಂಗಳ 10ನೇ ತಾರೀಖಿನಂದು ಬೆಂಗಳೂರಿನಲ್ಲಿ ಅಂತರಾಷ್ಟ್ರೀಯ ಚಲನಚಿತ್ರೋತ್ಸವವನ್ನು

ಏರ್ಪಡಿಸಲಾಗಿತ್ತು. ರಾಜ್ಯಕ್ಕೆ ಆದ ಅನ್ಯಾಯದ ವಿರುದ್ಧ ಡಾ. ರಾಜಕುಮಾರ್, ನಟರಾದ ಅನಂತನಾಗ್, ಚಿತ್ರ ನಿರ್ಮಾಪಕ ನಂಜುಂಡೇಗೌಡ, ನಿರ್ದೇಶಕ ರಾಜೇಂದ್ರಸಿಂಗ್ ಬಾಬು, ಸಂಗೀತ ನಿರ್ದೇಶಕ ಹಂಸಲೇಖ ಸೇರಿದಂತೆ ಚಿತ್ರೋದ್ಯಮದ ಹಲವಾರು ಮಂದಿ ವಿರೋಧ ವ್ಯಕ್ತಪಡಿಸಿದರು.

ರಂಗಭೂಮಿ ಕ್ರಿಯಾ ಸಮಿತಿಯವರು ಪನೋರಮಾ ಚಿತ್ರ ಪ್ರದರ್ಶನ ನಡೆಯುತ್ತಿದ್ದ ಸಪ್ನ ಚಿತ್ರಮಂದಿರದ ಮುಂದೆ ಪ್ರತಿಭಟನಾ ಪ್ರದರ್ಶನ ಏರ್ಪಡಿಸಿದರು.

ಇವರೆಲ್ಲರ ಬಹಿಷ್ಕಾರದ ನಡುವೆಯೂ ಸರ್ಪಗಾವಲಿನಲ್ಲಿ ಚಿತ್ರೋತ್ಸವವು ಪ್ರಾರಂಭಗೊಂಡಿತು. ಸಾಗರೋಪಾದಿಯಲ್ಲಿ ಉತ್ಸವವನ್ನು ತಡೆಯಲು ಬಂದ ಇಪ್ಪತ್ತು ಸಾವಿರಕ್ಕೂ ಹೆಚ್ಚಿನ ರೈತರನ್ನು ಬಂಧಿಸಲಾಯಿತು. ಸಮಾರಂಭದ ಅಂಗವಾಗಿ ನಡೆಯಬೇಕಾಗಿದ್ದ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿತ್ತು.

ಚಿತ್ರೋತ್ಸವವನ್ನು ಉದ್ಘಾಟಿಸುವ ಅಪರೂಪದ ಗೌರವದ ಅವಕಾಶವನ್ನು ಪಡೆದಿದ್ದ ಡಾ. ರಾಜಕುಮಾರ್ ಅವರು ನಾಡಿನ ಜನತೆಯ ಮನೋಭಾವವನ್ನು ಅರಿತುಕೊಂಡು ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ಉದ್ಘಾಟನೆಗೆ ತಮ್ಮ ಅಸಮ್ಮತಿಯನ್ನು ಸೂಚಿಸಿದರು. ಅವರ ಮನವೊಲಿಸಿ ಉದ್ಘಾಟನೆಗೆ ಅವರನ್ನು ಕರೆತರಲು ಸಂಘಟಕರು ಮಾಡಿದ ಭಗೀರಥ ಪ್ರಯತ್ನ ನಿರರ್ಥಕವಾಯಿತು.

ಉರ್ದು ವಾರ್ತಾ ಪ್ರಸಾರಕ್ಕೆ ವಿರೋಧ – ಚಿತ್ರರಂಗದ ಆಗ್ರಹ

1994ರ ಅಕ್ಟೋಬರ್ 2 ಗಾಂಧಿ ಜಯಂತಿಯಿಂದ, ಬೆಂಗಳೂರು ದೂರದರ್ಶನ ಕೇಂದ್ರದಿಂದ ರಾತ್ರಿ 7.45ರಿಂದ ಹತ್ತು ನಿಮಿಷಗಳ ಉರ್ದು ವಾರ್ತಾ ಪ್ರಸಾರವನ್ನು ಆರಂಭಿಸಲು ಸರ್ಕಾರ ಯೋಜಿಸಿದೆಯೆಂಬ ವಾರ್ತೆ ಪ್ರಕಟವಾಯಿತು.

ಆದರೆ ಕನ್ನಡ ಕಾರ್ಯಕ್ರಮಗಳಿಗೇ ಸಮಯವಿಲ್ಲದಿರುವಾಗ ಉರ್ದು ವಾರ್ತಾ ಪ್ರಸಾರ ಮಾಡುವುದು ಸರಿಯಲ್ಲ ಎಂಬುದು ಕನ್ನಡಪರ ಸಂಘಟನೆಗಳು ಅಭಿಪ್ರಾಯ ತಳೆದುವು ಹಾಗೂ ಈ ಧಿಡೀರ್ ಬದಲಾವಣೆಯನ್ನು ಪ್ರಬಲವಾಗಿ ವಿರೋಧಿಸಿದವು. ಅನೇಕ ಜನ ಕನ್ನಡಪರ ಹೋರಾಟಗಾರರೂ, ಸಾಹಿತಿಗಳೂ, ಸಂಘ-ಸಂಸ್ಥೆಗಳು ಈ ನಿಲುವಿಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದವು.

ರಾಜಕುಮಾರ್ ಅಭಿಮಾನಿಗಳ ಸಂಘದ ಕಾರ್ಯಕರ್ತರು ತಮ್ಮ ವಿರೋಧವನ್ನು ಮೆರವಣಿಗೆ, ಪ್ರದರ್ಶನಗಳ ಮುಖಾಂತರ ವಿರೋಧಿಸಿದರು. ಕನ್ನಡ ಚಲನಚಿತ್ರ

ನಿರ್ಮಾಪಕ, ನಿರ್ದೇಶಕ ರಾಜೇಂದ್ರಸಿಂಗ್‌ಬಾಬು ಮತ್ತಿತರರು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಯಾವ ಕಾರಣಕ್ಕೂ ಯಾವುದೇ ಕಾಲದಲ್ಲಿ ಬೆಂಗಳೂರು ದೂರದರ್ಶನದಿಂದ ಉರ್ದು ವಾರ್ತೆಯನ್ನು ಪ್ರಸಾರ ಮಾಡಕೂಡದು ಎಂದು ಡಾ. ರಾಜಕುಮಾರ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಲಿ, ಕನ್ನಡ ನಿರ್ಮಾಪಕರ ಸಂಘ, ಕನ್ನಡ ಚಲನಚಿತ್ರ ಕಲಾವಿದರ ಸಂಘ ಹಾಗೂ ಕನ್ನಡ ಚಲನಚಿತ್ರ ನಿರ್ದೇಶಕ ಸಂಘದ ಅಧ್ಯಕ್ಷರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರು.

ಜನತೆಯ ಈ ಪ್ರತಿರೋಧದ ಮನೋಭಾವವನ್ನು ಅರ್ಥಮಾಡಿಕೊಂಡ ವಾರ್ತಾ ಮತ್ತು ಪ್ರಸಾರ ಇಲಾಖೆ ತನ್ನ ಯೋಜಿತ ಕಾರ್ಯಕ್ರಮವನ್ನು ನಿಲ್ಲಿಸುವಂತಾಯಿತು.

ಕನ್ನಡ ಚಳುವಳಿಯ ಪ್ರಮುಖರು

ಅರವತ್ತರ ದಶಕದಲ್ಲಿ ಆರಂಭಗೊಂಡ ಕನ್ನಡ ಚಳುವಳಿ ಹಲವಾರು ಕ್ಷೇತ್ರಗಳಲ್ಲಿ ಕನ್ನಡಿಗರಿಗೆ ಆಗುತ್ತಿದ್ದ ಅನ್ಯಾಯ-ವಂಚನೆಯನ್ನು ನಿರ್ಮೂಲ ಮಾಡಲು ಸಹಾಯಕವಾಯಿತು. ಅದರಲ್ಲಿಯೂ ಕನ್ನಡ ಚಿತ್ರರಂಗ ಚಳುವಳಿಯಿಂದ ಪಡೆದ ಬೆಂಬಲವಂತೂ ಅಪಾರ-ಅನನ್ಯ.

ಈ ಹೋರಾಟವು ಸಂಪೂರ್ಣವಾಗಿ ಕನ್ನಡ ಯುವಜನತೆ, ಕನ್ನಡ ಕಾರ್ಮಿಕರು, ಕನ್ನಡ ವಿದ್ಯಾರ್ಥಿಗಳು –ಹೀಗೆ ಜನಸಾಮಾನ್ಯರಿಂದ ತಮ್ಮ ಭವಿಷ್ಯಕ್ಕಾಗಿ, ತಮ್ಮ ಉಳಿವಿಗಾಗಿ ನಡೆದ ಚಳುವಳಿ; ಕನ್ನಡ ಸಾಂಸ್ಕೃತಿಕ ಲೋಕದ ಅಸ್ತಿತ್ವಕ್ಕಾಗಿ, ಕನ್ನಡ ಸಂಗೀತ, ನಾಟಕ, ಚಲಚ್ಚಿತ್ರ –ಹೀಗೆ ಹತ್ತು ಹಲವು ಆಯಾಮಗಳು ತಮ್ಮ ನಾಡಿನಲ್ಲಿ ಭದ್ರವಾಗಿ ನೆಲೆಯೂರಲು ನಡೆದಂತಹ ಚಳುವಳಿ.

ಇದರಲ್ಲಿ ಯಾವೊಬ್ಬ ರಾಜಕೀಯ ನಾಯಕನಾಗಲಿ, ರಾಜಕೀಯ ಪಕ್ಷವಾಗಲೀ ಆ ಹಣೆಪಟ್ಟಿಯನ್ನು ಕಟ್ಟಿಕೊಂಡು ಚಳುವಳಿಯಲ್ಲಿ ಭಾಗವಹಿಸಲಿಲ್ಲ. ಅಲ್ಲಿದ್ದುದು ಕೇವಲ ಕನ್ನಡದ ಹಿತಾಸಕ್ತಿ ಮಾತ್ರ.

ಅಂದಿನ ಚಳುವಳಿಗೆ ನಾಯಕತ್ವ ಕೊಟ್ಟವರು ಕನ್ನಡ ಸಾಹಿತಿಗಳು, ಕನ್ನಡ ಕಲಾವಿದರು. ಅವರೆಲ್ಲರ ಹೆಸರನ್ನು ಪಟ್ಟಿ ಮಾಡುವುದೆಂದರೆ ಅದು ಅಸಾಧ್ಯದ ಮಾತೇ ಸರಿ. ಹಾಗಾಗಿ ಅಂದು ಚಳುವಳಿಯಲ್ಲಿ ಭಾಗವಹಿಸಿದವರ, ನಾಯಕತ್ವ ವಹಿಸಿದವರ ಕೆಲವರ ಹೆಸರನ್ನು ಮಾತ್ರ ಅಲ್ಲಲ್ಲಿ ಉಲ್ಲೇಖಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ ಅಂದು ನಾಯಕತ್ವ ವಹಿಸಿದ್ದ ಐದು ಜನ ಮುಂದಾಳುಗಳ ಪರಿಚಯ ಪ್ರಾತಿನಿಧಿಕವಾಗಿ ಮಾಡಲಾಗಿದೆ.



ಅ.ನ.ಕೃ. ಮತ್ತು ಕನ್ನಡ ಪ್ರಜ್ಞೆ

ಕಳೆದ ಶತಮಾನದ ಇಪ್ಪತ್ತರ ದಶಕ. ಕನ್ನಡ ರಂಗಭೂಮಿಯಲ್ಲಿ ಪೌರಾಣಿಕ ನಾಟಕಗಳಿಗೇ ಪ್ರಾಧಾನ್ಯತೆ. ವರದಾಚಾರ್ಯರ ನಾಟಕದ ಕಂಪನಿ –ರತ್ನಾವಳಿ ಥಿಯೇಟರ್ಸ್– ಆಡುತ್ತಿದ್ದ ಪೌರಾಣಿಕ ನಾಟಕಗಳಿಗೆ ರಂಗಾಸಕ್ತರಿಂದ ಭಾರೀ ಪ್ರೋತ್ಸಾಹ.

ಇಂತಹ ಸಂದರ್ಭದಲ್ಲಿ ಹದಿನಾರರ ಹದಿಹರೆಯದ ಬಾಲಕನೊಬ್ಬ ವರದಾಚಾರ್ಯರನ್ನು ಪ್ರಶ್ನಿಸಿದ: "ಯಾಕೆ, ಕನ್ನಡ ರಂಗಭೂಮಿ ಕೇವಲ ಪೌರಾಣಿಕ ನಾಟಕಗಳಿಗೇ ಮೀಸಲಾಗಿದೆಯೆಲ್ಲ? ಸಾಮಾಜಿಕ ನಾಟಕಗಳಿಗೆ ಅವಕಾಶವೇಕಿಲ್ಲ?" ಎಂದು.

"ಕನ್ನಡದಲ್ಲಿ ಸಾಮಾಜಿಕ ನಾಟಕಗಳೆಲ್ಲಿವೆ? ಅದನ್ನು ಬರೆದುಕೊಡುವವರು ಯಾರು?" ಎಂದು ವರದಾಚಾರ್ಯರು ಪ್ರಶ್ನಿಸಿದರು.

"ನೀವು ನಾಟಕ ಆಡುವ ಭರವಸೆ ಕೊಟ್ಟರೆ, ನಾನು ಬರೆದುಕೊಡುತ್ತೇನೆ" ಎಂದ ಆ ಬಾಲಕ.

"ಸರಿ, ನೀನು ಬರೆದುಕೊಟ್ಟರೆ, ನಾನು ಖಂಡಿತ ಆಡುತ್ತೇನೆ" ಎಂದು ಭರವಸೆ ಕೊಟ್ಟರು, ವರದಾಚಾರ್ಯರು.

ಆ ಭರವಸೆಯನ್ನೇ ಆಧಾರವಾಗಿಟ್ಟುಕೊಂಡು ರಚಿತವಾದದ್ದೇ 'ಮದುವೆಯೋ ಮನೆ ಹಾಳೋ' ಎಂಬ ನಾಟಕ. ಆ ಸವಾಲನ್ನು ಸ್ವೀಕರಿಸಿ ವರದಾಚಾರ್ಯರಂತಹ ಹಿರಿಯರಿಗೆ, ರಂಗಶ್ರೇಷ್ಠರಿಗೆ, ಸಾಮಾಜಿಕ ನಾಟಕವನ್ನು ರಚಿಸಿಕೊಟ್ಟವರೇ ಮುಂದೆ 'ಅ.ನ.ಕೃ.' ಎಂಬ ಹೆಸರಿನಿಂದ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ, ಪ್ರಸಿದ್ಧರಾದ ಶ್ರೀ ಅ.ನ. ಕೃಷ್ಣರಾಯರು.

ಹೀಗೆ ಹದಿನಾರನೆಯ ವಯಸ್ಸಿನಲ್ಲಿಯೇ ತನ್ನ ನಾಟಕ ರಚನೆಯಿಂದ ಸಾಹಿತಿಯಾದ ಅ.ನ.ಕೃ. ಮುಂದೆ ಕನ್ನಡದ ಉದ್ಧಾಮ ಸಾಹಿತಿಯಾಗಿ, 'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ಕನ್ನಡ ಸಾಹಿತ್ಯದ ಎಲ್ಲಾ ಪ್ರಾಕಾರಗಳಲ್ಲಿ ಕೈಯಾಡಿಸಿದ ಸಾಹಿತ್ಯ ಶ್ರೇಷ್ಠರಾದರು. ನಾಟಕ, ಕಾದಂಬರಿ, ಕಥಾಸಂಕಲನ, ಜೀವನಚರಿತ್ರೆ, ವಿಚಾರ ಸಾಹಿತ್ಯ –ಹೀಗೆ ಸಾಹಿತ್ಯದ ನಾನಾ ಪ್ರಾಕಾರಗಳಲ್ಲಿ ತಮ್ಮ ಕೊಡುಗೆಯನ್ನು ನೀಡಿದರು. ತಮ್ಮ ಸಾಮಾಜಿಕ ಕಾದಂಬರಿಗಳಿಂದ ಕನ್ನಡದ ಸಾಮಾನ್ಯ ಓದುಗನಲ್ಲಿ ಓದುವ ಪ್ರಜ್ಞೆಯನ್ನು ಬೆಳೆಸಿದರು.

ಕನ್ನಡವೆಂದರೆ ತಾತ್ಸಾರ ಭಾವನೆಯನ್ನು ತೋರುತ್ತಿದ್ದ, 'ಕನ್ನಡದಲ್ಲೇನಿದೆ?' ಎಂದವರ ಪ್ರಶ್ನೆಗೆ ತಮ್ಮ ಕಾದಂಬರಿಗಳಿಂದ, ಸಮರ್ಥ ಬರವಣಿಗೆಯಿಂದ, 'ಕನ್ನಡದಲ್ಲಿ ಏನಿಲ್ಲ?' ಎಂದು ಮರುಸವಾಲು ಹಾಕುವ ದಿಟ್ಟತನ ಇವರದಾಗಿತ್ತು.

ಆರಂಭದಲ್ಲಿ ಕನ್ನಡದ ಬಗ್ಗೆ ತಾತ್ಸಾರ ಮನೋಭಾವನೆಯನ್ನೇ ಹೊಂದಿದ್ದ ಖ್ಯಾತ ಸಾಹಿತಿ ಬೀಚಿ ಕನ್ನಡದತ್ತ ಒಲವು ತೋರಿದ್ದು ಅ.ನ.ಕೃ. ಅವರ ಪುಸ್ತಕಗಳಿಂದಲೇ. ತಮ್ಮ ಹೆಂಡತಿಯ ಬಲವಂತಕ್ಕೆ, ಆಕೆಗಾಗಿ ಕೊಂಡ ಕನ್ನಡ ಪುಸ್ತಕವನ್ನು ರೈಲಿನಲ್ಲಿ ಪ್ರಯಾಣ ಮಾಡುತ್ತ ಓದಿದ್ದು. ಅದೂ ಸಹ ಕನ್ನಡದ ಪುಸ್ತಕವೆಂದು ಬೇರೆಯವರಿಗೆ ಗೊತ್ತಾಗಬಾರದೆಂದು 'ಇಲ್ಲಸ್ಟ್ರೇಟೆಡ್ ವೀಕ್ಲಿ'ಯ ಪುಟಗಳ ಮಧ್ಯೆ ಇರಿಸಿಕೊಂಡು. ಅದನ್ನು ಓದುತ್ತಾ, ಓದುತ್ತಾ ಆ ಕಾದಂಬರಿಯ ಕಥಾವಸ್ತು, ಶೈಲಿ, ಭಾಷೆಗೆ ಮಾರು ಹೋಗಿ ಅದನ್ನು ಪೂರ್ತಿಯಾಗಿ ಓದಿ ನಂತರ ಕನ್ನಡ ಸಾಹಿತ್ಯ ಆರಾಧಕರಾಗಿದ್ದು, ತಾನೂ ಬರೆಯಲು ಆರಂಭಿಸಿದ್ದು –ಇದೆಲ್ಲವನ್ನೂ ಬೀಚಿಯವರು ಎಷ್ಟೋ ಸಲ ಹೇಳಿಕೊಂಡಿದ್ದಾರೆ. ಹಾಗೆ ಓದಿಸಿಕೊಂಡು ಹೋದ ಪುಸ್ತಕ ಅ.ನ.ಕೃ. ಅವರ ಮೇರು ಕೃತಿ "ಸಂಧ್ಯಾರಾಗ".

ಹೀಗೆ ಜನಸಾಮಾನ್ಯರನ್ನು ಕನ್ನಡ ಸಾಹಿತ್ಯದತ್ತ ಆಕರ್ಷಿಸಿದ ಅ.ನ.ಕೃ. ಕಾದಂಬರಿಗಳು ತಮ್ಮನ್ನು ತಾವೇ ಮರೆಯುವಂತೆ ಮಾಡುತ್ತಿದ್ದವು.

ಇನ್ನೂರಕ್ಕೂ ಮೀರಿದ ಸಾಹಿತ್ಯ ಕೃತಿಗಳನ್ನು ರಚಿಸಿದ್ದ ಹಿರಿಮೆ ಇವರದಾಗಿತ್ತು. ಇದರಲ್ಲಿ ಕಾದಂಬರಿಗಳ ಸಂಖ್ಯೆಯೇ ಒಂದು ನೂರಕ್ಕೂ ಮೀರಿದ್ದು, "ಕಾದಂಬರಿ ಸಾರ್ವಭೌಮ"ರೆಂದೇ ಪ್ರಖ್ಯಾತರಾಗಿದ್ದರು.

ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸಾಧನೆಗೈದಿದ್ದರೂ, ಕನ್ನಡ ಜನಸಾಮಾನ್ಯರಲ್ಲಿ ಕನ್ನಡ ಪ್ರಜ್ಞೆಯನ್ನು ಮೂಡಿಸಿದ ಅವರ ಸಾಧನೆ ಅಸಾಮಾನ್ಯವಾದುದು– ಅನುಪಮವಾದುದು. ಕನ್ನಡಿಗರಲ್ಲಿ ಆತ್ಮಗೌರವ, ಸ್ವಾಭಿಮಾನ ಮೂಡಿಸಿ, ಅವರಲ್ಲಿ ಹೋರಾಟದ ಕಿಚ್ಚನ್ನು ಬೆಳೆಸಿದರು.

ಅ.ನ.ಕೃ. ಅವರಲ್ಲಿ ಮೊದಲಿಗೆ ಕನ್ನಡತನ ಜಾಗೃತಿಯಾದುದು, ಕನ್ನಡ ನಾಡು–ನುಡಿಯ ಬಗ್ಗೆ ಅಭಿಮಾನ ಮೂಡಲು ಕಾರಣವಾದುದು ಅವರು ಶಾಂತಿನಿಕೇತನದಲ್ಲಿದ್ದಾಗ.

ಒಂದು ಸಲ ರವೀಂದ್ರನಾಥ ಠಾಗೂರರು ವಿದ್ಯಾರ್ಥಿಗಳೊಂದಿಗೆ ಸಂಭಾಷಿಸುತ್ತಿದ್ದಾಗ ನಡೆದ ಒಂದು ಘಟನೆ ಬಂಗಾಳಿಗಳು ತಮ್ಮ ಭಾಷೆ ಹಾಗೂ ಸಂಸ್ಕೃತಿ ಬಗ್ಗೆ ಎಷ್ಟು ಅಭಿಮಾನ ಹೊಂದಿದ್ದಾರೆ ಎಂದು ತಿಳಿಯಲು ಅವಕಾಶವಾಯಿತು.

ಬಂಗಾಳಿ ವಿದ್ಯಾರ್ಥಿಯೊಬ್ಬ ಹಾಗೂ ಬೇರೆ ರಾಜ್ಯದಿಂದ ಬಂದಿದ್ದ ಇನ್ನೊಬ್ಬ ಬೇರೆ ಭಾಷೆಯ ವಿದ್ಯಾರ್ಥಿ – ಇಬ್ಬರೂ ಠಾಗೂರರನ್ನು ಒಟ್ಟಿಗೆ ಪ್ರಶ್ನೆಯನ್ನು ಕೇಳಿದಾಗ, ಠಾಗೂರರು ತೋರಿಸಿದ ತಮ್ಮ ಸ್ವಭಾಷಾಭಿಮಾನ ಅ.ನ.ಕೃ ಅವರನ್ನು ದಂಗುಪಡಿಸಿತು. ಮೊದಲು ಬಂಗಾಳಿ ಭಾಷೆಯಲ್ಲಿ ಪ್ರಶ್ನೆ ಕೇಳಿದ ವಿದ್ಯಾರ್ಥಿಗೆ ಉತ್ತರಿಸಿ ನಂತರ ಬೇರೆ ಭಾಷೆಯ ವಿದ್ಯಾರ್ಥಿಗೆ ಉತ್ತರಿಸುವುದಾಗಿ ಠಾಗೂರರು ಹೇಳಿದರು.

ಠಾಗೂರರ ಈ ಮನೋಭಾವ ಅ.ನ.ಕೃ ಅವರ ಸ್ವಾಭಿಮಾನವನ್ನು ಕೆರಳಿಸಿತು. ಕನ್ನಡದ ಪ್ರಜ್ಞೆ ಅವರಲ್ಲಿ ಮೂಡಲು ಪ್ರಚೋದಿಸಿತು. ಬಂಗಾಳಿಗಳು ಅವರ ಭಾಷೆಯ ಬಗ್ಗೆ, ಅವರ ಕವಿಗಳು, ಸಾಹಿತಿಗಳು, ಸಂತರುಗಳ ಬಗ್ಗೆ ಅಭಿಮಾನ ಹೊಂದಿದ್ದಾರೆ. ನಾನ್ಯಾಕೆ ನಮ್ಮವರ ಬಗ್ಗೆ ಅದೇ ಮನೋಭಾವವನ್ನು–ಅಭಿಮಾನವನ್ನು ಹೊಂದಿರಬಾರದು? ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಂಡರು.

ಹಾಗಾಗಿ ಶಾಂತಿನಿಕೇತನಕ್ಕೆ ಅಧ್ಯಯನಕ್ಕೆ ಹೋದ ಅವರಿಗೆ ಅದರಿಂದ ಯಾವ ಪದವಿ–ಪ್ರತಿಷ್ಠೆಗಳು ದೊರಕಿದವೋ ಬಿಟ್ಟವೋ? ಆದರೆ ಅವರಲ್ಲಿ ಕನ್ನಡಾಭಿಮಾನ ಪ್ರಜ್ವಲಿಸಲು ಅದು ದಾರಿಯಾಯಿತು.

ಅಂದು ಅವರಲ್ಲಿ ಮೂಡಿದ ಕನ್ನಡದ ಪ್ರಜ್ಞೆ, ಅಭಿಮಾನ ಅವರ ಕೊನೆಯುಸಿರಿರುವವರೆಗೂ ಅವರಲ್ಲಿ ಮನೆಮಾಡಿತ್ತು. ಕನ್ನಡಕ್ಕೆ ಎಲ್ಲೇ ಅನ್ಯಾಯವಾಗಲೀ, ಯಾರಿಂದಲೇ ಆಗಲಿ ಅದನ್ನು ಪ್ರತಿಭಟಿಸಲು ಹಿಂದೆಗೆಯುತ್ತಿರಲಿಲ್ಲ. ಈ ಹೋರಾಟದ ಹಾದಿಯಲ್ಲಿ ಯಾರದೇ ನಿಷ್ಠುರ ಕಟ್ಟಿಕೊಳ್ಳಬೇಕಾಗಿ ಬಂದರೂ ಅದಕ್ಕೆ ಹಿಂಜರಿಯದೆ, ತಮ್ಮ ನಿಲುವನ್ನು ನಿಷ್ಠುರವಾಗಿ, ಧೈರ್ಯದಿಂದ ಪ್ರತಿಪಾದಿಸುವ ಎದೆಗಾರಿಕೆಯನ್ನು ಹೊಂದಿದ್ದರು.

1938–43ರ ಅವಧಿಯಲ್ಲಿ ನಡೆದ ಒಂದು ಘಟನೆ ಅವರ ಈ ದಿಟ್ಟ ನಿಲುವನ್ನು ಪ್ರದರ್ಶಿಸುತ್ತದೆ.

ಆ ಸಮಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸುತ್ತಿದ್ದ 'ಕನ್ನಡ ನುಡಿ' ಪತ್ರಿಕೆಗೆ ಅ.ನ.ಕೃ ಸಂಪಾದಕರಾಗಿದ್ದರು. ಆ ಸಂದರ್ಭದಲ್ಲಿಯೇ, ಅಂದರೆ 1939ರಲ್ಲಿ, ಬಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆರ್.ಆರ್. ದಿವಾಕರ್ ಅವರು ಆಯ್ಕೆಗೊಂಡರು. ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದವರು ತಮ್ಮ ಅಧಿಕಾರದ ಅವಧಿಯಲ್ಲಿ ಕನ್ನಡದ ಪ್ರಸಾರಕ್ಕಾಗಿ ರಾಜ್ಯದಲ್ಲೆಲ್ಲಾ ಪ್ರವಾಸ ಮಾಡಬೇಕಾದ ಸಂಪ್ರದಾಯ ರೂಢಿಯಲ್ಲಿತ್ತು. ಅದರಂತೆ ದಿವಾಕರರೂ ಸಹ ಪ್ರವಾಸ ಕೈಗೊಂಡರು. ಆದರೆ, ಆಶ್ಚರ್ಯವೆಂದರೆ ಅವರು ಮಾಡಿದ್ದು ಮಾತ್ರ – ಹಿಂದಿ ಪ್ರಸಾರವನ್ನು – ಕನ್ನಡದ ಪ್ರಸಾರವನ್ನಲ್ಲ. ಕಾರಣ– ಅವರು ಹಿಂದಿ ಪ್ರಸಾರ ಪರಿಷತ್ತಿನ ಅಧ್ಯಕ್ಷರೂ ಆಗಿದ್ದರು. ಹಾಗಾಗಿ ಕನ್ನಡದ ಬದಲಿಗೆ ಹಿಂದಿಯ ಬಗ್ಗೆ ಮಮತೆ ತೋರಿದರು.

ಅಪ್ಪಟ ಕನ್ನಡ ಅಭಿಮಾನಿಯಾಗಿದ್ದ ಅ.ನ.ಕೃ ಅವರಿಗೆ ದಿವಾಕರರ ಈ ವರ್ತನೆ ಸರಿಬೀಳಲಿಲ್ಲ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದವರು, ಕನ್ನಡವನ್ನು ತಿರಸ್ಕರಿಸಿ, ಹಿಂದಿ ಪ್ರಸಾರ ಮಾಡುವುದೇ? ಸ್ವಂತ ಮನೆ ಹೊತ್ತಿಕೊಂಡು ಉರಿಯುತ್ತಿದ್ದಾಗ ಪಕ್ಕದ ಮನೆಯ ತೋಟಕ್ಕೆ ನೀರೆರೆಯುವುದೆ? ದಿವಾಕರರ ವರ್ತನೆಯನ್ನು ಖಂಡಿಸಿ, ಕನ್ನಡ ನುಡಿಯ ಸಂಪಾದಕೀಯದಲ್ಲಿ, ಯಾವ ಮುಲಾಜೂ ಇಲ್ಲದೆ ನಿಷ್ಠುರವಾಗಿ ಟೀಕಿಸಿ ಅಗ್ರಲೇಖನವನ್ನು ಬರೆದೇ ಬಿಟ್ಟರು. ಸಮ್ಮೇಳನದ ಅಧ್ಯಕ್ಷರನ್ನು ಟೀಕಿಸಿ ಬರೆದುದು ತರವಲ್ಲವೆಂದು ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಬಿ.ಎಂ. ಶ್ರೀಕಂಠಯ್ಯನವರು ಹಾಗೂ ಇತರರು ಅ.ನ.ಕೃ ಅವರಿಗೆ ಸೂಚಿಸಿದರು. ಆದರೆ ಅದಕ್ಕೆ ಸೊಪ್ಪು ಹಾಕದ

ಅ.ನ.ಕೃ ಕನ್ನಡ ನುಡಿಯ ಸಂಪಾದಕತ್ವಕ್ಕೇ ರಾಜೀನಾಮೆ ನೀಡುವ ಮೂಲಕ ತಮ್ಮ ನಿಲುವಿಗೇ ಬದ್ಧರಾದರು.

ಹೀಗೆ ಕನ್ನಡಾಭಿಮಾನದ ಪ್ರಶ್ನೆ ಬಂದಾಗ ಯಾರೊಂದಿಗೂ ರಾಜೀ ಮಾಡಿಕೊಳ್ಳದ ಅವರು ಜನಸಾಮಾನ್ಯರಲ್ಲಿ ಕನ್ನಡಾಭಿಮಾನವನ್ನು ಮೂಡಿಸಲೂ ಸಹ ಕಾರಣೀಭೂತರಾದರು. ಕಲಾವಿದರು, ಅದರಲ್ಲಿಯೂ ಸಂಗೀತ ಕಲಾವಿದರು ತಮ್ಮ ಕಛೇರಿಗಳಲ್ಲಿ ಕನ್ನಡದ ಹಾಡುಗಳನ್ನು, ದಾಸರ ಕೀರ್ತನೆಗಳನ್ನು, ವಚನಗಳನ್ನು ಹಾಡಲು ಪ್ರೇರೇಪಿಸಿದರು.

ಪ್ರಸಿದ್ಧ ಹಿಂದೂಸ್ಥಾನಿ ಗಾಯಕರಾಗಿದ್ದ ಮಲ್ಲಿಕಾರ್ಜುನ ಮನ್ಸೂರರು ಹಾಗೂ ಅ.ನ.ಕೃ ಅವರಲ್ಲಿ ಪರಸ್ಪರ ಗೆಳೆತನವಿತ್ತು. ಮನ್ಸೂರರಲ್ಲಿ ಕನ್ನಡತನದ ಅರಿವನ್ನು ಮೂಡಿಸಿ, ಅವರ ಸಂಗೀತ ಕಛೇರಿಗಳಲ್ಲಿ ವಚನಗಳನ್ನು ಹಾಡುವಂತೆ ಪ್ರೇರೇಪಿಸಿದರು. ಹಾಗಾಗಿ ಮನ್ಸೂರರು, ತಮ್ಮ ಕಛೇರಿಗಳಲ್ಲಿ ವಚನಗಳನ್ನು ಹಾಡಲು ಪ್ರಾರಂಭಿಸಿದರು. ಈ ರೀತಿ ಸಂಗೀತ ಕಛೇರಿಗಳಲ್ಲಿ ಕನ್ನಡದ ಕಂಪು ಹರಡಲು ಸ್ಫೂರ್ತಿ ಇತ್ತವರು ಅ.ನ.ಕೃ. ಅರವತ್ತರ ದಶಕದವರೆಗೂ ಸಾಹಿತ್ಯ ರಚನೆಯಲ್ಲಿಯೇ ತಲ್ಲೀನರಾಗಿದ್ದ ಅ.ನ.ಕೃ ಮುಂದೆ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದು ಕನ್ನಡ ಸಮಸ್ಯೆಗಳ ನಿವಾರಣೆಗಾಗಿ–ಕನ್ನಡಿಗರ ಸ್ವಾಭಿಮಾನದ ದನಿಯಾಗಿ.

1960ರ ಡಿಸೆಂಬರ್ 27, 28, 29 –ಈ ದಿನಗಳಲ್ಲಿ ಮಣಿಪಾಲದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅ.ನ.ಕೃ ಆಯ್ಕೆಯಾದರು. ಆ ಸಂದರ್ಭದಲ್ಲಿ ಅವರು ಮಾಡಿದ ಅಧ್ಯಕ್ಷ ಭಾಷಣ ಅತ್ಯಂತ ಹರಿತವಾಗಿತ್ತು. ನರಸತ್ತಂತಿದ್ದ ಕನ್ನಡಿಗರನ್ನು ಬಡಿದೆಬ್ಬಿಸುವಂತಿತ್ತು. ಕನ್ನಡ ಭಾಷೆಯ, ಕನ್ನಡಿಗರ ಎಲ್ಲ ಸಮಸ್ಯೆಗಳನ್ನು ಪದರ ಪದರವಾಗಿ ವಿಶ್ಲೇಸಿದ ಅವರು ಕನ್ನಡದ ಏಳಿಗೆಗೆ, ಕನ್ನಡದ ಉಳಿವಿಗೆ ಎಲ್ಲ ಕನ್ನಡಿಗರನ್ನು ಟೊಂಕ ಕಟ್ಟಿ ನಿಲ್ಲುವಂತೆ ಪ್ರೇರೇಪಿಸಿದರು – ಕರೆ ನೀಡಿದರು.

ಈ ಕರೆಗೆ ಓಗೊಟ್ಟಂತೆ 4.2.1962ರಂದು ಬೆಂಗಳೂರಿನಲ್ಲಿ ಕನ್ನಡಿಗರ ಸಮಾವೇಶವೊಂದು ನಡೆಯಿತು. ಚರಿತ್ರಾರ್ಹವಾದ ಈ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದವರು ಪ್ರಖ್ಯಾತ ನಾಟಕಕಾರರಾದ ಶ್ರೀ ಶ್ರೀರಂಗರು. ಉದ್ಘಾಟಕರು ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು.

ಅ.ಸ.ಕೃ ಅವರ ಅಧ್ಯಕ್ಷತೆಯಲ್ಲಿ–ನಾಯಕತ್ವದಲ್ಲಿ ರೂಪುಗೊಳ್ಳುತ್ತಿದ್ದ ಈ ಎಲ್ಲಾ ಹೋರಾಟಗಳಲ್ಲಿಯೂ ಅವರೊಂದಿಗೆ ಪ್ರಮುಖವಾಗಿ ಪಾಲ್ಗೊಳ್ಳುತ್ತಿದ್ದವರು ಮ.

ರಾಮಮೂರ್ತಿ. ಅಲ್ಲದೆ ನಾಡಿಗೇರ ಕೃಷ್ಣರಾಯರು, ಮೈ.ಸು. ನಟರಾಜ, ಜೀಜಿ, ಬೆ.ನಿ. ಈಶ್ವರಪ್ಪ ಮುಂತಾದವರು.

ಕನ್ನಡ ಚಿತ್ರರಂಗದ ಮೇಲೆ ಕನ್ನಡ ಚಳುವಳಿಯಿಂದ ಆದ ಪ್ರಭಾವವಂತೂ ಅಪಾರ. ಬಹುಶಃ ಯಾವುದೇ ಕ್ಷೇತ್ರದ ಮೇಲೆ ಆದ ಪ್ರಭಾವಕ್ಕಿಂತ ಚಿತ್ರರಂಗದ ಮೇಲೆ ಆದ ಪ್ರಭಾವ ಅತ್ಯಧಿಕ ಹಾಗೂ ಅನನ್ಯ. ಬೆಂಗಳೂರಿನ ಕೆಂಪೇಗೌಡ ರಸ್ತೆಯ ಚಿತ್ರಮಂದಿರಗಳವರು ಕನ್ನಡ ಚಿತ್ರ ಪ್ರದರ್ಶಿಸುವುದೇ ಮೈಲಿಗೆ ಎಂಬ ಸ್ಥಿತಿಯಲ್ಲಿದ್ದಾಗ ಅದನ್ನು ಬದಲಿಸಿ ಕನ್ನಡ ಚಿತ್ರ ಪ್ರದರ್ಶನಗೊಳ್ಳುವಂತೆ ಮಾಡಿದ ಶ್ರೇಯಸ್ಸು ಕನ್ನಡ ಚಳುವಳಿಗೇ ಸಲ್ಲಬೇಕು.

ಅರವತ್ತರ ದಶಕದಲ್ಲಿ ಡಬ್ಬಿಂಗ್ ಚಿತ್ರಗಳು ಕನ್ನಡ ಚಿತ್ರಗಳಿಗೆ ಮಾರಕವಾಗಿದ್ದುವು. ಕನ್ನಡ ಚಳುವಳಿಯ ಪ್ರಭಾವದಿಂದ ಡಬ್ಬಿಂಗ್ ವಿರೋಧಿ ಅಲೆ ತೀವ್ರವಾಗಿ, ಅಂತಹ ಡಬ್ಬಿಂಗ್ ಚಿತ್ರಗಳು ಸಂಪೂರ್ಣವಾಗಿ ನೆಲಕಚ್ಚುವುದರೊಂದಿಗೆ ಆ ಪದ್ಧತಿ ಹಾಗೆಯೇ ಕಮರಿಹೋಯಿತು.

ಈ ಸಂದರ್ಭದಲ್ಲಿ ನಡೆದ ಮತ್ತೊಂದು ಘಟನೆ ಕನ್ನಡಿಗರ ಕನ್ನಡತನದ ಪ್ರಜ್ಞೆಗೆ ಸವಾಲಾಗಿದ್ದನ್ನು ನೆನಪಿಸಿಕೊಳ್ಳಬಹುದು. ಅದೆಂದರೆ ಕಾಂಚಿತ್ತಲೈವಾನ್ ಎಂಬ ತಮಿಳು ಚಿತ್ರ ಪ್ರದರ್ಶನ. ಆ ಚಿತ್ರದಲ್ಲಿ ಕನ್ನಡಿಗರಿಗೆ, ಕನ್ನಡ ಇತಿಹಾಸಕ್ಕೆ ಅವಮಾನ ಉಂಟಾಗುವ ಕೆಲವು ಘಟನೆಗಳನ್ನು ಚಿತ್ರಿಸಿದ್ದು, ಅವು ಕನ್ನಡಿಗರನ್ನು ಕೆರಳಿಸಿತ್ತು. ಅದರ ವಿರುದ್ಧ ಪ್ರತಿಭಟಿಸಿದ ಕನ್ನಡ ಸಂಯುಕ್ತ ರಂಗದ ಹೋರಾಟದಿಂದ ಆ ಚಿತ್ರದ ಪ್ರದರ್ಶನ ಸ್ಥಗಿತಗೊಂಡಿದ್ದೇ ಅಲ್ಲದೆ, ಮುಂದೆ ಅಂತಹ ಘಟನೆಗಳು ನಡೆಯದಂತಾಯಿತು.

ಹೀಗೆ ಅರವತ್ತರ ದಶಕದಲ್ಲಿ ಅಂತಃಸ್ಥವಾಗಿದ್ದ ಕನ್ನಡ ಪ್ರಜ್ಞೆ ಹೊರಹೊಮ್ಮಲು ಅ.ನ.ಕೃ ಅವರು ನೀಡಿದ ಕಾಣಿಕೆ; ಅವರ ನಾಯಕತ್ವದ ಹೋರಾಟದ ಆರಂಭ ಅಪಾರವಾದುದು. ಅವರು ಅಂದು ಹೊತ್ತಿಸಿದ ಕನ್ನಡಪ್ರಜ್ಞೆಯ ಕಿಡಿ ಇಂದು ನಾನಾ ರೂಪದಲ್ಲಿ ಪ್ರಜ್ವಲಿಸುತ್ತಿದೆ. ಯಾವುದೇ ಕ್ಷೇತ್ರದಲ್ಲಿ ಕನ್ನಡ ಭಾಷೆಗೆ, ಕನ್ನಡಿಗರಿಗೆ ಅನ್ಯಾಯವಾದರೆ, ಅವಮಾನವಾದರೆ ಅದನ್ನು ಪ್ರತಿಭಟಿಸುವ ಶಕ್ತಿ, ಸ್ಥೈರ್ಯ ಬಂದಿರುವುದು ನಾಲ್ಕು ದಶಕಗಳ ಹಿಂದೆ ಆರಂಭವಾದ ಹೋರಾಟದಿಂದ.

ಹಾಗಿದ್ದರೆ, ಈ ಹೋರಾಟದಿಂದ ಕನ್ನಡದ ಸಮಸ್ಯೆಗಳು ಪರಿಹಾರವಾಗಿವೆಯೇ ಎಂದರೆ, ಬಹುಮಟ್ಟಿಗೆ ಇಲ್ಲ ಎಂದೇ ಹೇಳಬೇಕಾಗುತ್ತದೆ. ಅಂದು ಯಾವ ಸಮಸ್ಯೆಗಳ

ಪರಿಹಾರಕ್ಕಾಗಿ ಹೋರಾಟ ಆರಂಭವಾಯಿತೋ ಆ ಸಮಸ್ಯೆಗಳಲ್ಲಿ ಬಹುಪಾಲು ಇನ್ನು ಪರಿಹಾರವಾಗಿಯೇ ಇಲ್ಲ ಎಂದು ಹೇಳಬಹುದು. ಗಡಿ ಸಮಸ್ಯೆ, ಕನ್ನಡಿಗರಿಗೆ ಉದ್ಯೋಗ, ಮುಂತಾದ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಪರಿಸ್ಥಿತಿ ಇಂದಿಗೂ ತಪ್ಪಿಲ್ಲ. ಆದರೂ ಸಹ ಅನ್ಯಾಯವಾದಾಗಲೆಲ್ಲ ಅದನ್ನು ಪ್ರತಿಭಟಿಸುವ ಪ್ರಜ್ಞೆ, ಸಾಮರ್ಥ್ಯವನ್ನು ಪಡೆದಿರುವ ಕನ್ನಡಿಗರು ಕೆಲವೊಂದು ಹೋರಾಟಗಳಲ್ಲಿ ಫಲ ದಕ್ಕಿಸಿಕೊಂಡಿರುವುದಂತೂ ಸತ್ಯ. ಹಾಗೂ ಹೇಳಬೇಕೆಂದರೆ, ಅಂದಿನ ಹೋರಾಟ ಆರಂಭವಾಗದಿದ್ದಲ್ಲಿ ಈಗಿರುವಷ್ಟಾದರೂ ಕನ್ನಡದ ವಾತಾವರಣ ಬೆಂಗಳೂರಿನಲ್ಲಿ ಖಂಡಿತವಾಗಿ ಇರುತ್ತಿರಲಿಲ್ಲವೆಂಬುದನ್ನು ಎಲ್ಲರೂ ಒಪ್ಪಲೇಬೇಕಾಗುತ್ತದೆ.

ಅ.ನ.ಕೃ ಅವರು ಹೇಳುತ್ತಿದ್ದ ಒಂದು ಮಾತು ಕನ್ನಡಿಗರಿಗೆ ದಾರಿದೀಪವಾಗಬೇಕು. ಅದೆಂದರೆ 'ನನ್ನಂಥವರು ಕನ್ನಡಕ್ಕೆ ಅನೇಕರಿದ್ದಾರೆ. ಆದರೆ ನನಗಿರುವುದು ಒಂದೇ ಕನ್ನಡ'.

ಪ್ರತಿಯೊಬ್ಬ ಕನ್ನಡಿಗನೂ ಇದೇ ನಿಲುವನ್ನು ಹೊಂದಿದರೆ, ಕನ್ನಡದ ಉಜ್ವಲ ಭವಿಷ್ಯಕ್ಕೆ ಯಾವ ಸಂದೇಹವೂ ಇಲ್ಲ.

ಅ.ನ.ಕೃ ಹಾಗೂ ಕನ್ನಡ ಚಲನಚಿತ್ರರಂಗ

ಕನ್ನಡದ ಉದ್ದಾಮ ಸಾಹಿತಿಯಾದ, ಕಾದಂಬರಿ ಸಾರ್ವಭೌಮರೆನಿಸಿ, ಕನ್ನಡ ಚಳುವಳಿಯ ನಾಯಕರಾಗಿ ಕನ್ನಡ ಚಿತ್ರರಂಗ ನೆಲೆಯೂರಲು ಕಾರಣರೆನಿಸಿದ ಅ.ನ.ಕೃ ಅವರಿಗೆ ಚಿತ್ರರಂಗದ ಸಂಬಂಧ ಮೊದಲಿನಿಂದಲೂ ಇತ್ತು. 1940ರ ದಶಕದಲ್ಲಿ ಪ್ರಕಟವಾಗುತ್ತಿದ್ದ "ರಂಗಭೂಮಿ" ಎಂಬ ಪತ್ರಿಕೆಯಲ್ಲಿ ಚಲನಚಿತ್ರಕ್ಕೆ ಸಂಬಂಧಿಸಿದ ಒಂದು ಅಂಕಣಮಾಲೆಯನ್ನು ಅ.ನ.ಕೃ ಅವರು ಬರೆಯುತ್ತಿದ್ದರು.

1942ರಲ್ಲಿ ತಯಾರಾದ 'ಜೀವನ ನಾಟಕ' ಚಿತ್ರದ ಕತೆ, ಚಿತ್ರಕತೆ, ಸಂಭಾಷಣೆಯನ್ನು ಅವರು ಬರೆದಿದ್ದರು. ಈ ಚಿತ್ರವು ಕನ್ನಡದಲ್ಲಿ ತಯಾರಾದ ಹತ್ತನೆಯ ಚಿತ್ರವಾಗಿತ್ತು. ಇದನ್ನು ನಿರ್ಮಿಸಿದವರು ರಂಗಭೂಮಿ ಹಾಗೂ ಚಲನಚಿತ್ರರಂಗದಲ್ಲಿ ಹೆಸರು ಮಾಡಿದ್ದ ಗುಬ್ಬಿ ವೀರಣ್ಣನವರು. ಈ ಚಿತ್ರದಲ್ಲಿ ಬಿ. ಜಯಮ್ಮ, ಶಾಂತಾ ಹುಬ್ಳೀಕರ್, ಕೆಂಪರಾಜ ಅರಸ್ ಮುಂತಾದವರು ಪಾತ್ರ ವಹಿಸಿದ್ದರು. ಈ ಚಿತ್ರದಲ್ಲಿ ರಾಜಕುಮಾರ್ ಅವರ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರೂ ನಟಿಸಿದ್ದರು.


ಇದಾದ 13 ವರ್ಷಗಳ ನಂತರ ಮೈಸೂರಿನಲ್ಲಿ ತಯಾರಾದ 'ಸ್ತ್ರೀ ರತ್ನ' ಕನ್ನಡ ಚಿತ್ರಕ್ಕೆ ಸಂಭಾಷಣೆ ಬರೆಯಲು ಒಪ್ಪಿಕೊಂಡಿದ್ದರು. ಆದರೆ ಚಿತ್ರದ ಅರ್ಧ



'ಸ್ತ್ರೀರತ್ನ' ಧ್ವನಿಮುದ್ರಣದಲ್ಲಿ ವಿತರಕ ಸಂಪತ್ ಮತ್ತು ಗೀತೆ ರಚನೆಕಾರ ಕಣಗಾಲ್ ಪ್ರಭಾಕರಶಾಸ್ತ್ರಿಗಳೊಂದಿಗೆ ಅ.ನ.ಕೃ.

ಭಾಗ ನಿರ್ಮಾಣವಾಗಿದ್ದಾಗ ಅವರಿಗೂ ನಿರ್ಮಾಪಕರಿಗೂ ಭಿನ್ನಾಭಿಪ್ರಾಯವುಂಟಾಗಿ ಅ.ನ.ಕೃ ಅವರು ಚಿತ್ರ ನಿರ್ಮಾಣ ತಂಡದಿಂದ ಹೊರಬಂದರು.

1961ರಲ್ಲಿ ಅವರ ಸಾಹಿತ್ಯ ರಚನೆಯಲ್ಲೇ ಮೇರುಕೃತಿ ಎನಿಸಿರುವ 'ಸಂಧ್ಯಾರಾಗ' ಕಾದಂಬರಿ ಅದೇ ಹೆಸರಿನಲ್ಲಿ ಚಿತ್ರವಾಗಿ ರೂಪುಗೊಂಡಿತು. ಓದುಗರಲ್ಲಿ ಕಾದಂಬರಿ ಎಷ್ಟು ಜನಪ್ರಿಯವಾಗಿತ್ತೋ ಅದೇ ರೀತಿ 'ಸಂಧ್ಯಾರಾಗ' ಚಲನಚಿತ್ರವೂ ಸಹ ಚಿತ್ರ ಪ್ರೇಕ್ಷಕರಲ್ಲಿ ಅಷ್ಟೇ ಜನಮೆಚ್ಚುಗೆಯನ್ನು ಪಡೆಯಿತು. ಆ ವರ್ಷದ ರಾಷ್ಟ್ರ ಪ್ರಶಸ್ತಿಯನ್ನು ಸಹ ಪಡೆಯಿತು.



ವೀರಸೇನಾನಿ ಮ. ರಾಮಮೂರ್ತಿ

ನಾಲ್ಕು ದಶಕಗಳ ಹಿಂದಿನ ಮಾತು. ಅದಾಗ ತಾನೇ ಕರ್ನಾಟಕ ಏಕೀಕರಣವಾಗಿದ್ದರೂ, ರಾಜ್ಯದ ಹೆಸರು ಕರ್ನಾಟಕವಾಗಿರಲಿಲ್ಲ. ಕನ್ನಡಕ್ಕೆ ಮಾನ್ಯತೆ ದಕ್ಕಿರಲಿಲ್ಲ. ಕನ್ನಡಿಗರಿಗೆ ಉದ್ಯೋಗದ ಅವಕಾಶವಿರಲಿಲ್ಲ. ಅದರಲ್ಲಿಯೂ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ–ಕನ್ನಡಿಗ ಅನಾಥಪ್ರಜ್ಞೆಯಿಂದ ಕಂಗೆಡುವಂತಾಗಿತ್ತು.

ಅಂತಹ ಸಮಯದಲ್ಲಿಯೇ ಕನ್ನಡಿಗರ ಮನದಲ್ಲಿ ಹೊಯ್ದಾಡುತ್ತಿದ್ದ ನೋವಿಗೆ ಪರಿಹಾರ ರೂಪದಲ್ಲಿ ಅನೇಕ ಕನ್ನಡ ಯುವಕರು ಒಗ್ಗೂಡಿ ಕನ್ನಡದ ಉಳಿವಿಗಾಗಿ ಚಳುವಳಿಯ ಮಾರ್ಗವನ್ನು ಹಿಡಿಯಬೇಕಾಯಿತು. ಬೆಂಗಳೂರೇ ಅಲ್ಲದೆ, ರಾಜ್ಯದ ನಾನಾ ಭಾಗಗಳಲ್ಲಿ ಅನೇಕ ಕನ್ನಡ ಸಂಘಟನೆಗಳು ಹುಟ್ಟಿಕೊಂಡವು. ಅವೆಲ್ಲವಕ್ಕೂ ಕಲಶಪ್ರಾಯವಾಗಿ ಜನ್ಮತಾಳಿದ್ದು "ಕನ್ನಡ ಸಂಯುಕ್ತ ರಂಗ". ಈ ಸಂಘಟನೆಯ ಮುಖ್ಯ ರೂವಾರಿಗಳು ಅ.ನ.ಕೃ ಮತ್ತು ಮ. ರಾಮಮೂರ್ತಿ. ಈ ನಾಯಕರ ಜೊತೆಜೊತೆಯಲ್ಲಿ ಅನೇಕ ಸಾಹಿತಿಗಳ, ಕನ್ನಡಾಭಿಮಾನಿಗಳ ದಂಡು ಸ್ವಯಂ ಸ್ಫೂರ್ತಿಯಿಂದ ಹೋರಾಟದಲ್ಲಿ ಭಾಗವಹಿಸಿತು.

"ಪತ್ತೇದಾರಿ ರಾಮಮೂರ್ತಿ" ಎಂದೇ ಅಲ್ಲಿಯವರೆಗೆ ಕನ್ನಡದ ಜನತೆಗೆ ಪರಿಚಿತವಾಗಿದ್ದ ಎಂ. ರಾಮಮೂರ್ತಿ ಕನ್ನಡ ಚಳುವಳಿಯ ನಾಯಕತ್ವವನ್ನು ವಹಿಸಿ 'ಮ. ರಾಮಮೂರ್ತಿ'ಗಳಾದರು. ಅಭಿಮಾನಿ ಕನ್ನಡ ಯುವಕರಿಗೆ 'ವೀರಸೇನಾನಿ ರಾಮಮೂರ್ತಿ'ಯಾದರು.

ಬಾಲ್ಯದಿಂದಲೂ ಧೈರ್ಯ, ಸಾಹಸಗಳಿಗೆ ಹೆಸರುವಾಸಿಯಾಗಿದ್ದ ರಾಮಮೂರ್ತಿಯವರ ಬದುಕು ಸದಾ ಹೋರಾಟದ್ದು – ತಾತ್ವಿಕ ದೃಷ್ಟಿಯಿಂದ ಕೂಡಿದ್ದು. ತನಗೆ ಸರಿ ಎನಿಸಿದ್ದನ್ನು ನಿಷ್ಠುರವಾಗಿ ಖಂಡ ತುಂಡವಾಗಿ ಹೇಳುವ ದಿಟ್ಟತನ, ಮನೋಭಾವ ಅವರದಾಗಿತ್ತು.

ಪತ್ರಿಕೋದ್ಯಮದಿಂದ ಜೀವನ ಆರಂಭಿಸಿದ ರಾಮಮೂರ್ತಿಗಳು ಹಲವಾರು ಪತ್ರಿಕೆಗಳನ್ನು ನಡೆಸಿದರು. ಒಂದು ಸಂದರ್ಭದಲ್ಲಿ ಅವರು ನಡೆಸುತ್ತಿದ್ದ 'ಕಾಮಕಲಾ' ಎಂಬ ಪತ್ರಿಕೆಯನ್ನು ಅಶ್ಲೀಲ ಸಾಹಿತ್ಯದ ಗುಂಪಿಗೆ ಸೇರಿಸಿದ ಸರ್ಕಾರ ಅದನ್ನು ನಡೆಸಬಾರದೆಂದು ಕಟ್ಟಪ್ಪಣೆ ವಿಧಿಸಿತು. ಆದರೆ ರಾಮಮೂರ್ತಿಯವರ ನಿಲುವು ವಿಭಿನ್ನವಾಗಿತ್ತು. 'ಕಾಮಕಲಾ' ಅಶ್ಲೀಲ ಗುಂಪಿಗೆ ಸೇರಿದ್ದಲ್ಲ, ಅದು ವಿಜ್ಞಾನ ಎಂದು ಸರ್ಕಾರದ ತೀರ್ಮಾನಕ್ಕೆ ಸೆಡ್ಡು ಹೊಡೆದು ನಿಂತರು. ಹೈಕೋರ್ಟಿನಲ್ಲಿ ವಾದಿಸಿದರು, ತೀರ್ಪು ತಮ್ಮ ಪರವಾಗುವಂತೆ ಹೋರಾಡಿದರು. ಇದು ಅವರ ದಿಟ್ಟತನದ ಹೋರಾಟಕ್ಕೆ ಒಂದು ಉದಾಹರಣೆ.

ಪತ್ರಿಕೋದ್ಯಮದ ನಂತರ ರಾಮಮೂರ್ತಿಗಳು ಹೊರಳಿದ್ದು ಪತ್ತೇದಾರಿ ಸಾಹಿತ್ಯ ರಚನೆಗೆ. ಆ ಕ್ಷೇತ್ರದಲ್ಲಿ ಸಿದ್ಧಹಸ್ತರೆನಿಸಿದ ಅವರು ರಚಿಸಿದ್ದು ಸುಮಾರು 150 ಕಾದಂಬರಿಗಳನ್ನು. ತಾವೇ ಬರೆದು, ತಾವೇ ಪ್ರಕಟಿಸುತ್ತಿದ್ದ ಕಾದಂಬರಿಗಳು ಸಾಮಾನ್ಯ ಜನರನ್ನು ತಲುಪಬೇಕೆಂಬ ಉದ್ದೇಶದಿಂದ ಪುಸ್ತಕಗಳಿಗೆ ಕಡಿಮೆ ಬೆಲೆ ಇಡುತ್ತಿದ್ದರು. ಸುಮಾರು 120–130 ಪುಟಗಳ ಪುಸ್ತಕಕ್ಕೆ ಅವರು ನಿಗದಿಪಡಿಸುತ್ತಿದ್ದುದು 9 ಆಣೆ ಅಂದರೆ ಈಗಿನ 56 ಪೈಸೆಗಳು. ಹೀಗಾಗಿ ಅವರ ಪುಸ್ತಕಗಳು ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುತ್ತಿತ್ತು.

ತಮ್ಮ ಪುಸ್ತಕಗಳ ರಕ್ಷಾಪುಟದಲ್ಲಿ 'ರಾಮಮೂರ್ತಿಯ ಪುಸ್ತಕಗಳು ನಿಮ್ಮನ್ನೆಂದೂ ವಂಚಿಸುವುದಿಲ್ಲ' ಎಂಬ ಭರವಸೆಯನ್ನು ವಿಶಿಷ್ಟವಾಗಿ ಮುದ್ರಿಸುತ್ತಿದ್ದರು. ಅಲ್ಲದೆ ಸದಾ ಚುಟ್ಟಾಧಾರಿಯಾಗಿದ್ದ ಅವರು ಪುಸ್ತಕದ ಮೇಲೆ ಮುದ್ರಿಸುತ್ತಿದ್ದ ಲಾಂಛನ ಆ್ಯಷ್ ಟ್ರೇಯ ಮೇಲೆ ಉರಿಯುತ್ತಿದ್ದ ಸಿಗಾರು.

ಪತ್ರಕರ್ತರಾಗಿ, ಪತ್ತೇದಾರಿ ಕಾದಂಬರಿಕಾರರಾಗಿ ರಾಮಮೂರ್ತಿಯವರು ಮುಂದುವರೆದಿದ್ದರೆ, ಬಹುಶಃ ಅವರ ಕಾರ್ಯಕ್ಷೇತ್ರ–ಜನಪ್ರಿಯತೆ ಅಷ್ಟಕ್ಕೇ ಸೀಮಿತವಾಗಿರುತ್ತಿತ್ತೇನೋ! ಆದರೆ ಅವರು ಕನ್ನಡ ಚಳುವಳಿಗೆ ಧುಮುಕಿ, ಯುವಕರಿಗೆ, ಮಾರ್ಗದರ್ಶಕರಾಗಿ ಸಮರ್ಥ ನಾಯಕತ್ವ ವಹಿಸಿದ್ದು ಚಳುವಳಿಗೆ ಲಾಭವಾಯಿತು. ಅವರ ಬಾಳ ಪಥ ಬದಲಾಯಿತು.

27.4.1962. ಬೆಂಗಳೂರಿನ ರಾಮಸೇವಾ ಮಂಡಲಿಯ ಮುಂದೆ, ಕನ್ನಡ ನಾಡಿನಲ್ಲಿ ಕನ್ನಡ ಕಲಾವಿದರಿಗೆ, ಸಂಗೀತ ವಿದ್ವಾಂಸರಿಗೆ ಸೂಕ್ತ ಪ್ರಾತಿನಿಧ್ಯ ಕೊಡಬೇಕೆಂಬ ಹೋರಾಟದಿಂದ ಆರಂಭವಾದ ಚಳುವಳಿ ರಾಜ್ಯದಾದ್ಯಂತ ಹಬ್ಬಿತು. ಕನ್ನಡಿಗರಲ್ಲಿ ಹೋರಾಟದ ಕಿಚ್ಚು ಹಚ್ಚಲು ಕಾರಣವಾಯಿತು. ನಂತರದಲ್ಲಿ ಅನೇಕ ಕನ್ನಡಪರ ಹೋರಾಟಗಳು ನಡೆದು ಕನ್ನಡಿಗರ ಅನೇಕ ಸಮಸ್ಯೆಗಳತ್ತ ಚಿಂತನೆ ನಡೆಸುವಂತಾಯಿತು. ಜಡತೆಯಿಂದ ಮಲಗಿದ್ದ ಕನ್ನಡಿಗ ಎಚ್ಚೆತ್ತು ಜಾಗೃತನಾಗುವಂತಾಯಿತು.

ಕನ್ನಡ ನಾಮಫಲಕಗಳಿಗೆ ಒತ್ತಾಯ, ಕನ್ನಡಿಗರಿಗೆ ಉದ್ಯೋಗ, ಕನ್ನಡ ಚಿತ್ರ ಪ್ರದರ್ಶನಗಳಿಗೆ ಅವಕಾಶ, ಡಬ್ಬಿಂಗ್ ಚಿತ್ರಗಳಿಗೆ ವಿರೋಧ, ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರಿಡಲು ಆಗ್ರಹ –ಹೀಗೆ ಒಂದಲ್ಲ ಹತ್ತಾರು ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆಯಲು ಚಳುವಳಿ ನಾಂದಿಯಾಯಿತು. ಅಂದಿನ ಆ ಬೇಡಿಕೆಗಳಲ್ಲಿ ಕೆಲವಾದರೂ ಇಂದು ಈಡೇರಿದ್ದರೆ, ಆ ಯಶಸ್ಸು ಅಂದಿನ ಕನ್ನಡದ ಹೋರಾಟದ ಫಲವೆನ್ನಬಹುದು.

ರಾಮಮೂರ್ತಿಯವರ ಮುಂದಾಳತ್ವದ ಒಂದು ವಿಶೇಷತೆ ಎಂದರೆ, ಸಮಸ್ಯೆ ಎಂತಹುದೇ ಇರಲಿ, ಅದಕ್ಕೆ ಧೈರ್ಯವಾಗಿ ಎದೆಯೊಡ್ಡಿ ನಿಲ್ಲುತ್ತಿದ್ದುದು. ಬೆಂಗಳೂರಿನ ಮೈಕೋ ಕಾರ್ಖಾನೆಯಲ್ಲಿ ಕನ್ನಡಿಗರಿಗೆ ಆಗುತ್ತಿದ್ದ ಅನ್ಯಾಯದ ವಿರುದ್ಧ ಹೋರಾಟ, ಅಚ್ಚ ಕನ್ನಡ ಪ್ರದೇಶ ಹಿರಿಯೂರಿನಲ್ಲಿ ವಲಸೆ ಬಂದ ತಮಿಳರು ಊರಿನ ಮಧ್ಯೆ ಡಿ.ಎಂ.ಕೆ. ಧ್ವಜವನ್ನು ಹಾರಿಸಿ ಕನ್ನಡಿಗರಿಗೇ ಸವಾಲೆಸೆದ ಸಂದರ್ಭದಲ್ಲಿ ಧೈರ್ಯವಾಗಿ ಅಲ್ಲಿಗೆ ನುಗ್ಗಿ ಆ ಧ್ವಜವನ್ನು ಇಳಿಸಿದ್ದು –ಇವೇ ಮುಂತಾದ ಹಲವು ಸಂದರ್ಭಗಳಲ್ಲಿ ಅವರು ಪ್ರದರ್ಶಿಸಿದ ಕೆಚ್ಚು, ರೊಚ್ಚು, ಅವರ ಸಮರ್ಥ ನಾಯಕತ್ವದ ಲಕ್ಷಣವನ್ನು ಎತ್ತಿ ತೋರಿಸುವಂತಹುದು. ಈ ಕಾರಣದಿಂದ ರಾಮಮೂರ್ತಿಗಳು ಕನ್ನಡ ಯುವಕರ ಆರಾಧ್ಯ ನಾಯಕರಾಗಿದ್ದರು.

ಚಳುವಳಿಯ ಧ್ಯೇಯೋದ್ದೇಶಗಳನ್ನು ಸಮರ್ಥವಾಗಿ ನಾಡಿನ ಜನತೆಗೆ ತಿಳಿಸಲು ಸೂಕ್ತವಾದ ಮಾಧ್ಯಮದ ಅವಶ್ಯಕತೆಯಿತ್ತು. ಅದನ್ನು ಮನಗಂಡ ಅವರು ಚಳುವಳಿಯ

ಪ್ರಚಾರಕ್ಕಾಗಿಯೇ 'ಕನ್ನಡ ಯುವಜನ' ಪತ್ರಿಕೆಯನ್ನು ಆರಂಭಿಸಿದರು. ಪ್ರತಿ ಸಂಚಿಕೆಯಲ್ಲಿಯೂ ತಮ್ಮ ಹರಿತವಾದ ಲೇಖನಗಳಿಂದ ಚಳುವಳಿಯನ್ನು ಜೀವಂತವಾಗಿರಿಸಿದ್ದರು. ಸಂಪಾದಕ, ಮುದ್ರಕ, ಪ್ರಕಾಶಕರೂ ಆಗಿದ್ದ ಅವರು ತಾವೇ ಮುದ್ರಿಸಿ ಅದನ್ನು ಬಂಡಲ್ ಕಟ್ಟಿ ಜಟಕಾ ಬಂಡಿಯಲ್ಲಿ ಹೋಗಿ ಅಂಗಡಿ ಅಂಗಡಿಗಳಿಗೆ ತಲುಪಿಸುತ್ತಿದ್ದರು.

'ಯುವಜನ'ದ ಪ್ರತಿ ಸಂಚಿಕೆಯಲ್ಲಿಯೂ–

* **ಕನ್ನಡ ಪುಸ್ತಕಗಳನ್ನು, ಪತ್ರಿಕೆಗಳನ್ನು ಕೊಂಡು ಓದಿ**
* **ಕನ್ನಡದಲ್ಲಿಯೇ ವ್ಯವಹರಿಸಿ**
* **ಕನ್ನಡ ಸಂಘ–ಸಂಸ್ಥೆಗಳ ಸದಸ್ಯರಾಗಿ**
* **ಕನ್ನಡ ನಾಟಕಗಳನ್ನೇ ನೋಡಿ**
* **ಕನ್ನಡ ಸಂಗೀತಗಾರರನ್ನು ಪ್ರೋತ್ಸಾಹಿಸಿ**

–ಎಂದು ನಿರಂತರವಾಗಿ ಬರೆಯುತ್ತಿದ್ದರು.

"ಕನ್ನಡಿಗರಿಗೆ ಕನ್ನಡವೇ ದೇವರು, ಶರಣಾಗಲು ಬೇರೆ ದೇವರೇ ಇಲ್ಲ" ಎಂಬ ಘೋಷವಾಕ್ಯವನ್ನು ಪತ್ರಿಕೆಯ ಪ್ರತಿ ಸಂಚಿಕೆಯಲ್ಲಿಯೂ ಪ್ರಮುಖವಾಗಿ ಪ್ರಕಟಿಸುತ್ತಿದ್ದರು.

ಸಂಯುಕ್ತ ರಂಗವು ಏರ್ಪಡಿಸುತ್ತಿದ್ದ ಎಲ್ಲ ಭಾಷಣಗಳಲ್ಲಿಯೂ ಮೊದಲಿಗೆ ರಾಮಮೂರ್ತಿಗಳದೇ ಭಾಷಣ. ವೀರಾವೇಶದಿಂದ ಕನ್ನಡದ ಸಮಸ್ಯೆಗಳನ್ನು ಪದರ ಪದರವಾಗಿ ಅವರು ಬಿಡಿಸಿ ಮಾತನಾಡುತ್ತಿದ್ದರೆ ಸಭೆ ತನ್ಮಯವಾಗಿ ಅವರ ಭಾಷಣವನ್ನು ಆಲಿಸುತ್ತಿತ್ತು.

ಇಂದು ವೈಭವೋಪೇತವಾಗಿ ರಾಜ್ಯದಾದ್ಯಂತ ಆಚರಿಸುತ್ತಿರುವ ರಾಜ್ಯೋತ್ಸವ ಸಮಾರಂಭಕ್ಕೆ ನಾಂದಿ ಹಾಡಿದ್ದೇ ಸಂಯುಕ್ತ ರಂಗದಿಂದ. 1963ರ 1ನೇ ನವೆಂಬರ್‌ನಂದು ಆರಂಭವಾದ ರಾಜ್ಯೋತ್ಸವ ಮೆರವಣಿಗೆ ನಾಡಹಬ್ಬ ದಸರಾವನ್ನು ನೆನಪಿಗೆ ತರುವಂತಿತ್ತು. ಮೆರವಣಿಗೆಯ ಉದ್ದಗಲಕ್ಕೂ ರಾಮಮೂರ್ತಿಯವರು ಓಡಾಡಿಕೊಂಡು ಶಿಸ್ತಿನ ರೀತಿಯಲ್ಲಿ ಮೆರವಣಿಗೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದುದು ಈಗಲೂ ಕಣ್ಣಿಗೆ ಕಟ್ಟಿದಂತಿದೆ.

1964ರಲ್ಲಿ ತಮಿಳು ಚಿತ್ರ ಕಾಂಚೀತ್ತಲೈವಾನ್ ಪ್ರದರ್ಶನಗೊಂಡಾಗ ಅದರಲ್ಲಿ ಕನ್ನಡದ ಇತಿಹಾಸಕ್ಕೆ, ಕನ್ನಡಿಗರಿಗೆ ಅವಮಾನ ಉಂಟಾಗುವ ಕೆಲವು ಘಟನೆಗಳನ್ನು ಚಿತ್ರಿಸಿದ್ದು ಕನ್ನಡಿಗರನ್ನು ಕೆರಳಿಸಿತು. ಇದನ್ನು ಉಗ್ರವಾಗಿ ಪ್ರತಿಭಟಿಸಿದ ಕನ್ನಡ ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿ ಚಿತ್ರ ಪ್ರದರ್ಶನಕ್ಕೆ ತಡೆ ನೀಡುವಂತೆ ಆಗ್ರಹಿಸಿದರು.

ಕನ್ನಡಿಗರ ವಿರೋಧವನ್ನು ಗಮನಿಸಿದ ಚಿತ್ರ ನಿರ್ಮಾಪಕರು ಆಕ್ಷೇಪಾರ್ಹ ಭಾಗಗಳನ್ನು ತೆಗೆದು ಹಾಕಿ ಮತ್ತೆ ಆ ಚಿತ್ರವನ್ನು ಬಿಡುಗಡೆಗೊಳಿಸುವ ಮುನ್ನ ಕನ್ನಡ ಇತಿಹಾಸಜ್ಞರು ಚಳುವಳಿ ನಾಯಕರು ಮುಂತಾದವರಿಗಾಗಿ ವಿಶೇಷ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು.

ಚಿತ್ರ ವೀಕ್ಷಿಸಿದ ಹಲವು ಕನ್ನಡ ಕಾರ್ಯಕರ್ತರು ಚಿತ್ರದಲ್ಲಿ ಆಕ್ಷೇಪಾರ್ಹ ಭಾಗಗಳನ್ನು ಪೂರ್ತಿ ತೆಗೆದುಹಾಕಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಉದ್ರೇಕಗೊಂಡ ಹಲವರು ಬ್ಯಾನರ್‌ಗಳನ್ನು ಹರಿದು ತಮ್ಮ ವಿರೋಧ ವ್ಯಕ್ತಪಡಿಸಿದರು.

ಆ ಸಂದರ್ಭದಲ್ಲಿ ಈ ಘಟನೆಗಳಿಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ ಅ.ನ.ಕೃ ಅವರು ಚಳುವಳಿಯಿಂದ ದೂರ ಸರಿದರು. ಆದರೆ ಬಿಸಿರಕ್ತದ ಯುವಕರು ನಡೆಸಿದ ಈ ಘಟನೆಗಳಿಂದ ಬೇಸತ್ತರೂ ರಾಮಮೂರ್ತಿಯವರು ಯಾವುದೇ ಹೋರಾಟದಲ್ಲಿ ಇಂತಹ ಘಟನೆಗಳು ನಡೆಯುವುದು ಸಹಜ ಎಂದು ತಾವು ಚಳುವಳಿಯಲ್ಲಿ ಮುಂದುವರೆದರು. ಚಳುವಳಿಯನ್ನು ಮುಂದುವರೆಸುವ ಸಾಮರ್ಥ್ಯವನ್ನು ಹೊಂದಿದ್ದ ಅವರು ಉಳಿದ ನಾಯಕರೊಂದಿಗೆ ತಮ್ಮ ಕಾರ್ಯದಲ್ಲಿ ಮಗ್ನರಾದರು.

ಕನ್ನಡದ ಸಮಸ್ಯೆಗಳು ಎಲ್ಲೇ ಇದ್ದರೂ ತಕ್ಷಣವೇ ಧಾವಿಸುತ್ತಿದ್ದ ರಾಮಮೂರ್ತಿಯವರು ಯುವ ಚಳುವಳಿಗಾರರಲ್ಲಿ ಸ್ಫೂರ್ತಿಯನ್ನು ಆತ್ಮವಿಶ್ವಾಸವನ್ನು ತುಂಬುತ್ತಿದ್ದರು.


ಅಂತಹ ಕೆಚ್ಚೆದೆಯ ರಾಮಮೂರ್ತಿಗಳು ತನ್ನ ಜೀವನ ನಿರ್ವಹಣೆಗಾಗಿ ತಾವು ಕೊಂಡ ಭೂಮಿಯಲ್ಲಿಯೇ ತನ್ನ ಜೀವನದ ಅಂತ್ಯವನ್ನು ಕಾಣಬೇಕಾದ್ದು ಒಂದು ದುರಂತ ಘಟನೆಯಾದದ್ದು ವಿಧಿಯ ವೈಚಿತ್ರ್ಯವೇ ಸರಿ.

1967, ಡಿಸೆಂಬರ್ 25, ಕ್ರಿಸ್‌ಮಸ್ ದಿನ. ಬೆಂಗಳೂರಿನ ಸಮೀಪದ ತಲಘಟ್ಟಪುರದಲ್ಲಿದ್ದ ತೋಟದಲ್ಲಿ ನೀರಿನ ಆಸರೆಗಾಗಿ ತೋಡಿಸುತ್ತಿದ್ದ ಬಾವಿಯಲ್ಲಿ

ನೀರು ಬಂದಿದೆ ಎಂದು ತಿಳಿದ ಅವರು ತಮ್ಮ ಇಬ್ಬರು ಮಕ್ಕಳನ್ನು –ಹನ್ನೆರಡು ವರ್ಷದ ದಿನಕರ ಮತ್ತು ಒಂಬತ್ತು ವರ್ಷದ ಮಂಜುನಾಥ– ಕರೆದುಕೊಂಡು ಹೋದರು. ಬಾವಿಯ ಬಳಿ ಹೋಗಿ ನೀರು ಬರುತ್ತಿರುವುದನ್ನು ನೋಡುತ್ತಿದ್ದಾಗ ಅವರು ನಿಂತಿದ್ದ ಭೂಮಿಯ ಭಾಗ ಕುಸಿದು ಅವರ ವಂಶದ ಕುಡಿಗಳಾದ ಮಕ್ಕಳೂ ಸಹ ಭೂಸಮಾಧಿಯಾದರು.

ನಟ ಕಲ್ಯಾಣಕುಮಾರ್ ಅವರು ತಾವು ಅಭಿನಯಿಸಿದ ತಮ್ಮ ಚಿತ್ರಗಳ ಪ್ರದರ್ಶನವನ್ನು ಬೆಂಗಳೂರಿನ ಮೇನಕಾ ಚಿತ್ರಮಂದಿರದಲ್ಲಿ ಬೆಳಗಿನ ಪ್ರದರ್ಶನಗಳನ್ನಾಗಿ ಪ್ರದರ್ಶಿಸಿ ಸಂಗ್ರಹವಾದ ಹಣವನ್ನು ಶ್ರೀಮತಿ ಕಮಲಮ್ಮ ರಾಮಮೂರ್ತಿಯವರಿಗೆ ನೀಡಿ ತಮ್ಮ ಸೌಜನ್ಯವನ್ನು ಮತ್ತು ಚಿತ್ರರಂಗಕ್ಕೆ ರಾಮಮೂರ್ತಿಯವರು ನೀಡಿದ ಕೊಡುಗೆಯನ್ನು ಕೃತಜ್ಞತೆಯಿಂದ ಸ್ಮರಿಸಿದರು.

ಹುಟ್ಟಿನಿಂದ ಸಾವಿನವರೆಗೆ ನಾನಾ ಕ್ಷೇತ್ರಗಳಲ್ಲಿ ಸಾಧನೆಗೈದ ರಾಮಮೂರ್ತಿಯವರ ಬದುಕು ವರ್ಣರಂಜಿತವಾದುದು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು, ಪತ್ರಿಕಾ ಕ್ಷೇತ್ರದಲ್ಲಿ ದುಡಿದರು, ಪತ್ತೇದಾರಿ ಸಾಹಿತ್ಯ ರಚಿಸಿದರು. ಆದರೆ ಈ ಎಲ್ಲಾ ಕಾರ್ಯಗಳಿಗೂ ಕಳಶಪ್ರಾಯವಾದುದು ಅವರು ಕನ್ನಡ ಚಳುವಳಿಗೆ ಸಲ್ಲಿಸಿರುವ ಕಾಣಿಕೆ. ಕನ್ನಡ ಚಳುವಳಿಯ ಇತಿಹಾಸದಲ್ಲಿ ಅವರ ಹೆಸರು ಸದಾ ಅಮರ; ಸದಾ ಸ್ಮರಣೀಯ.



ನಾಡಿಗೇರ ಕೃಷ್ಣರಾವ್

ಕರ್ನಾಟಕ ಸಂಯುಕ್ತ ರಂಗವು 1962ರಲ್ಲಿ ನಾಡು–ನುಡಿಗಾಗಿ ಹೋರಾಟವನ್ನು ಆರಂಭಿಸಿದಾಗ ಅದರ ಮುಂಚೂಣಿಯಲ್ಲಿ ಹಲವಾರು ಸಾಹಿತಿಗಳು ಪ್ರತ್ಯಕ್ಷವಾಗಿ ಭಾಗವಹಿಸುತ್ತಿದ್ದರು. ತಮ್ಮ ವಿಚಾರ ಪ್ರಚೋದಕ ಭಾಷಣದಿಂದ ಕನ್ನಡಿಗರ ಅಭಿಮಾನವನ್ನು ಪ್ರಚೋದಿಸುತ್ತಿದ್ದರು.


ಅ.ನ.ಕೃ, ರಾಮಮೂರ್ತಿ, ವೀರಕೇಸರಿ ಸೀತಾರಾಮಶಾಸ್ತ್ರಿ, ತಿ.ತಾ. ಶರ್ಮ, ಬೀಚಿ ಮುಂತಾದವರೊಂದಿಗೆ ಖ್ಯಾತ ಹಾಸ್ಯ ಸಾಹಿತಿಗಳೂ ಆದ ಶ್ರೀ ನಾಡಿಗೇರ ಕೃಷ್ಣರಾಯರೂ ಸಹ ತಮ್ಮ ಹಾಸ್ಯಪೂರಿತ ಭಾಷಣದಿಂದ ಸಭಿಕರನ್ನು ನಗೆಗಡಲಿನಲ್ಲಿ ತೇಲಿಸುತ್ತಿದ್ದುದೇ ಅಲ್ಲದೆ, ಕನ್ನಡದ ಬಗ್ಗೆ ಒಲವನ್ನು ಮೂಡಿಸುವುದರಲ್ಲಿಯೂ ಸಹ ಸಫಲರಾಗುತ್ತಿದ್ದರು.

ಶ್ರೀ ನಾಡಿಗೇರ ಕೃಷ್ಣರಾಯರು ಬರಿಯ ಹಾಸ್ಯ ಸಾಹಿತಿಗಳಾಗಿ, ಪತ್ರಿಕೋದ್ಯಮಿ ಗಳಾಗಿಯೇ ಅಲ್ಲದೆ ಕನ್ನಡ ಚಿತ್ರರಂಗದ ಸಂಪರ್ಕವನ್ನು ಸಹ ಬೆಳೆಸಿಕೊಂಡಿದ್ದರು.

ಚಿತ್ರಸಾಹಿತ್ಯ–ಗೀತರಚನೆ ಮುಂತಾದ ಕಾರ್ಯಗಳಿಂದ ಕನ್ನಡ ಚಿತ್ರರಂಗದಲ್ಲಿ ವಿಶಿಷ್ಟವಾದ ಸ್ಥಾನವನ್ನು ಸಹ ಪಡೆದಿದ್ದರು.

'ನಟಶೇಖರ' ಚಿತ್ರಕ್ಕೆ ಶ್ರೀ ನಾಡಿಗೇರರು ಸಂಭಾಷಣೆಯನ್ನು ಹಾಗೂ ಹಾಡುಗಳನ್ನು ಸಹ ಬರೆದರು. ಈ ಚಿತ್ರ ಕಲ್ಯಾಣಕುಮಾರ್ ನಟಿಸಿದ ಮೊದಲ ಚಿತ್ರ. ಚೊಕ್ಕಣ್ಣ ಎಂಬ ಹೆಸರಿನ ಯುವಕನಿಗೆ ಕಲ್ಯಾಣಕುಮಾರ್ ಎಂಬ ನಾಮಕರಣ ಮಾಡಿದವರೇ ನಾಡಿಗೇರ ಅವರು. ಮುಂದೆ 1955ರಲ್ಲಿ ಭಕ್ತ ಮಲ್ಲಿಕಾರ್ಜುನ ಚಿತ್ರ ತಯಾರಾದಾಗ ನಾಡಿಗೇರ ಕೃಷ್ಣರಾಯರು ಗೀತೆಗಳನ್ನು ರಚಿಸಿಕೊಟ್ಟರು.

ಹೀಗೆ ಪತ್ರಿಕೋದ್ಯೋಗಿ, ಹಾಸ್ಯ ಸಾಹಿತಿಯಾಗಿ, ಕನ್ನಡ ಚಳುವಳಿಯ ನೇತಾರರೂ ಆಗಿದ್ದ ಶ್ರೀ ನಾಡಿಗೇರ ಕೃಷ್ಣರಾಯರು ಕನ್ನಡ ಚಿತ್ರ ಸಂಪರ್ಕದಲ್ಲಿಯೂ ಸ್ವಲ್ಪಮಟ್ಟಿಗೆ ಬಾಂಧವ್ಯವನ್ನಿಟ್ಟುಕೊಂಡಿದ್ದರು.



ವಾಟಾಳ್ ನಾಗರಾಜ್

ಅ.ನ.ಕೃ ಮತ್ತು ರಾಮಮೂರ್ತಿಗಳ ನಾಯಕತ್ವದ ಸಂಯುಕ್ತರಂಗದ ಕನ್ನಡ ಚಳುವಳಿಯು ರಭಸದಲ್ಲಿ ಮುನ್ನಡೆಯುತ್ತಿದ್ದಾಗಲೇ ವಾಟಾಳ್ ನಾಗರಾಜ್ ಅವರ ಪ್ರವೇಶವೂ ಆಯಿತು.

ಸಂಘಟನಾಚತುರರಾದ ಹಾಗೂ ತಮ್ಮ ಮಾತಿನ ಮೋಡಿಯಿಂದ ಜನಸಾಮಾನ್ಯರನ್ನು ಸಹ ಮರುಳು ಮಾಡುವ ಶಕ್ತಿಯಿದ್ದ ವಾಟಾಳರು ಪ್ರಾರಂಭದಲ್ಲಿ ಅ.ನ.ಕೃ ಮತ್ತು ರಾಮಮೂರ್ತಿಯವರೊಂದಿಗೆ ಸೇರಿಕೊಂಡು ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದರು. ನಂತರದಲ್ಲಿ ತಮ್ಮದೇ ಆದ ನಾಯಕತ್ವದಲ್ಲಿ ಗುಂಪು ಕಟ್ಟಿಕೊಂಡು ಜನಸಾಮಾನ್ಯರ ಸಂಘಟನೆ ಮಾಡತೊಡಗಿದರು.

ಬೆಂಗಳೂರು ನಗರದ ಕೇಂದ್ರ ಪ್ರದೇಶವಾದ ಚಿಕ್ಕಪೇಟೆ, ಚಾಮರಾಜಪೇಟೆ ಮುಂತಾದ ಜನನಿಬಿಡ ಪ್ರದೇಶಗಳಲ್ಲಿ ಓಣಿ ಓಣಿಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ಸುತ್ತಾಡಿ

ಜನಸಂಪರ್ಕವನ್ನು ಪಡೆದು ಜನರನ್ನು ಹುರಿದುಂಬಿಸಿದರು. ಹೋಟೆಲ್ ಕಾರ್ಮಿಕರು, ಆಟೋ ರಿಕ್ಷಾ ಚಾಲಕರು ಮುಂತಾದ ಸಮಾಜದ ಜನಸಾಮಾನ್ಯರನ್ನು, ಉತ್ಸಾಹಿ ತರುಣರನ್ನು ಹುರಿದುಂಬಿಸಿ ಸಂಘಟಿಸಿದರು. ಅ. ಸಂಜೀವಪ್ಪ, ಜಿ. ನಾರಾಯಣ ಕುಮಾರ್, ಸ.ಕೃ. ಸಂಪಂಗಿ, ಸೋಸಲೆ ಜವರಯ್ಯ ಮುಂತಾದವರು ಇವರ ಜೊತೆಗಿದ್ದರು.

ಕೇವಲ ಕನ್ನಡ ಚಳುವಳಿಗೇ ಇವರ ಹೋರಾಟ ಮೀಸಲಾಗದೆ, ಅಂದಿನ ದಿನಗಳಲ್ಲಿ ದನಕರುಗಳಿಗೆ ದುರ್ಲಭವಾಗಿದ್ದ ಪಶು ಆಹಾರ (ಬೂಸಾ)ಕ್ಕಾಗಿ ಹೋರಾಟ, ನೀರಿನ ಸಮಸ್ಯೆಗೆ ಹೋರಾಟ ಮುಂತಾದ ಜನಸಾಮಾನ್ಯರ ಸಮಸ್ಯೆಗಳನ್ನು ಸಹ ಮುಂದಿಟ್ಟುಕೊಂಡು ಚಳುವಳಿಯಲ್ಲಿ ತೊಡಗಿ ಚಿಕ್ಕಪೇಟೆ ಕ್ಷೇತ್ರದ ಜನಸಾಮಾನ್ಯರಿಗೆಲ್ಲ ಪರಿಚಿತರಾದರು.

ವಾಟಾಳರ ಹೋರಾಟದ ಪ್ರಥಮ ಹೆಜ್ಜೆ

ಅಲಂಕಾರ್ ಚಿತ್ರಮಂದಿರದ ಮುಂದೆ, ಕನ್ನಡ ಚಿತ್ರ ಪ್ರದರ್ಶನಕ್ಕಾಗಿ ಒತ್ತಾಯಿಸಲು ಸೆಪ್ಟೆಂಬರ್ 7, 1962ರಂದು ಚಳುವಳಿ ನಡೆಸಿದಾಗ, ಚಳುವಳಿ ನಿರತರಾಗಿದ್ದ ವಾಟಾಳ್ ನಾಗರಾಜ್ ಅವರನ್ನು ಪೊಲೀಸರು ಬೂಟುಗಾಲಿನಿಂದ ಒದ್ದು ತೀವ್ರವಾಗಿ ಥಳಿಸಿದರು. ಇದು ಅವರ ಹೋರಾಟದ ಪ್ರಥಮ ಹೆಜ್ಜೆ ಎನ್ನಬಹುದು.

ವಾಟಾಳ್ ನಾಗರಾಜರ ಕನ್ನಡಪರ ಹೋರಾಟಗಳ ಆರಂಭದಲ್ಲಿ ಬೆಂಗಳೂರಿನ ನಗರಸಭೆಯ ಮುಂದಿದ್ದ ಬ್ರಿಟಿಷರ ಸ್ಮಾರಕ ರಣಸ್ತಂಭವನ್ನು (ಸೆನೊಟಾಪ್) ತೆಗೆದುಹಾಕಬೇಕೆಂಬ ಹೋರಾಟ ನಡೆಸಿದ್ದು ಒಂದು ಪ್ರಮುಖ ಘಟ್ಟವೆಂದು ಹೇಳಬಹುದು.

1791ನೇ ವರ್ಷದಲ್ಲಿ ಬೆಂಗಳೂರಿನ ಕದನದಲ್ಲಿ ಮೈಸೂರಿನ ಸೈನ್ಯಕ್ಕೆ ಉಂಟಾದ ಪರಾಭವದ ಸಂಕೇತವಾಗಿ, ಚಾರಿತ್ರಿಕ ಸ್ಮಾರಕವಾಗಿ 40 ಅಡಿ ಉದ್ದದ ಆ ರಣಸ್ತಂಭ ನಗರದ ಮಧ್ಯಭಾಗದಲ್ಲಿ, ನಗರಸಭೆಯ ಮುಂದೆಯೇ ನಿಂತಿತ್ತು.

ಬ್ರಿಟಿಷ್ ಸ್ಮಾರಕಗಳನ್ನು ತೆಗೆದುಹಾಕಬೇಕೆಂಬ ಹೋರಾಟ ತೀವ್ರವಾಗಿದ್ದ ಆ ದಿನಗಳಲ್ಲಿ ವಾಟಾಳ್ ನಾಗರಾಜ್ ಈ ಸಮಸ್ಯೆಯನ್ನು ಕೈಗೆತ್ತಿಕೊಂಡು ದಿನಾಂಕ 20.9.1964ರ ಮಧ್ಯಾಹ್ನ ನೂರಾರು ಯುವಕರ ಸಮೇತ ಮೆರವಣಿಗೆಯಲ್ಲಿ ಹೊರಟರು. ಆದರೆ ಸ್ಮಾರಕಕ್ಕೆ ಸ್ವಲ್ಪ ದೂರದಲ್ಲಿಯೇ ಮೆರವಣಿಗೆಗಾರರನ್ನು ತಡೆದ

ಪೊಲೀಸರು ಲಾಠೀ ಪ್ರಹಾರ ಮಾಡಿ ಮೆರವಣಿಗೆಯಲ್ಲಿದ್ದ ವಾಟಾಳ್ ನಾಗರಾಜ್, ಅ. ಸಂಜೀವಪ್ಪ, ಸೋಸಲೆ ಜವರಯ್ಯ ಮುಂತಾದವರನ್ನು ಬಂಧಿಸಿದರು.


ಅದಾದ ಕೆಲವೇ ದಿನದಲ್ಲಿ ಅಂದರೆ 1.11.1964ರ ರಾಜ್ಯೋತ್ಸವ ದಿನದ ಪ್ರಜಾವಾಣಿಯ ಮುಖಪುಟದಲ್ಲಿ 'ಎದ್ದುನಿಂತ ಯಲಹಂಕ ಭೂಪಾಲ; ಬಿದ್ದು ಹೋದ ಬ್ರಿಟಿಷ್ ಸ್ಮಾರಕ' ಎಂಬ ಶೀರ್ಷಿಕೆಯ ಅಡಿಯಲ್ಲಿ ರಣಸ್ತಂಭ ಮಣ್ಣುಪಾಲಾದ ವಿಷಯ ಪ್ರಕಟವಾಯಿತು. ಅದಕ್ಕೆ ಕೊಟ್ಟ ಕಾರಣ ಹೀಗಿತ್ತು: ಅದೇ ದಿನ ಅಂದರೆ 1.11.1964ರಂದು ನಗರಸಭೆಯ ಮುಂದಿನ ಉದ್ಯಾನವನದಲ್ಲಿ ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ಪ್ರತಿಮೆಯನ್ನು ಆಗಿನ ಮದ್ರಾಸ್ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರು ಅನಾವರಣ ಮಾಡಿದ್ದು ಮತ್ತು ರಣಸ್ತಂಭವು ಪ್ರತಿಮೆಯ ನೇರ ನೋಟಕ್ಕೆ ಅಡ್ಡವಾಗಿತ್ತು ಎಂಬುದು. ಕಾರಣ ಏನೇ ಇರಲಿ, ಬ್ರಿಟಿಷ್ ಸ್ಮಾರಕ ನೆಲಕ್ಕುರುಳಿತು, ಕೆಂಪೇಗೌಡರ ಪ್ರತಿಮೆ ತಲೆ ಎತ್ತಿತು.

ಹೀಗೆ ಪ್ರಾರಂಭವಾದ ವಾಟಾಳ್‌ರ ಚಳುವಳಿ ಮುಂದೆ ತೀಕ್ಷ್ಣವಾಗಿ ಹಬ್ಬತೊಡಗಿತು.

ಅವರ ಚಳುವಳಿ ಹಿಂದಿನ ಚಳುವಳಿಗಳಿಗಿಂತ ಸ್ವಲ್ಪ ಭಿನ್ನ ರೂಪ ತಳೆಯಿತು. ಕನ್ನಡದ ಸಮಸ್ಯೆಗಳ ಜೊತೆಜೊತೆಗೆ ಜನರ ದೈನಂದಿನ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡತೊಡಗಿದರು. ಜನಸಾಮಾನ್ಯರ ದೃಷ್ಟಿಯಲ್ಲಿ ಅವರು 'ಹೀರೋ' ಎಂದೆನಿಸಿಕೊಂಡರು.

ರಸ್ತೆಗಳಲ್ಲಿ ಮಲಗಿ ವಾಹನ ಸಂಚಾರವನ್ನು ತಡೆಯುವುದು, ರೈಲು ಕಂಬಿಗಳ ಮೇಲೆ ಮಲಗಿ ರೈಲು ತಡೆಯುವುದು, ಪಂಜಿನ ಮೆರವಣಿಗೆ ನಡೆಸುವುದು ಇತ್ಯಾದಿ ಪ್ರತಿಭಟನಾ ಪ್ರದರ್ಶನಗಳಿಂದ ಜನಸಾಮಾನ್ಯರ ಮನಸ್ಸನ್ನು ಗೆಲ್ಲುವುದರಲ್ಲಿ ಜಯಶೀಲರಾದರು. 'ರಣಧೀರ ಕಂಠೀರವ' ಚಿತ್ರ ಹಿಮಾಲಯ ಚಿತ್ರಮಂದಿರದಲ್ಲಿ ಬಿಡುಗಡೆಯಾದಾಗ, ಬೇರೆ ಬೇರೆ ಚಿತ್ರಮಂದಿರಗಳ ಮುಂದೆ ನಿಂತು "ರಣಧೀರ ಕಂಠೀರವ ಕನ್ನಡ ಚಿತ್ರ ನೋಡಿ" ಎಂದು ಕೂಗುತ್ತ ಜನರನ್ನು ಹಿಮಾಲಯ ಚಿತ್ರಮಂದಿರದ ಕಡೆಗೆ ಕಳುಹಿಸುತ್ತಿದ್ದರು.

ಈ ಚಳುವಳಿಗಳೊಂದಿಗೆ ಕನ್ನಡದ ಸಮಸ್ಯೆಗಳನ್ನು ತೆಗೆದುಕೊಂಡು ಹೋರಾಟ ಮಾಡಹತ್ತಿದರು. ಕನ್ನಡ ಚಿತ್ರ ಪ್ರದರ್ಶನಗಳಿಗಾಗಿ ಹೋರಾಟ, ಕನ್ನಡದ




ನಾಮಫಲಕಗಳಿಗಾಗಿ ಹೋರಾಟ, ಗಡಿ ಸಮಸ್ಯೆ, ವಿಜಯನಗರದ ಉಕ್ಕು ಕಾರ್ಖಾನೆಗಾಗಿ ಪ್ರದರ್ಶನ, ಅಧಿಕ ರೈಲ್ವೆ ಸೌಲಭ್ಯಕ್ಕಾಗಿ ಆಗ್ರಹ –ಹೀಗೆ ಒಂದೇ ಎರಡೇ– ಅವರ ಹೋರಾಟಗಳಿಗಾಗಿ ಕಾರಣಗಳು? ವಾಟಾಳರು ಮಾಡಿದ ಹೋರಾಟ ನೂರಾರು ಸಾವಿರಾರು. ಸರ್ಕಾರದ ಅಧಿಕಾರಿಗಳನ್ನು ಕನ್ನಡದಲ್ಲೇ ವ್ಯವಹರಿಸಬೇಕೆಂದು ವಿಧಾನಸಭೆಯಲ್ಲಿ ದೊಡ್ಡ ದನಿಯಲ್ಲಿ ಕೂಗುತ್ತಿದ್ದ ಛಲದಂಕ ಮಲ್ಲ ಅವರು.

ಕನ್ನಡವನ್ನು ಕೇಳುವವರೇ ಇಲ್ಲದಾಗ ಕನ್ನಡಕ್ಕಾಗಿ ಪಾಂಚಜನ್ಯ ಊದಿದ ವಾಟಾಳ್ ನಾಗರಾಜ್ ತಮ್ಮ ಪ್ರತಿದಿನದ ಚಳುವಳಿಗಳಿಂದ ಮನೆಮಾತಾಗಿದ್ದರು. ಅವರು ಬಿತ್ತಿದ ಜನಜಾಗೃತಿ, ಕನ್ನಡ ಚಳುವಳಿಯ ಇತಿಹಾಸದಲ್ಲಿ ಸದಾ ಸ್ಮರಣೀಯ.

ಕನ್ನಡದ ಪ್ರಜ್ಞೆಗಾಗಿ, ಕನ್ನಡದ ಜಾಗೃತಿಗಾಗಿ ಅವರು ತಿಂದ ಬೂಟಿನ ಏಟು, ಲಾಠಿ ಏಟು, ಅನುಭವಿಸಿದ ಹಲವಾರು ಬಾರಿಯ ಪೋಲೀಸ್ ಬಂಧನ –ಇವೆಲ್ಲವೂ ಯಾವಾಗಲೂ ನೆನಪಿನಲ್ಲಿರುವಂತಹುದು.

ನಗರಸಭೆಯ ಸದಸ್ಯರಾಗಿ, ವಿಧಾನಸಭೆಯ ಸದಸ್ಯರಾಗಿ ಅಲ್ಲಿಯೂ ಸಹ ಕನ್ನಡದ ಹಿತ ಕಾಯುವಲ್ಲಿ, ಕನ್ನಡದ ರಕ್ಷಣೆಯಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ.



ತ.ರಾ.ಸು.

ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ತ.ರಾ. ಸುಬ್ಬರಾವ್ ಕಾದಂಬರಿ ಕ್ಷೇತ್ರದಲ್ಲಿ ಪ್ರಸಿದ್ಧರಾಗಿ ಕಾದಂಬರಿ ಪ್ರಿಯರ ಮನಗೆದ್ದಂತೆ, ಅವರ ಕಾದಂಬರಿಗಳು ಚಿತ್ರಣಗೊಂಡು ಚಿತ್ರಪ್ರೇಮಿಗಳ ಮನಸ್ಸನ್ನು ಗೆದ್ದರು. ಸಾಹಿತ್ಯ-ಚಲನಚಿತ್ರಗಳ ಕ್ಷೇತ್ರದಲ್ಲಿ ಅಪಾರ ಕಾಣಿಕೆ ನೀಡಿದ ತ.ರಾ.ಸು ಅವರು ಕನ್ನಡ ಚಳುವಳಿಯ ಹೋರಾಟದಲ್ಲಿಯೂ ಕ್ರಿಯಾತ್ಮಕವಾಗಿ ಭಾಗವಹಿಸಿ ಚಳುವಳಿಗೆ ಜೀವ ತುಂಬಿದರು.

ಹಲವಾರು ಪತ್ರಿಕೆಗಳ ಸಂಬಂಧವನ್ನು ಪಡೆದುಕೊಂಡಿದ್ದ ಅವರು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಒಂದು ವಿಶಿಷ್ಟ ಓದುಗ ವರ್ಗವನ್ನೇ ಸೃಷ್ಟಿಸಿಕೊಂಡಿದ್ದರು. ನೂರು ಕಾದಂಬರಿಗಳಿಗೂ ಹೆಚ್ಚಿನ ಸಾಹಿತ್ಯ ರಚನೆ ಮಾಡಿರುವ ತ.ರಾ.ಸು ಅವರ ಕೃತಿಗಳಲ್ಲಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ -ಹೀಗೆ ಎಲ್ಲ ಬಗೆಯ ಸಾಹಿತ್ಯ ಪ್ರಾಕಾರವನ್ನು ಕಾಣಬಹುದು.



'ಚಂದವಳ್ಳಿ ತೋಟ' ಶತದಿನೋತ್ಸವ ಸಮಾರಂಭದಲ್ಲಿ ರಾಜ್ ಅವರೊಂದಿಗೆ ತ.ರಾ.ಸು.

1964ರಲ್ಲಿ ತೆರೆಕಂಡ 'ಚಂದವಳ್ಳಿಯ ತೋಟ' ಅವರ ಅದೇ ಹೆಸರಿನ ಜನಪ್ರಿಯ ಕಾದಂಬರಿಯಾಗಿದ್ದು ಚಿತ್ರವೂ ಸಹ ಚಿತ್ರಪ್ರೇಮಿಗಳ ಮನಸೂರೆಗೊಂಡಿತು. ಅಷ್ಟೇ ಅಲ್ಲ, ಆ ಚಿತ್ರಕ್ಕೆ ರಾಷ್ಟ್ರಪತಿಗಳ ಬೆಳ್ಳಿಪದಕವೂ ಸಹ ಲಭಿಸಿತು.

ನಂತರದ ಮೂರು ವರ್ಷದಲ್ಲಿ ಅಂದರೆ 1967ರಲ್ಲಿ ಅವರ ಮತ್ತೊಂದು ಕಾದಂಬರಿ 'ಚಕ್ರತೀರ್ಥ'ವೂ ಸಹ ಚಿತ್ರವಾಗಿ ತೆರೆಕಂಡಿತು. ಈ ಚಿತ್ರಕ್ಕೆ ಶೀರ್ಷಿಕೆ ಗೀತೆಯನ್ನು ಅವರೇ ಬರೆದರು. ಅಲ್ಲದೆ ಚಿತ್ರ ಪ್ರಾರಂಭವಾಗುವ ಮುಂಚೆ ಅವರು ಬೆಳ್ಳಿತೆರೆಯ ಮೇಲೆಯೂ ಕಾಣಿಸಿಕೊಂಡು ಚಿತ್ರದ ಉದ್ದೇಶವನ್ನು ಸಹ ವೀಕ್ಷಕರಿಗೆ ತಿಳಿಸುವ ವಿಭಿನ್ನ ಪ್ರಯೋಗವನ್ನು ಈ ಚಿತ್ರದಲ್ಲಿ ಮಾಡಲಾಗಿತ್ತು.

ಮುಂದೆ ಅವರು ರಚಿಸಿದ ಇನ್ನಿತರ ಜನಪ್ರಿಯ ಕಾದಂಬರಿಗಳಾದ 'ಮಾರ್ಗದರ್ಶಿ', 'ಪುನರ್ಜನ್ಮ'ಗಳು ಚಿತ್ರಗಳಾಗಿ ವೀಕ್ಷಕರ ಮೆಚ್ಚುಗೆಯನ್ನು ಗಳಿಸಿದುವು.

1970ರಲ್ಲಿ ತಯಾರಾದ, ಅವರು ರಚಿಸಿದ ಅತ್ಯಂತ ಜನಪ್ರಿಯ ಕಾದಂಬರಿತ್ರಯಗಳಾದ 'ನಾಗರಹಾವು', 'ಎರಡು ಹೆಣ್ಣು ಒಂದು ಗಂಡು' ಮತ್ತು 'ಸರ್ಪ ಮತ್ಸರ' – 'ನಾಗರಹಾವು' ಚಿತ್ರವಾಗಿ ಬಿಡುಗಡೆಯಾಗಿ ಬಹು ಜನಪ್ರಿಯತೆಯನ್ನು ಪಡೆಯಿತು. ಈ ಚಿತ್ರದಲ್ಲಿ ನಟಿಸಿದ ವಿಷ್ಣುವರ್ಧನ್ ಅವರ ಪ್ರಥಮ ಚಿತ್ರ ಇದಾಗಿದ್ದು, ಮುಂದೆ ಅವರು ಅದ್ವಿತೀಯ ನಾಯಕ ನಟರೆನಿಸಿ ಕೀರ್ತಿವಂತರಾದರು.

1975ರಲ್ಲಿ ಜಿ.ವಿ. ಅಯ್ಯರ್ ನಿರ್ಮಿಸಿದ 'ಹಂಸಗೀತೆ', ದೊರೆ–ಭಗವಾನ್ ಅವರು ತಯಾರಿಸಿದ 'ಚಂದನದ ಗೊಂಬೆ', 'ಗಾಳಿಮಾತು', 'ಬೆಂಕಿಯ ಬಲೆ', 'ಬಿಡುಗಡೆಯ ಬೇಡಿ' ಇವುಗಳೂ ಸಹ ತ.ರಾ.ಸು ಅವರ ಜನಪ್ರಿಯ ಕಾದಂಬರಿಗಳ ಆಧಾರವಾಗಿತ್ತು.

ತ.ರಾ.ಸು ಅವರು ನಿಧನ ಹೊಂದಿದ ಮೇಲೆ ಅವರು ರಚಿಸಿದ 'ಮಸಣದ ಹೂವು' ಕಾದಂಬರಿಯನ್ನು ಆಧರಿಸಿ ಪುಟ್ಟಣ್ಣ ಕಣಗಾಲ್ ಅವರು ಚಿತ್ರ ನಿರ್ಮಾಣವನ್ನು ಆರಂಭಿಸಿದರು. ದುರದೃಷ್ಟವಶಾತ್, ಅದು ಪೂರ್ಣವಾಗುವ ಮುಂಚೆಯೇ ಪುಟ್ಟಣ್ಣ ವಿಧಿವಶರಾದುದು ಅತ್ಯಂತ ಖೇದದ ಸಂಗತಿ. ಆದರೆ ಪ್ರತಿಭಾನ್ವಿತ ಕೆ.ಎಸ್.ಎಲ್. ಸ್ವಾಮಿಯವರು (ರವೀ) ಮುಂದೆ ಆ ಚಿತ್ರವನ್ನು ಪೂರ್ಣವಾಗಿಸಿದರು.

1993ರಲ್ಲಿ ತ.ರಾ.ಸು ಅವರ ಮತ್ತೊಂದು ಜನಪ್ರಿಯ ಕಾದಂಬರಿ ಆಧಾರದ ಮೇಲೆ 'ಆಕಸ್ಮಿಕ' ಚಿತ್ರವನ್ನು ತಯಾರಿಸಲಾಯಿತು. ಡಾ. ರಾಜಕುಮಾರ್‌ರ ಉತ್ಕೃಷ್ಟಮಟ್ಟದ ಅಭಿನಯದ ಈ ಚಿತ್ರ ಅತ್ಯಂತ ಜನಪ್ರಿಯವಾಗಿ ಚಿತ್ರರಸಿಕರ ಮನಸೂರೆಗೊಂಡಿತು.

ಹೀಗೆ ಸಾಹಿತ್ಯ, ಚಿತ್ರರಂಗ ಎರಡರಲ್ಲಿಯೂ ತನ್ನ ವಿಶಿಷ್ಟ ಕಾಣಿಕೆ ನೀಡಿದ್ದ ತ.ರಾ.ಸು ಅವರು ಕನ್ನಡ ಚಳುವಳಿಗೆ ನೀಡಿದ ಕೊಡುಗೆಯೂ ಅಷ್ಟೇ ವಿಶಿಷ್ಟವಾದುದು.

ಕನ್ನಡ ಚಳುವಳಿಯ ಅನೇಕ ಹೋರಾಟಗಳಲ್ಲಿ ಭಾಗವಹಿಸಿ ಚಳುವಳಿಗೆ ಜೀವ ತುಂಬುತ್ತಿದ್ದವರು ತ.ರಾ.ಸು ಅವರು. ಕನ್ನಡ ಪಕ್ಷದ ಅಧ್ಯಕ್ಷರಾಗಿದ್ದ ಮ. ರಾಮಮೂರ್ತಿಯವರು ದುರಂತದಲ್ಲಿ ಮರಣ ಹೊಂದಿದಾಗ, ಶೂನ್ಯವಾಗಿದ್ದ ಆ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡವರು ತ.ರಾ. ಸುಬ್ಬರಾಯರು. ಅಷ್ಟೇ ಅಲ್ಲ, 1982ರಲ್ಲಿ ಗೋಕಾಕ್ ವರದಿ ಅನುಷ್ಠಾನಕ್ಕಾಗಿ ರಾಜ್ಯದಾದ್ಯಂತ ನಡೆದ ಚಳುವಳಿಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ ತ.ರಾ.ಸು ಅವರು ಚಳುವಳಿಗೆ ಜೀವ ತುಂಬಿದರು.

ರಾಜ್‌ಕುಮಾರ್ ಅಭಿಮಾನಿ ಸಂಘದ ಸಾ.ರಾ. ಗೋವಿಂದು, ಗೋವಿಂದಹಳ್ಳಿ ದೇವೇಗೌಡರು, ಜಿ. ನಾರಾಯಣಕುಮಾರ್, ಪ್ರಭಾಕರ ರೆಡ್ಡಿ, ಸಿ.ಕೆ. ರಾಮೇಗೌಡ, ಮೊದಲಾದವರು ಕನ್ನಡ ಚಳುವಳಿಗೆ ಶಕ್ತಿ ತುಂಬಿ, ಕನ್ನಡದ ಕಹಳೆ ಮೊಳಗಿಸಿ ಹೋರಾಟ ಮಾಡಿ ಗೋಕಾಕ್ ಚಳುವಳಿಗೆ ಬೆಂಬಲ ಕೊಟ್ಟರು.

ಮೈಸೂರಿನ ಪುರಭವನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ತ.ರಾ.ಸು ಅವರು "ನನಗೆ ಹೆಚ್ಚುದಿನ ಬದುಕುವ ಆಸೆ ಇಲ್ಲ, ಕನ್ನಡವನ್ನು ಬದುಕಿಸುತ್ತೇವೆಂಬ ವಚನವನ್ನು ಕೊಡಿ" ಎಂದು ತುಂಬಿದ ಸಭೆಯಲ್ಲಿ ಕೇಳಿಕೊಂಡರು.

ಚಿತ್ರಗಳಲ್ಲಿ ನಾಡು-ನುಡಿಯ ಬಗ್ಗೆ ಅಭಿಮಾನ ಉಕ್ಕಿಸುವ ಗೀತೆಗಳು

ಕನ್ನಡ ಚಳುವಳಿಯಿಂದ ಪ್ರಭಾವಿತರಾದ ಚಿತ್ರಸಾಹಿತಿಗಳು ಚಿತ್ರಗಳಲ್ಲಿ ನಾಡು, ನುಡಿ, ನೆಲ, ಜಲ, ಪ್ರಾಕೃತಿಕ ಸಿರಿ ಸಂಪತ್ತು ಮುಂತಾದವುಗಳನ್ನು ಬಳಸಿಕೊಂಡು ಸಾಹಿತ್ಯ ರಚನೆಯನ್ನು ಮಾಡಿದರು. ಪ್ರೇಕ್ಷಕರಲ್ಲಿ ಕನ್ನಡಾಭಿಮಾನವನ್ನು ಪ್ರಚೋದಿಸುವ ಗೀತೆಗಳನ್ನು ರಚಿಸಿದರು.

ಜಿ.ವಿ. ಅಯ್ಯರ್, ಕಣಗಾಲ್ ಪ್ರಭಾಕರಶಾಸ್ತ್ರಿ, ವಿಜಯ ನಾರಸಿಂಹ, ಚಿ. ಉದಯ ಶಂಕರ್, ಕು.ರಾ.ಸೀ., ಹುಣಸೂರು ಕೃಷ್ಣಮೂರ್ತಿ, ಸಿ.ವಿ. ಶಿವಶಂಕರ್, ಆರ್.ಎನ್. ಜಯಗೋಪಾಲ್ ಮುಂತಾದವರೆಲ್ಲಾ ತಮ್ಮ ಸಾಹಿತ್ಯ ರಚನೆಯಲ್ಲಿ ಕನ್ನಡಾಭಿಮಾನದ ಸಾಹಿತ್ಯ ರಚನೆಯಲ್ಲಿ ಪ್ರಮುಖರೆನಿಸಿದರು.

ಇಂತಹ ಚಿತ್ರದ ಕೆಲವು ಗೀತೆಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಚಿತ್ರ: ಕಣ್ತೆರೆದು ನೋಡು

ರಚನೆ: ಜಿ.ವಿ. ಅಯ್ಯರ್ ಗಾಯಕರು: ಜಿ.ಕೆ. ವೆಂಕಟೇಶ್

ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ ।
ತಾಯ್ನಾಡ ಜಯಭೇರಿ ನಾವಾಡ ಬನ್ನಿ ॥ಕನ್ನಡದ॥

ಗೆಳೆತನದ ವರದ ಹಸ್ತ ನೀಡಬನ್ನಿ ।
ಮೊಳೆತಿರುವ ಭೇದಗಳ ಬಿಟ್ಟು ಬನ್ನಿ ।
ಒಂದು ತಾಯಿಯ ಮಡಿಲ ಮಕ್ಕಳೆನ್ನಿ ।
ಒಂದು ತಾಯಿಯ ನುಡಿಯಾ ನುಡಿವೆವೆನ್ನಿ ॥

ಚಳುವಳಿಯ ಪರಾಕಾಷ್ಠೆಯ ದಿನಗಳಲ್ಲಿ ನಡೆಯುತ್ತಿದ್ದ ಸಭೆ-ಸಮಾರಂಭಗಳಲ್ಲೆಲ್ಲಾ ಈ ಹಾಡನ್ನು ಹಾಡಲಾಗುತ್ತಿತ್ತು. ಒಂದರ್ಥದಲ್ಲಿ ಈ ಗೀತೆ ಚಳುವಳಿ ಗೀತೆಯೇ ಆಗಿತ್ತೆಂದು ಹೇಳಬಹುದು.

ಚಿತ್ರ: ವೀರಸಂಕಲ್ಪ

ರಚನೆ: ಹುಣಸೂರು ಕೃಷ್ಣಮೂರ್ತಿ ಗಾಯಕರು: ಪಿ. ನಾಗೇಶ್ವರರಾವ್

ಹಾಡು ಬಾ ಕೋಗಿಲೆ
ನಲಿದಾಡು ಬಾರೆ ನವಿಲೆ,
ಸಿರಿಗನ್ನಡಾಂಬೆಯ ಜಯಧ್ವನಿ ಮೊಳಗಲೆ ।
ಹಾಡು ಬಾ ಕೋಗಿಲೆ
ನಲಿದಾಡು ಬಾರೆ ನವಿಲೇ... ॥ಪ॥

ಒಹೊ ಹೊ ಹೊ... ಓ... ಒಹೊ ಹೊ ಓ...
ಕನ್ನಡ ನಾಡು ನಮ್ಮದೆಂದು ।
ಕನ್ನಡಿಗರಿಗದೆ ಗುಡಿಯೆಂದು ॥

ಆ... ಆ... ಆ... ಆ...
ಕನ್ನಡ ನಾಡು ನಮ್ಮದೆಂದು
ಕನ್ನಡಿಗರಿಗದೆ ಗುಡಿಯೆಂದು
ಕಂಡ ಕಂಡವರ ಜಡತೆಯ ನೀಗಿ
ಗಂಡುಗಲಿಗಳಾ ತಂಡವ ಬೆಳೆಸೇ
– ಹಾಡು ಬಾ ಕೋಗಿಲೆ... ॥1॥

ಹಿಂದಿನ ಕೀರ್ತಿಯ ಗಳಿಸಿರೊ ಬಂದು ।
ಮುಂದಡಿ ಇಡುತ ನಡೆಯಿರೊ ಇಂದು ॥
ಮಾರ್ದನಿಗೊಳಲೈ ನಿನ್ನಯ ಸ್ವರವು ।
ಮುಗಿಲಿಗೇರಲಿ ಕನ್ನಡ ಧ್ವಜವೂ... ।
ಮಾರ್ದನಿಗೊಳಲೈ ನಿನ್ನಯ ಸ್ವರವು ।
ಮುಗಿಲಿಗೇರಲಿ ಕನ್ನಡ ಧ್ವಜವೂ... ।
– ಹಾಡು ಬಾ ಕೋಗಿಲೆ ॥2॥

ಚಿತ್ರ: ಪೋಸ್ಟ್ ಮಾಸ್ಟರ್

ರಚನೆ: ಜಿ.ವಿ. ಅಯ್ಯರ್ ಗಾಯಕರು: ಪಿ.ಬಿ. ಶ್ರೀನಿವಾಸ್

ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ ।
ಮುನ್ನಡೆವ ಕನ್ನಡದ ದಾರಿ ದೀವಿಗೆ ನೀಯೆ ॥ಕನ್ನಡದ॥

ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸಿ ।
ಕಾಮ ಕ್ರೋಧವನಳಿಸಿ ಕಾಪಾಡು ತಾಯಿ ॥
ಒಂದಾದ ದೇಹದಲಿ ಹೊಂದಿ ಬಾಳುವ ಸುತರ
ಹೊಸ ಬೆಸಗೆಯಲಿ ಬಿಗಿದು ಒಂದುಗೂಡಿಸೆ ತಾಯೆ ॥ಕನ್ನಡದ॥

ಯಾವೆಣ್ಣೆಯಾದರೂ ಬೆಳಗುವುದೆ ಗುಡಿ ಎಂಬ ।
ತತ್ವವನು ನೀ ಎತ್ತಿ ತೋರು ಬಾ ತಾಯೆ ॥
ಎದೆಯಾಂತರಾಳದಲಿ ಪುಟಿವ ಕಾರಂಜಿಯಲಿ
ಒಂದಾಗಿ ಕೂಗಲಿ ಕನ್ನಡ ॥ಕನ್ನಡದ॥

ಚಿತ್ರ: ನಮ್ಮ ಊರು

ರಚನೆ: ಪಿ.ವಿ. ಶಿವಶಂಕರ್ ಗಾಯಕರು: ಪಿ.ಬಿ. ಶ್ರೀನಿವಾಸ್

ಹೋಗದಿರೀ ಸೋದರರೆ ।
ಹೋಗಿದಿರೀ ಬಂಧುಗಳೇ ॥

ಮನೆಯನು ತೊರೆದು ಹೋಗುವಿರಾ ।
ಮನಗಳ ಮರೆತು ಅಗಲುವಿರಾ ।
ಇಲ್ಲಿಗೆ ಮುಗಿಯದು ಋಣಾನುಬಂಧ ।
ಊರಿನ ಸೋದರ ಸಂಬಂಧಾ ॥ಹೋಗದಿರೀ॥

ಹುಟ್ಟಿದ ಊರನು ಬಿಟ್ಟು ಹೋದರೆ
ಕಟ್ಟುವರಾರೀ ನಮ್ಮೂರ
ಕೆರೆ ಕಟ್ಟೆಯ ಬಯಸುವ ನಮ್ಮೂರ ॥ಹೋಗದಿರೀ॥

ಚಿನ್ನವ ಬೆಳೆಯುವ ಮಣ್ಣನು ಮರೆತು
ಅನ್ನಕೆ ಕೈಯನು ಚಾಚುವಿರಾ
ಹಿಡಿ ಅನ್ನಕೆ ಕೈಯನು ಚಾಚುವಿರಾ ।

ನಾವೆಲ್ಲ ಹುಟ್ಟಿ ಬೆಳೆದುದೇ ಇಲ್ಲಿ ।
ರಾಮಾಯಣವು ಬದುಕಿಹುದಿಲ್ಲಿ
ಮಹಾಭಾರತ ನಡೆದುದೇ ಇಲ್ಲಿ
ಕಲ್ಲು ಕಲ್ಲು ಕಥೆ ಹೇಳುವುದಿಲ್ಲಿ ॥ಹೋಗದಿರೀ॥

ನೀವೆಲ್ಲಿ ಹೋದರೂ ಬರಲೇಬೇಕು
ನಮ್ಮೂರಿನಲ್ಲೇ ಬದುಕಲುಬೇಕು
ಪರದೇಶದಲ್ಲೂ ಸ್ಥಳ ನಿಮಗಿಲ್ಲ
ಹುಟ್ಟಿದ ಊರೇ ನಮಗೆಲ್ಲಾ ॥ಹೋಗದಿರೀ॥

ಚಿತ್ರ: ಸ್ಪಂದನ

ರಚನೆ: ಸಿ.ವಿ. ಶಿವಶಂಕರ್ ಗಾಯಕರು: ಪಿ.ಬಿ. ಶ್ರೀನಿವಾಸ್ ಮತ್ತು ರಮಾ

ಹುಡುಗ: ಸಿರಿವಂತನಾದರೂ ಕನ್ನಡ ನಾಡಲ್ಲೆ ಮೆರೆವೆ ।
ಭಿಕ್ಷುಕನಾದರೂ ಕನ್ನಡ ನಾಡಲ್ಲೆ ಮೆರೆವೆ ॥

ಹುಡುಗಿ: ಸಿರಿವಂತಳಾದರೂ ಕನ್ನಡ ನಾಡಲ್ಲೆ ಮೆರೆವೆ ।
ಭಿಕ್ಷುಕಿಯಾದರೂ ಕನ್ನಡ ನಾಡಲ್ಲೆ ನುಡಿವೆ ॥
ಸಂಗೀತ ಕಲೆ ಮೆಚ್ಚಿ ವೀಣೆಯ ಪಿಡಿದೊಡೆ ।
ಶೃಂಗೇರಿ ಶಾರದೆಯ ಮಡಿಲಲ್ಲಿ ನಲಿವೆ ॥

ಹುಡುಗ: ವೀರಖಡ್ಗವ ಝಳಪಿಸುವ ವೀರನಾದೊಡೆ ।
ಚಾಮುಂಡಾಂಬೆಯ ಕರದಲ್ಲಿ ಹೊಳೆವೆ ॥ಸಿರಿವಂತ॥

ಹುಡುಗಿ: ಶರಣೆಗೆ ವಂದಿಪೆ ಶೂರ ನಾನಾದೊಡೆ ।
ವಚನವ ಬದುಕಿನ ಮಂತ್ರವೆನುವೆ ॥

ಹುಡುಗ: ವೀರೆಗೆ ವಂದಿಪೆ ಶೂರ ನಾನಾದೊಡೆ ।
ಕಲ್ಲಾಗಿ ಹಂಪೆಯಲಿ ಬಹುಕಾಲ ನಿಲುವೆ ॥ಸಿರಿವಂತ॥

ಹುಡುಗಿ: ದಾಸರಿಗೆ ವಂದಿಪೆ ಅಭಿಮಾನಿಯಾದೊಡೆ ।
ಕನ್ನಡ ಸಾಹಿತ್ಯ ನನ್ನಾಸೆ ಎನುವೆ ॥

ಪುಣ್ಯ ನದಿಯಲಿ ಮೀಯುವೆನಾದೊಡೆ ।
ಕಾವೇರಿ ತುಂಗೆಯರ ಮಡಿಲಲ್ಲಿ ನಲಿವೆ ॥

ಇಬ್ಬರು: ಮರುಜನ್ಮ ಪಡೆಯುವೆನಾದೊಡೆ ।
ಕನ್ನಡದ ಮಣ್ಣಲಿ ಮಣ್ಣಾಗಿ ನಿಲುವೆ ॥

ಚಿತ್ರ: ತಾಯಿಯ ಕರುಳು

ರಚನೆ: ಜಿ.ವಿ. ಅಯ್ಯರ್ ಗಾಯಕರು: ಪಿ.ಬಿ. ಶ್ರೀನಿವಾಸ್

ಬಾ ತಾಯಿ ಭಾರತಿಯೇ ಭವಭಾಗೀರಥಿಯೇ ।
ಹೃದಯವೀಣೆಯ ಮೀಟಿ ಮಧುರಗೀತೆಯ ನೀಡೆ ॥ಬಾ॥

ಕನ್ನಡದ ಕಸ್ತೂರಿ ತಿಲಕವಿಟ್ಟು ।
ಕನ್ನಡದ ಕಾವ್ಯಗಳ ಮಾಲೆ ತೊಟ್ಟು ।
ಕನ್ನಡದ ಕಾಲ್ಗೆಜ್ಜೆ ನಾದ ತೊಟ್ಟು ।
ಹೂ ನಡೆಯ ಭೂಮಿಯಲಿ ಹೆಜ್ಜೆಯಿಟ್ಟೂ ॥ಬಾ॥

ಕಾವೇರಿ ಕಾಲ್ತೊಳೆಯೆ ಕಾದಿರುವಳು
ಗೋದಾವರಿ ದೇವಿ ಹೂ ಮುಡಿಯುವಳು
ಒಡಲಲ್ಲಿ ಸಿಂಗರಿಸೆ ತುಂಗೆ ಇಹಳು
ಒಡನಾಡಿ ಭದ್ರೆ ಜೊತೆಗಿರುವಳೂ ॥ಬಾ॥

ಚಿತ್ರ: ಕಣ್ತೆರೆದು ನೋಡು

ರಚನೆ: ಜಿ.ವಿ. ಅಯ್ಯರ್ ಗಾಯಕರು: ಪಿ.ಬಿ. ಶ್ರೀನಿವಾಸ್

ಶರಣು ಕಾವೇರಿ ತಾಯೇ ಸರಿಯೇ ಕರುನಾಡ ಜೀವನದಿಯೇ ॥ಶರಣು॥

ತೆರೆತೆರೆಯಾಗಿ ಬರೆ ಸರಸರವಾಗಿ ನೊರೆ ।
ತುಂತುರು ತುಂತುರು ನೀರುದನಿ ಕಲಕಲ ಮಾಡೆ
ದನಿ ಪುರದ ಪುಣ್ಯವತಿ ಗಂಗೆ ತಾಯೇ
ಕರೆದು ಕಣ್ತೆರೆದು ನೋಡಲೆ ನೀಯೇ
ಕುರುಡು ಬಾಳಿನ ಸಾಗರದೊಂದೇ
ಹರಿಯಾ ನಾಮಾ ಹರಿಗೋಲಿಂದೆ ॥ಶರಣು॥

ಅಲೆಯ ಒಂದರಲಿ ಆಸೆಯು ಆರು
ಬಲೆಯು ತಾ ಬೀಳುತೆ ಜಾರು
ವಾದವು ಮೋಹ ತುಂಬಿದ ಮೇಲೆ
ಬದುಕು ಬಾಳೆ ಬರಿ ಸಂಕೋಲೆ ॥ಶರಣು॥

ಚಿತ್ರ: ಅನ್ನಪೂರ್ಣ

ಗಾಯಕರು: ಪಿ.ಬಿ. ಶ್ರೀನಿವಾಸ್

ಕನ್ನಡವೇ ತಾಯ್ನುಡಿಯು ಕರುನಾಡು ತಾಯ್ನಾಡು ।
ಕನ್ನಡಿಗನು ನೀನೆಂಬ ಅಭಿಮಾನವಿರಲೀ ॥
ನದಿಗಳೆನಿತೊ ಹರಿದು ತಾಯ ಪಾದ ತೊಳೆವ
ಎನ್ನ ಸಾರ್ಥಕ ಪಡೆವ ನಾಡೇ ನಿನ್ನದು ॥
ಹರಿಹರರು ಒಂದೆಂದು ನುಡಿದವರ ಕಲೆವೀಡ
ಕಾವ್ಯಗಂಗೆ ಹರಿವ ಪುಣ್ಯಭೂಮಿ ನಿನ್ನದು ।
ಪುಣ್ಯಭೂಮಿ ನಿನ್ನದು
ಶಿಲೆಯಲ್ಲಿ ಕಲೆಯನ್ನು ಕಂಡವರು ಸವಿನಾಮ ಲಲಿತಕಲೆಗಳ
ಭವ್ಯಗುಡಿಯು ನಿನ್ನದು
ನಾಡು ನುಡಿಯ ಮೇಲ್ಮೆಗೆ ಜೀವ ತೊರೆದು ದೇಶಕೆ
ಕೀರ್ತಿ ತಂದ ವೀರರಿದ್ದ ಭೂಮಿ ನಿನ್ನದು ॥

ಚಿತ್ರ: ಶರಪಂಜರ

ರಚನೆ: ಕಣಗಾಲ್ ಪ್ರಭಾಕರಶಾಸ್ತ್ರಿ ಗಾಯಕರು: ಪಿ.ಬಿ. ಶ್ರೀನಿವಾಸ್/ಪಿ. ಸುಶೀಲ

ಕೊಡಗಿನ ಕಾವೇರಿ ನೀ ಬೆಡಗಿನ ವೈಯ್ಯಾರಿ
ಕನ್ನಡ ಕುಲನಾರಿ ಕಾವೇರಿ ನೀ ಒಲವಿನ ಸಿಂಗಾರಿ ||ಪ||

ಋಷಿಜನ ಜೀವನ ತಪೋನಿಧಿ
ಕಾವೇರಿ, ನೀನೇ ಜೇನಿನ ಜೀವನದಿ
ರೈತರ ಬಾಳಿನ ಭಾಗ್ಯನಿಧಿ
ಕಾವೇರಿ, ನೀ ನಡೆಯುವ ನೆಲವೆಲ್ಲ ಪುಣ್ಯದ ಸನ್ನಿಧಿ ||1||

ಹಾಲಿನ ಹೊಳೆಯಾಗಿ ಹರಿಯೋಳೆ
ಕಾವೇರಿ, ನೀ ಬಾಳಿನ ಸುವ್ವಾಲಿ ಹಾಡೋಳೆ
ಚಿನ್ನದ ನಾಡಿನ ಹೊನ್ನಾಲೆ
ಕಾವೇರಿ ನೀ ನವರಸವಾಹಿನಿ ಗಿರಿಬಾಲೆ ||2||

ಗಂಧದ ಸೀಮೆಯ ಸೌಂದರ್ಯ ಲಹರಿ
ಕಾವೇರಿ, ನೀ ಗಂಧರ್ವ ಗಾನದ ಆನಂದಲಹರಿ
ಪತಿತ ಪಾವನ ಅಮೃತ ಲಹರಿ
ಕಾವೇರಿ, ನೀ ಲಲಿತ ಲತಾವನ ಶೃಂಗಾರಲಹರಿ ||3||

ಚಿತ್ರ: ವಿಜಯನಗರದ ವೀರಪುತ್ರ

ರಚನೆ: ಆರ್.ಎನ್. ಜಯಗೋಪಾಲ್ **ಗಾಯಕರು: ಪಿ.ಬಿ. ಶ್ರೀನಿವಾಸ್**

ಅರಳೆ ರಾಸಿಗಳಂತೆ ಹಾಲ್ಗಡಲ ಅಲೆಯಂತೆ
ಆಗಸದಿ ತೇಲುತಿದೆ ಮೋಡ
ನೆರೆ ನೋಟ ಹರಿದಂತೆ ಪಸರಿಸಿಹ ಗಿರಿಪಂಕ್ತಿ
ಹಸಿ ಹಸಿರು ವನರಾಶಿ ನೋಡ ॥

ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು
ಕರ್ನಾಟವಿದುವೆ ನೃತ್ಯ ಶಿಲ್ಪ ಕಲೆಯ ಬೀಡಿದು ॥

ಮಾತೆ ತುಂಗಭದ್ರೆ ಹರಿಯುತಿಹಳು ಇಲ್ಲಿ
ಮಾನವನ ಪಾಪವನು ತೊಳೆವ ಕಲ್ಪವಲ್ಲಿ ॥1॥

ದೇವ ವಿರೂಪಾಕ್ಷ ಈವ ನಮಗೆ ರಕ್ಷಾ
ಜೀವಿಗೆ ತಾ ನೀಡುವನು ಧರ್ಮದ ದೀಕ್ಷಾ ॥2॥

ಕಡಿದು ಸುತ್ತಮುತ್ತ ಇದ್ದ ಗೊಂಡಾರಣ್ಯ
ಸ್ಥಾಪಿಸಿದರು ವಿಜಯನಗರ ವಿದ್ಯಾರಣ್ಯ
ಹಕ್ಕಬುಕ್ಕರಾಳಿ ಭವ್ಯತೆಯನು ತಾಳಿ
ದಿಕ್ಕು ದಿಕ್ಕು ಶಾಂತಿ ಸುಖದ ಕಹಳೆಯ ಕೇಳಿ ॥3॥

ಚಿತ್ರ: ಗಂಧದ ಗುಡಿ

ರಚನೆ: ಚಿ. ಉದಯಶಂಕರ್ ಹಾಡಿದವರು: ಡಾ. ರಾಜಕುಮಾರ್

ಆ ಅಹ ಅಹ ಆಹಹಾ ।
ಓಹೋ ಹೋಹೋ ಓಹೋಹೋ ।
ನಾವಾಡುವ ನುಡಿಯೇ ಕನ್ನಡ ನುಡಿ ।
ಚಿನ್ನದ ನುಡಿ ಸಿರಿಗನ್ನಡ ನುಡಿ ।
ನಾವಿರುವಾ ತಾಣವೆ ಗಂಧದಗುಡಿ ।
ಅಂದದ ಗುಡಿ ಚೆಂದದ ಗುಡಿ ಶ್ರೀಗಂಧದ ಗುಡಿ ॥

ಹಸುರಿನ ಬನಸಿರಿಗೇ ಒಲಿದು ।
ಸೌಂದರ್ಯ ಸರಸ್ವತಿ ಧರೆಗಿಳಿದು ।
ಅಹಹಾ ಆಹಹಾ ಆಆ ಓಓ ।
ಹರಿಯುವ ನದಿಯಲಿ ಈಜಾಡಿ ।
ಹೂಬನದಲಿ ನಲಿಯುತ ಓಲಾಡಿ ।
ಚೆಲುವಿನ ಬಲೆಯಾ ಬೀಸಿದಳು ।
ಈ ಗಂಧದಗುಡಿಯಲಿ ನೆಲೆಸಿಹಳು ।
ಯಾರ ತಪಸಿನ ಫಲವೋ ।
ಈ ಕಂಗಳು ಮಾಡಿದ ಪುಣ್ಯವೋ ।
ಅಹಹಾ ಓ ಓ ಓ ॥

ಆಆ ಹಹಾಹಾ ಆಆ ಹಾಹಹಹಾ ।
ಚಿಮ್ಮುತ ಓಡಿವೆ ಜಿಂಕೆಗಳು ।
ಕುಣಿದಾಡುತ ನಲಿದಿವೆ ನವಿಲುಗಳು ॥
ಆಹಹಾ ಆಆಆ ಮುಗಿಲನು ಚುಂಬಿಸುವಾಸೆಯಲಿ ।
ತೂಗಾಡುತ ನಿಂತ ಮರಗಳಲಿ ।
ಹಾಡುತಿರೆ ಬಾನಾಡಿಗಳು ।
ಎದೆಯಲಿ ಸಂತಸದ ಹೊನಲು ।
ಇದು ವನ್ಯಮೃಗಗಳ ಲೋಕವೋ ।
ಈ ಭೂಮಿಗೆ ಇಳಿದ ನಾಕವೋ ।
ಓಹೋಹೋ ಆಆಆ ॥

ಚಿತ್ರ: ಆಕಸ್ಮಿಕ

ರಚನೆ: ಹಂಸಲೇಖ ಗಾಯಕರು: ಡಾ. ರಾಜಕುಮಾರ್

ಹುಟ್ಟಿದರೇ ಕನ್ನಡ ನಾಡಲ್ ಹುಟ್ಟಬೇಕು ।
ಮೆಟ್ಟಿದರೇ ಕನ್ನಡ ಮಣ್ಣನ್ ಮೆಟ್ಟಬೇಕು ॥ಪ॥
ಬದುಕಿದು ಜಟಕಾ ಬಂಡಿ ಇದು ವಿಧಿ ಓಡಿಸುವ ಬಂಡಿ... ॥ಹುಟ್ಟಿದರೆ॥

ಕಾಶೀಲಿ ಸ್ನಾನ ಮಾಡು । ಕಾಶ್ಮೀರ ಸುತ್ತಿ ನೋಡು ।
ಜೋಗಾದ ಗುಂಡಿ ಒಡೆಯ ನಾನೆಂದು ಕೂಗಿ ಹಾಡು ।
ಅಂಜತ ಎಲ್ಲೋರಾನಾ ಬಾಳಲ್ಲಿ ಒಮ್ಮೆ ನೋಡು ।
ಬಾದಾಮಿ ಐಹೊಳೆಯ ಚಂದಾನ ತೂಕ ಮಾಡು ॥
ಕಲಿಯೋಕೆ ಕೋಟಿ ಭಾಷೆ । ಆಡೋಕೆ ಒಂದೇ ಭಾಷೆ ।
ಕನ್ನಡಾ... ಕನ್ನಡಾ... ಕಸ್ತೂರಿ ಕನ್ನಡ

ಹುಟ್ಟಿದರೇ ಕನ್ನಡ ನಾಡಲ್ ಹುಟ್ಟಬೇಕು ।
ಮೆಟ್ಟಿದರೇ ಕನ್ನಡ ಮಣ್ಣನ್ ಮೆಟ್ಟಬೇಕು ॥

ಬದುಕಿದು ಜಟಕಾ ಬಂಡಿ । ಇದು ವಿಧಿ ಓಡಿಸುವಾ ಬಂಡಿ ।
ಬದುಕಿದು ಜಟಕಾ ಬಂಡಿ । ವಿಧಿ ಗುರಿ ತೋರಿಸುವಾ ಬಂಡಿ ॥

ಧ್ಯಾನಕ್ಕೆ ಭೂಮಿ ಇದು । ಪ್ರೇಮಕ್ಕೆ ಸ್ವರ್ಗ ಇದು ।
ಸ್ನೇಹಕ್ಕೆ ಶಾಲೆ ಇದು । ಜ್ಞಾನಕ್ಕೆ ಪೀಠ ಇದು ।
ಕಾರ್ಯಕ್ಕೆ ಕಲ್ಪ ಇದು । ಶಿಲ್ಪಕ್ಕೆ ತಲ್ಪ ಇದು ।
ನಾಟ್ಯಕ್ಕೆ ನಾಡಿ ಇದು । ನಾದಾಂತರಂಗವಿದು ।
ಕುವೆಂಪು ಬೇಂದ್ರೆಯಿಂದ ಕಾರಂತ ಮಾಸ್ತಿಯಿಂದ
ಧನ್ಯವೀ ಕನ್ನಡ... ಈ ನಾಡಿನಾ ಕನ್ನಡ ॥

ಹುಟ್ಟಿದರೇ ಕನ್ನಡ ನಾಡಲ್ ಹುಟ್ಟಬೇಕು ।
ಮೆಟ್ಟಿದರೇ ಕನ್ನಡ ಮಣ್ಣನ್ ಮೆಟ್ಟಬೇಕು ॥

ಬದುಕಿದು ಜಟಕಾ ಬಂಡಿ । ಇದು ವಿಧಿ ಓಡಿಸುವ ಬಂಡಿ ।
ಬದುಕಿದು ಜಟಕಾ ಬಂಡಿ । ವಿಧಿ ದಡ ಸೇರಿಸುವಾ ಬಂಡಿ ॥

ಬಾಳಿನ ಚೆನ್ನು ಹತ್ತಿ । ನೂರಾರು ಊರು ಸುತ್ತಿ ।
ಏನೇನೋ ಕಂಡ ಮೇಲೂ । ನಮ್ಮೂರೇ ನಮಗೆ ಮೇಲು ।
ಕೈಲಾಸಂ ಕಂಡ ನಮಗೆ । ಕೈಲಾಸ ಯಾಕೆ ಬೇಕು ।
ದಾಸರ ಕಂಡ ನಮಗೆ । ವೈಕುಂಠ ಯಾಕೆ ಬೇಕು ।
ಮುಂದಿನ ನನ್ನ ಜನ್ಮ । ಬರೆದಿಟ್ಟನಂತೆ ಬ್ರಹ್ಮ ।
ಇಲ್ಲಿಯೇ.... ಇಲ್ಲಿಯೇ.... ಎಂದಿಗೂ ನಾನಿಲ್ಲಿಯೇ ॥

ಹುಟ್ಟಿದರೇ ಕನ್ನಡ ನಾಡಲ್ ಹುಟ್ಟಬೇಕು ।
ಮೆಟ್ಟಿದರೇ ಕನ್ನಡ ಮಣ್ಣನ್ ಮೆಟ್ಟಬೇಕು ॥

ಬದುಕಿದು ಜಟಕಾ ಬಂಡಿ । ಇದು ವಿಧಿ ಓಡಿಸುವಾ ಬಂಡಿ ।
ಬದುಕಿದು ಜಟಕಾ ಬಂಡಿ । ವಿಧಿ ದಡ ಸೇರಿಸುವಾ ಬಂಡಿ ॥

ಚಿತ್ರಗಳಲ್ಲಿ ಕನ್ನಡ ಕವಿಗಳ ಗೀತೆಗಳು

ಕನ್ನಡ ಚಳುವಳಿಯಿಂದ ಕನ್ನಡ ಚಿತ್ರರಂಗಕ್ಕೆ ಹಲವಾರು ರೀತಿಯಿಂದ ಪ್ರಯೋಜನವಾಗಿದೆಯಷ್ಟೆ. ಚಳುವಳಿಯ ಆರಂಭಕ್ಕೆ ಮುಂಚೆ ಕನ್ನಡದ ಅನೇಕ ಸಾಹಿತಿಗಳು ಚಿತ್ರರಂಗದ ಸಂಬಂಧವನ್ನಿಟ್ಟುಕೊಂಡಿದ್ದರು. ಬೆಳ್ಳಾವಿ ನರಹರಿ ಶಾಸ್ತ್ರಿಗಳು, ದೇವುಡು ನರಸಿಂಹಶಾಸ್ತ್ರಿಗಳು ಮುಂತಾದ ಸಾಹಿತಿಗಳು ಚಿತ್ರರಂಗ ಮತ್ತು ಸಾಹಿತ್ಯ ಈ ಎರಡರಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಂತೆಯೇ ಪಿ.ಸೀ. ಚದುರಂಗ, ಟಿ.ಪಿ. ಕೈಲಾಸಂ, ಶಿವರಾಮ ಕಾರಂತರು ಹಾಗೂ ದ.ರಾ. ಬೇಂದ್ರೆ, ಅ.ನ.ಕೃ, ನಾಡಿಗೇರ ಕೃಷ್ಣರಾಯರು ಮುಂತಾದ ಸಾಹಿತ್ಯ ದಿಗ್ಗಜರೆಲ್ಲಾ ಸಾಹಿತ್ಯ ಕ್ಷೇತ್ರದಲ್ಲಿಯೇ ಅಲ್ಲದೆ ಚಲನಚಿತ್ರ ಕ್ಷೇತ್ರದಲ್ಲಿಯೂ ಸಹ ಕೈಯಾಡಿಸಿದ್ದರು.

ಆದರೆ ಅರವತ್ತರ ದಶಕದಲ್ಲಿ ಆರಂಭಗೊಂಡ ಚಳುವಳಿಯ ಪ್ರಭಾವದಿಂದಾಗಿ ಈ ಕನ್ನಡದ ಸುಪ್ರಸಿದ್ಧ ಸಾಹಿತಿಗಳು ರಚಿಸಿದ್ದ ಕವನಗಳನ್ನು ಕನ್ನಡ ಚಿತ್ರಗಳಲ್ಲಿ ಬಳಸಿಕೊಳ್ಳುವ ಪ್ರಕ್ರಿಯೆ ಆರಂಭವಾಯಿತು.

ಕುವೆಂಪು, ದ.ರಾ. ಬೇಂದ್ರೆ, ಪಿ. ಸೀತಾರಾಮಯ್ಯ, ಕೆ.ಎಸ್. ನರಸಿಂಹಸ್ವಾಮಿ, ಮುಂತಾದವರು ರಚಿಸಿದ್ದ ಗೀತೆಗಳನ್ನು 'ಕುಲವಧು' (1963), 'ತುಂಬಿದ ಕೊಡ' (1964), 'ಮಿಸ್ ಲೀಲಾವತಿ' (1965), 'ಅರಿಶಿನ ಕುಂಕುಮ' (1970) ಮುಂತಾದ ಚಿತ್ರಗಳಲ್ಲಿ ಅಳವಡಿಸಿಕೊಳ್ಳಲಾಯಿತು. ಜಿ.ಕೆ. ವೆಂಕಟೇಶ್, ವಿಜಯಭಾಸ್ಕರ್, ಆರ್. ಸುದರ್ಶನಂ, ಎಂ. ರಂಗರಾವ್ ಮುಂತಾದ ಸಂಗೀತ ನಿರ್ದೇಶಕರು ಈ ಕವನಗಳಿಗೆ ಇಂಪಾದ ರಾಗಸಂಯೋಜಿಸಿ ಚಿತ್ರ ರಸಿಕರಿಗೆ ಮೆಚ್ಚುಗೆಯಾಗುವಂತೆ ಅನೇಕ ಗೀತೆಗಳನ್ನು ನೀಡಿದರು.

ಕನ್ನಡದ ಇತರೇ ಪ್ರಸಿದ್ಧ ಕವಿಗಳಾದ ಪು.ತಿ.ನ, ಪ್ರೊ. ಜಿ.ಎಸ್. ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ –ಹೀಗೆ ಅನೇಕ ಹಿರಿಯ ಕವಿಗಳು ಹಾಗೂ ಪುರಂದರ ದಾಸರು, ಕನಕದಾಸರು, ಸರ್ವಜ್ಞ ಮುಂತಾದ ಹರಿದಾಸರು, ದಾರ್ಶನಿಕರ ರಚನೆಗಳನ್ನು, ಸಾಹಿತ್ಯರಂಗದಲ್ಲಿರುವ ಉತ್ತಮ ಕೃತಿಗಳನ್ನು ಚಿತ್ರಗೀತೆಗಳಾಗಿ ಬಳಸಿಕೊಳ್ಳುವ ಪ್ರಯತ್ನವನ್ನು ನಡೆಸಲಾಯಿತು.

ಅಂತಹ ಕೆಲವು ಕವನಗಳನ್ನು ಈ ಕೃತಿಯಲ್ಲಿ ಪ್ರಾತಿನಿಧಿಕವಾಗಿ ಪ್ರಕಟಿಸಲಾಗಿದೆ.

ಚಿತ್ರ: ಕುಲವಧು

ರಚನೆ: ಎ. ಸೀತಾರಾಮಯ್ಯ ಗಾಯಕರು: ಎಸ್. ಜಾನಕಿ

ನಮ್ಮ ಮನೆಯಂಗಳದಿ ಬೆಳೆದೊಂದ ಹೂವನ್ನು
ನಿಮ್ಮ ಮಡಿಲೊಳಗಿರಲು ತಂದಿರುವೆವು
ಕೊಳ್ಳಿರೀ ಮಗುವನ್ನು ನಿಮ್ಮ ಮನೆ ಬೆಳಕನ್ನು
ನಿಮ್ಮ ಮನೆಯನ್ನು ತುಂಬಿಲೊಪ್ಪಿಸುವೆವು ॥ಪ॥

ಮರೆ ಮೋಸ ಕೊಂಕುಗಳನರಿಯಳಿವಳು
ಇನಿಸವಿಶ್ವಾಸವನು ಕಂಡರಿಯಳು
ಕಷ್ಟಗಳ ಸೈಸದೆಯೆ ಕಾಣದೆಯೆ ಬೆಳೆದವಳು
ಸಲಹಿ ಕೊಳ್ಳಿರೀ ಮಗಳನೊಪ್ಪಿಸುವೆವು ॥1॥

ಹೆತ್ತವರ ಮನೆಗಿಂದು ಹೊರಗಾದೆ ನೀ ಮಗಳೆ
ಈ ಮನೆಯೆ ಈ ಇವರೆ ನಿನ್ನವರು ಮುಂದೆ
ಇವರೆ ತಾಯ್ಗಳು, ಸಖರು, ಭಾಗ್ಯವನು ಬೆಳೆಸುವರು
ಇವರ ದೇವರೆ ನಿನ್ನ ದೇವರುಗಳು ॥2॥

ನಿಲ್ಲು ಕಣ್ಣೊರೆಸಿಕೊಳ್ಳು, ನಿಲ್ಲು, ತಾಯ್, ಹೋಗುವೆವು
ತಾಯಿಯಿರಾ, ತಂದೆಯಿರಾ, ಕೊಳ್ಳಿರಿವಳ
ಎರಡು ಮನೆಗಳ ಹೆಸರು ಖ್ಯಾತಿಗಳು ಉಳಿವಂತೆ
ತುಂಬಿದಾಯುಷ್ಯದಲಿ ಬಾಳಿ ಬದುಕು ॥3॥

ಚಿತ್ರ: ಕುಲವಧು

ರಚನೆ: ಮಂಜೇಶ್ವರ ಗೋವಿಂದ ಪೈ **ಗಾಯಕರು: ಎಸ್. ಜಾನಕಿ**

ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ ।
ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ ॥ಪ॥

ನಮ್ಮ ತಪ್ಪುವೆನಿತೊ ತಾಳ್ವೆ ಅಕ್ಕರೆಯಿಂದೆಮ್ಮ ನಾಳ್ವೆ
ನೀನೇ ಕಣಾ ನಮ್ಮ ಬಾಳ್ವೆ ನಿನ್ನ ಮರೆಯಲಮ್ಮೆವು
ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮೆವು ॥1॥

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ
ಕನ್ನಡ ಕಸ್ತೂರಿಯನ್ನ ಹೊಸತು ಸಿರಿ ತೀಡದನ್ನ
ಸುರಭಿ ಎಲ್ಲ ನೀನದನ್ನ ನವಶಕ್ತಿಯನ್ನೆಬ್ಬಿಸು
ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು ॥2॥

ಕುಗ್ಗದಂತೆ ಹಿಗ್ಗಿದಂತೆ ನಿನ್ನ ಹೆಸರ ಟೆಕ್ಕೆಯಂ
ನೀಗದಂತೆ ಸಾಗಿದಂತೆ ನಿನ್ನ ನುಡಿಯ ಢಕ್ಕೆಯಂ
ನಮ್ಮೆಡೆಯಂ ತಾಯೆ ಒಲಿಸು ಎಲ್ಲರ ಬಾಯಲ್ಲಿ ನೆಲಸು
ನಮ್ಮ ಮನಮುನೊಂದೆ ಕಲಿಸು ಇದನೊಂದನೆ ಕೋರುವೆ
ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ಕೋರುವೆ ॥3॥

ಚಿತ್ರ: ತುಂಬಿದ ಕೊಡ

ರಚನೆ: ಕೆ.ಎಸ್. ನರಸಿಂಹಸ್ವಾಮಿ ಗಾಯಕರು: ಪಿ. ಕಾಳಿಂಗರಾವ್

ಅಂತಿಂಥ ಹೆಣ್ಣು ನೀನಲ್ಲ
ನಿನ್ನಂಥ ಹೆಣ್ಣು ಇನ್ನಿಲ್ಲ
ಹೆಡೆ ಹೆಡೆಯ ಸಾಲು ತುರುಬೆಲ್ಲ
ಗುಡಿನಿಂದ ಹೂವು ಮೇಲೆಲ್ಲ
ತೆರೆತೆರೆಯ ಹೊರಳು ಕುರುಳೆಲ್ಲ
ಸುಳಿಮಿಂಚು ಕಣ್ಣ ಹೊರಳೆಲ್ಲ ॥ಪ॥

ಎದೆಮಟ್ಟ ನಿಂತ ಹೂಬಳ್ಳಿ
ಎಷ್ಟೊಂದು ಹೂವು ಅದರಲ್ಲಿ...
ಉಸಿರುಸಿರು ಮೊಗ್ಗು ಹೂವೆಲ್ಲ
ನೀ ಬಳ್ಳಿ ಬೆಳಕು... ಬದುಕೆಲ್ಲ ॥1॥

ನಡುದಾರಿಯಲ್ಲಿ ನನ್ನೂರು
ಕುಡಿಮಿಂಚಿನೂರು ಹೊನ್ನೂರು
ಮುನ್ನೂರು ಮಿಂಚು ಹೊಳೆದಂತೆ
ನೀ ಬಂದರೆನಗೆ... ಸಿರಿವಂತೆ ॥2॥

ಬಲುದೂರ ದೂರ ನೀನಾಗಿ
ಹೊಂಗನಸು ನಡುವೆ ದನಿ ಕೂಗಿ
ಕಾದಿರಲು ನಾನು ನಿನಗಾಗಿ
ನೀ ಬರುವೆ ಚೆಲುವೆ... ಹೊಳೆಯಾಗಿ ॥3॥

ಚಿತ್ರ: ಮಿಸ್ ಲೀಲಾವತಿ

ರಚನೆ: ಕುವೆಂಪು ಗಾಯಕರು: ಎಸ್. ಜಾನಕಿ, ರಾಮಚಂದ್ರ

ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ
ಬೀಸುಗಾಳಿಗೆ ಬೀಳುತೇಲುವ ತೆರೆಯ ಮೇಗಡೆ ಹಾಯಲಿ ॥

ಹೊನ್ನ ಗಿಂಡಿಯ ಹಿಡಿದು ಕೈಯೊಳು ಹೇಮವಾರಿಯ ಚಿಮುಕಿಸಿ
ಮೇಘಮಾಲೆಗೆ ಬಣ್ಣವೀಯುತ ಯಕ್ಷಲೋಕವ ವಿರಚಿಸಿ
ನೋಡಿ ಮೂಡಣದಾ ದಿಗಂತದಿ ಮೂಡುವೆಣ್ಣಿನ ಮೈಸಿರಿ
ರಂಜಿಸುತ್ತಿದೆ ಚೆಲುವೆಯಾಕೆಗೆ ಸುಪ್ರಭಾತದ ಬಯಸಿರಿ ॥1॥

ಕೆರೆಯ ಅಂಚಿನ ಮೇಲೆ ಮಿಂಚಿನ ಹನಿಗಳುದುರಿ ಹಿಮಮಣಿ
ಮಿಂಚುತಿರ್ಪುವು ಮಾಡುತ್ತೈತಲೆ ಬಾಲ ಕೋಮಲ ದಿನಮಣಿ
ಹಸಿರು ಜೋಳದ ಹೊಲದ ಗಾಳಿಯು ತೀಡಿ ತಣ್ಣಗೆ ಬರುತಿದೆ
ಹುಡುಗಿ ಹಾಡುವ ಮತ್ತೆ ಕೋಕಿಲ ಮಧುರವಾಣಿಯ ತರುತಿದೆ ॥2॥

ದೂರ ಬೆಟ್ಟದ ಮೇಲೆ ತೇಲುವ ಬಿಳಿಯ ಮೋಡವ ನೋಡಿರಿ
ಅದನ ಹೋಲುತ ಅಂತೆ ತೇಲುತ ದೋಣಿಯಾಟವನಾಡಿರಿ
ನಾವು ಲೀಲಾ ಮಾತ್ರ ಜೀವರು ನಮ್ಮ ಜೀವನ ಲೀಲೆಗೆ
ನಿನ್ನೆ ನಿನ್ನೆಗೆ ಇಂದು ಇಂದಿಗೆ ಇರಲಿ ನಾಳೆಯು ನಾಳೆಗೆ ॥3॥

ಚಿತ್ರ: ಅರಿಶಿನ ಕುಂಕುಮ

ರಚನೆ: ದ.ರಾ. ಬೇಂದ್ರೆ ಗಾಯಕರು: ಡಾ. ಪಿ.ಬಿ. ಶ್ರೀನಿವಾಸ್

ಇಳಿದು ಬಾ ತಾಯೆ । ಇಳಿದು ಬಾ
ಹರನ ಜಡೆಯಿಂದ । ಹರಿಯ ಅಡಿಯಿಂದ ।
ಋಷಿಯ ತೊಡೆಯಿಂದ । ನುಸುಳಿ ಬಾ ॥ಪಲ್ಲವಿ॥

ದೇವ ದೇವರನು ತಣಿಸಿ ಬಾ ।
ದಿಗ್‌ದಿಗಂತದಲಿ ಹಣಿಸಿ ಬಾ ।
ಚರಾಚರಗಳಿಗೆ ಉಣಿಸಿ ಬಾ ।
ಇಳಿದು ಬಾ ತಾಯೇ ಇಳಿದು ಬಾ ॥ಅನುಪಲ್ಲವಿ॥

ನಿನಗೆ ಪೊಡಮೊಡುವೆ ।
ನಿನ್ನ ನಡು ತೊಡುವೆ ।
ಏಕೆ ಎಡೆ ತಡೆವೆ । ಸುರಿದು ಬಾ ।
ಸ್ವರ್ಗ ತೊರೆದು ಬಾ । ಬಯಲ ಜರೆದು ಬಾ ।
ಹಮ್ಮನಳಿದು ಬಾ ।
ಬಾರೆ ಬಾ ತಾಯೇ ಇಳಿದು ಬಾ ॥1॥

ದಯೆ ಇರದ ದೀನೆ ಹರೆಯಳಿದ ಹೀನೆ
ನೀರಿರದ ಮೀನೆ ಕರೆಕರೆವೆ ಬಾ
ಕರು ಕಂಡ ಕರುಳೆ । ಮಗದುಂಡ ಮರುಳೆ ।
ಉದ್ದಂಡ ಅರುಳೆ । ಸುಳಿಸುಳಿದು ಬಾ
ಶಿವಶುಭ್ರ ಕರುಣೆ । ಅತಿ ಕಂಚಿದರುಣೆ
ವಾತ್ಸಲ್ಯ ವರುಣೆ । ಇಳಿ ಇಳಿದು ಬಾ ॥2॥

ಸುರ ಸ್ವಪ್ನವಿದ್ದ । ಪ್ರತಿಬಿಂಬ ಬಿದ್ದ
ಉದ್ಬುದ್ಧ ಶುದ್ಧ ನೀರೆ ।
ಎಚ್ಚೆತ್ತ ಎದ್ದ ಆಕಾಶದುದ್ದ
ಧರೆಗಿಳಿಯ ಬಿದ್ದ ನೀ ಧೀರೆ ॥3॥

ಸಿರಿ ಪಾರಿಜಾತ । ವರ ಪರಿಜಾತ ।
ತಾರಾ ಕುಸುಮದಿಂದೆ ।
ವೃಂದಾರ ವಂದೆ । ಮಂದಾರ ಗಂಧೆ ।
ನೀನೆ ತಾಯಿ ತಂದೆ ।
ರಸಪೂರ್ಣ ಜನ್ಯೆ । ನೀನಲ್ಲ ಅನ್ಯೆ
ಸಚ್ಚಿದಾನಂದ ಕನ್ಯೆ ॥4॥

ಧುಮ್‌ದಿಲ್‌ವಾದಂತೆ ಧುಮುಕಿ ಬಾ ।
ನಿನ್ನ ಕಂದನ್ನ ಹುಡುಕಿ ಬಾ
ಹರಣ ಹೊಸದಾಗಿ ಹೊಳೆದು ಬಾ ।
ಬಾಳ ಬೆಳಕಾಗಿ ಬೆಳೆದು ಬಾ ।
ಇಳೆಗಿಳಿದು ಬಾ । ಇಳಿದು ಬಾ ।
ಶಂಭುಶಿವ ಹರನ ಬಿತ್ತೆ ಬಾ ।
ದತ್ತ ನರಹರಿಯೆ ಮತ್ತೆ ಬಾ ।
ಅಂಬಿಕಾತನಯನತ್ತೆ ಬಾ ॥ಇಳಿದು ಬಾ॥

ಕನ್ನಡ ಕಾದಂಬರಿ ಆಧಾರಿತ ಚಿತ್ರಗಳು

1962ರಲ್ಲಿ ಸುಮಾರು 12 ಚಿತ್ರಗಳು ತೆರೆಕಂಡವು. ಇದರಲ್ಲಿ ಪ್ರೇಕ್ಷಕರ ಗಮನ ಸೆಳೆದ ಚಿತ್ರವೆಂದರೆ 'ಕರುಣೆಯೇ ಕುಟುಂಬದ ಕಣ್ಣು'. ಇದು ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ಚಿತ್ರಿತವಾದ ಮೊದಲ ಕನ್ನಡ ಚಿತ್ರ ತಮ್ಮ ಕಾದಂಬರಿಗಳಿಂದ, ವಿಶಿಷ್ಟವಾದ ಓದುಗವರ್ಗವನ್ನೇ ಸೃಷ್ಟಿಸಿಕೊಂಡಿದ್ದ ಶ್ರೀ ಕೃಷ್ಣಮೂರ್ತಿ ಪುರಾಣಿಕರು ಬರೆದ ಜನಪ್ರಿಯ ಕಾದಂಬರಿ 'ಧರ್ಮದೇವತೆ' ಕನ್ನಡ ಚಿತ್ರ ಸಾಹಿತ್ಯಕ್ಕೆ ನೀಡಿದ ಮೊದಲ ಕಾಣಿಕೆ.

ಇದಾದ ನಂತರ ಇವರದೇ ಆದ ಹಲವಾರು ಕಾದಂಬರಿಗಳು –ಕುಲವಧು, ದೇವರ ಕೂಸು (ಬಂಗಾರಿ), ಪಾವನಗಂಗ, ಸನಾದಿ ಅಪ್ಪಣ್ಣ– ಚಿತ್ರಗಳಾಗಿ ತೆರೆಯ ಮೇಲೆ ಮೂಡಿಬಂದು ಚಿತ್ರ ಪ್ರೇಕ್ಷಕರ ಮನಗೆದ್ದವು. ಕಾಲಾನುಕ್ರಮದಲ್ಲಿ ಕನ್ನಡದ ಹಲವಾರು ಹಿರಿಯ ಸಾಹಿತಿಗಳು, ಕತೆಗಾರರ ಹಾಗೂ ನಾಟಕಕಾರರ ಕೃತಿಗಳು ಚಿತ್ರಗಳಿಗೆ ಕತೆಯನ್ನು ಒದಗಿಸಿದವು.

ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಾ. ಶಿವರಾಮ ಕಾರಂತ, ಪ್ರೊ. ಯು.ಆರ್. ಅನಂತಮೂರ್ತಿ, ಡಾ. ಎಸ್.ಎಲ್. ಭೈರಪ್ಪ, ಪ್ರೊ. ಎಲ್.ಎಸ್. ಶೇಷಗಿರಿರಾವ್, ಅ.ನ.ಕೃ, ತ್ರಿವೇಣಿ, ಎಂ.ಕೆ. ಇಂದಿರಾ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಭಾರತೀಸುತ –ಇವರೆಲ್ಲಾ ಕನ್ನಡ ಚಿತ್ರರಂಗದ ಮೇಲೆ ಪ್ರಭಾವವನ್ನು ಬೀರಿದರು. ತನ್ಮೂಲಕ ಕನ್ನಡ ಸಾಹಿತ್ಯ ಕಣಜದಲ್ಲಿ ಅಡಗಿರುವ ಉತ್ಕೃಷ್ಟ ಕಥಾರಾಶಿಯನ್ನು ಚಿತ್ರರಂಗ ಬಳಸಿಕೊಳ್ಳುವಂತಾಯಿತು. ಸಾಹಿತ್ಯ ಕ್ಷೇತ್ರಕ್ಕೂ ಚಿತ್ರರಂಗಕ್ಕೂ ಇರುವ ಈ ಬೆಸುಗೆ ಕನ್ನಡ ಚಿತ್ರರಂಗದಲ್ಲಿರುವಷ್ಟು ಇನ್ನಾವ ಭಾಷೆಯಲ್ಲಿಯೂ ಇಲ್ಲವೆನ್ನಬಹುದು.

ಆದರೆ ಒಂದು ವಿಷಾದದ ಸಂಗತಿ ಎಂದರೆ ಈಚೆಗೆ ಕನ್ನಡದಲ್ಲಿ ಹುದುಗಿರುವ ಸಾಹಿತ್ಯವನ್ನು ನಿರ್ಲಕ್ಷಿಸಿ ರೀಮೇಕ್ ಮಾಡುವ ಪದ್ಧತಿ ಆರಂಭವಾಗಿದೆ. ಸ್ವಮೇಕ್‌ಗಿಂತ ರೀಮೇಕ್ ಮಾಡುವ ಸಂಸ್ಕೃತಿ ಬರುತ್ತಿದೆ. ಇದರಿಂದ ಕನ್ನಡ ಸಂಸ್ಕೃತಿ ಹಾಳಾಗುತ್ತಿದೆ.

ಅರವತ್ತರ ದಶಕದಲ್ಲಿ ಡಬ್ಬಿಂಗ್ ಪಿಡುಗು ಹೆಚ್ಚಾಗಿ ಕನ್ನಡದ ಮೂಲ ಸಂಸ್ಕೃತಿಗೆ ಕೊಡಲಿ ಪೆಟ್ಟು ಬಿದ್ದಂತೆ ಈ ರೀಮೇಕ್ ಹಾವಳಿಯಿಂದ ಅದೇ ರೀತಿಯ ಪರಿಣಾಮವುಂಟಾಗುತ್ತಿದೆ. ಹಾಗಾಗಿ ಅಂದು ಅ.ನ.ಕೃ, ರಾಮಮೂರ್ತಿ ಅವರ ನೇತೃತ್ವದಲ್ಲಿ ಕನ್ನಡ ಚಿತ್ರಗಳನ್ನು ನಡೆಸಲು ನಡೆದ ಚಳುವಳಿಯ ಪುನರಾವರ್ತನೆಯಾಗಬೇಕಾಗಿದೆ.

ಕೆಲವು ಕಾದಂಬರಿ ಆಧಾರಿತ ಚಿತ್ರಗಳು

ಕೃಷ್ಣಮೂರ್ತಿ ಪುರಾಣಿಕ : ಕರುಣೆಯೇ ಕುಟುಂಬದ ಕಣ್ಣು, ಕುಲವಧು, ಬಂಗಾರಿ, ಪಾವನಗಂಗ, ಸನಾದಿ ಅಪ್ಪಣ್ಣ

ತ.ರಾ.ಸು : ಚಂದವಳ್ಳಿಯ ತೋಟ, ಮನಸ್ಸಿದ್ದರೆ ಮಾರ್ಗ, ಚಕ್ರತೀರ್ಥ, ಮಾರ್ಗದರ್ಶಿ, ನಾಗರಹಾವು, ಹಂಸಗೀತೆ, ಚಂದನದ ಗೊಂಬೆ, ಗಾಳಿಮಾತು, ಬಿಡುಗಡೆಯ ಬೇಡಿ, ಆಕಸ್ಮಿಕ, ಪುನರ್ಜನ್ಮ, ಬೆಂಕಿಯ ಬಲೆ, ಮಸಣದ ಹೂವು

ಶ್ರೀನಿವಾಸರಾವ್ ಕೊರಟಿ : ಮಿಸ್ ಲೀಲಾವತಿ

ಎ.ಎನ್. ಮೂರ್ತಿರಾವ್ : ಸುಬ್ಬಾಶಾಸ್ತ್ರಿ

ಅ.ನ.ಕೃ : ಸಂಧ್ಯಾರಾಗ

ಚದುರಂಗ : ಸರ್ವಮಂಗಳ, ಉಯ್ಯಾಲೆ

ತ್ರಿವೇಣಿ : ಹಣ್ಣೆಲೆ ಚಿಗುರಿದಾಗ, ಶರಪಂಜರ, ಬೆಳ್ಳಿಮೋಡ, ಹೂವು ಹಣ್ಣು, ಕಂಕಣ

ಆರ್ಯಾಂಭ ಪಟ್ಟಾಭಿ : ಕಪ್ಪು ಬಿಳುಪು, ಎರಡು ಮುಖ

ಹೆಚ್.ಡಿ. ದೇವೀರಯ್ಯ : ಬೆಳುವಲದ ಮಡಿಲಲ್ಲಿ

ಕೆ.ಎಸ್. ನರಸಿಂಹಸ್ವಾಮಿ (**ಕವನಗಳನ್ನು ಆಧರಿಸಿದ ಚಿತ್ರ**) : ಮೈಸೂರು ಮಲ್ಲಿಗೆ

ಕನ್ನಡದ ಮೂರು ಕತೆಗಾರರ ಆಧಾರಿತ ಚಿತ್ರ : ಕಥಾಸಂಗಮ
(ಮುನಿತಾಯಿ–ಈಶ್ವರಚಂದ್ರ, ಅತಿಥಿ–ವೀಣಾ ಶಾಂತೇಶ್ವರ, ಹಂಗು–ಗಿರಡ್ಡಿ ಗೋವಿಂದರಾಜ)

ಎಚ್.ಕೆ. ಅನಂತರಾವ್ : ಅಂತ

ವೆಂ.ಮು. ಜೋಷಿ ಅವರ ಕಥೆಯ ಆಧಾರ : ಮುತ್ತಿನಹಾರ

ಕುವೆಂಪು : ಕಾನೂರು ಸುಬ್ಬಮ್ಮ ಹೆಗ್ಗಡತಿ, ಬೆರಳ್‌ಗೆ ಕೊರಳ್

ದೇವುಡು ನರಸಿಂಹಶಾಸ್ತ್ರಿ : ಮಯೂರ

ವಿ. ಸೀತಾರಾಮಯ್ಯ : ಪಾಪ ಪುಣ್ಯ

ಎಂ.ಕೆ. ಇಂದಿರಾ : ಮುತ್ತು ಒಂದು ಮುತ್ತು, ಗೆಜ್ಜೆಪೂಜೆ, ಫಣಿಯಮ್ಮ, ಸದಾನಂದ

ಎನ್. ಪಂಕಜ : ಸಿಪಾಯಿ ರಾಮು

ಯು.ಆರ್. ಅನಂತಮೂರ್ತಿ : ಸಂಸ್ಕಾರ, ಘಟಶ್ರಾದ್ಧ, ಬರ

ವಿ.ಎಂ. ಇನಾಂದಾರ್ : ಮುಕ್ತಿ

ಎಸ್.ಎಲ್. ಭೈರಪ್ಪ : ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ

ಮ.ನ. ಮೂರ್ತಿ : ಸ್ವಯಂವರ, ಬಿಳೀ ಹೆಂಡ್ತಿ

ಭಾರತೀಸುತ : ಎಡಕಲ್ಲು ಗುಡ್ಡದ ಮೇಲೆ

ಪೂರ್ಣಚಂದ್ರ ತೇಜಸ್ವಿ : ಅಬಚೂರಿನ ಪೋಸ್ಟಾಫೀಸ್, ತಬರನ ಕಥೆ

ಗೊರೂರು ರಾಮಸ್ವಾಮಿ ಅಯ್ಯಂಗಾರ್ : ಭೂತಯ್ಯನ ಮಗ ಅಯ್ಯು, ಹೇಮಾವತಿ

ಎಂ.ಆರ್. ಶ್ರೀನಿವಾಸಮೂರ್ತಿ : ಮಹಾತ್ಯಾಗ

ಬಸವರಾಜ ಕಟ್ಟೀಮನಿ : ಮಾಡಿ ಮಡಿದವರು

ಟಿ.ಕೆ. ರಾಮರಾವ್ : ಬಂಗಾರದ ಮನುಷ್ಯ

ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಕಾಕನಕೋಟೆ

ಶಿವರಾಮ ಕಾರಂತ : ಚೋಮನದುಡಿ, ಚಿಗುರಿದ ಕನಸು, ಮಲೆಯ ಮಕ್ಕಳು

ಬಿ.ಜಿ.ಎಲ್. ಸ್ವಾಮಿ : ಕಾಲೇಜು ರಂಗ

ಉಷಾ ನವರತ್ನರಾಂ : ಹೊಂಬಿಸಿಲು

ಬಿ.ವಿ. ವೈಕುಂಠರಾಜು : ಆಕ್ರಮಣ

ತ.ಪು. ವೆಂಕಟರಾಮ್ : ಬಿಳಿಗಿರಿಯ ಬನದಲ್ಲಿ

ವ್ಯಾಸರಾಯ ಬಲ್ಲಾಳ : ಅನುರಕ್ತೆ

ಕನ್ನಡ ಚಿತ್ರರಂಗದ ದಿಗ್ಗಜರು





ಸುಂದರ ಪ್ರಕಾಶನ
ಚಿತ್ರಶ್ರೀ - 43 ಕಲಾಮಂದಿರ 5ನೇ ತಿರುವು ಅ ನ ಸುಬ್ಬರಾವ್ ರಸ್ತೆ ಹನುಮಂತನಗರ ಬೆಂಗಳೂರು - 560 019
080 - 6562 3165 2660 5796